
ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ



ವಿರೋಧ ಪಕ್ಷಗಳ ಉಪರಾಷ್ಟ್ರಪತಿ ಅಭ್ಯರ್ಥಿ

ಗೋಪಾಲಕೃಷ್ಣ ಗಾಂಧಿ

ಸಂಪುಟ 11 | ಸಂಚಿಕೆ 30 | ಪುಟ 16 | ಜುಲೈ 17-23, 2017 | ರೂ. 10/-

web: www.janashakthi.co.in | e-mail : js_weekly@yahoo.com



ಕೋಮುವಾದಿ ಚೂರಿ-ಇರಿತ ಸಾವಿರಾರು ಹಸಿವು-ಸಾವುಗಳನ್ನು ಮರೆಮಾಚಲು



ರೈತ-ದಲಿತ-ಕೂಲಿಕಾರರ ಐತಿಹಾಸಿಕ ಸಮಾವೇಶ

ದೊಕ್ಲಾಂ ವಿವಾದ: ಮಾತುಕತೆಯೊಂದೇ ದಾರಿ



"ಅಸಂಸದೀಯ" ಸಂಸದರ ಮೇಲೆ ಕ್ರಮ ಕೈಗೊಳ್ಳಿ



ನಿವೇಶನ-ರಹಿತರಿಗೆ ನಿವೇಶನಕ್ಕಾಗಿ ಧರಣಿ



ತ್ರಿಪುರಾ: ಕೆಂಪು ನೆಲದ ಸುತ್ತ

ಅಮರನಾಥ ಯಾತ್ರಿಕರ ಮೇಲೆ ನೀಚ ಭಯೋತ್ಪಾದಕ ದಾಳಿ: ಕೋಮು ವಿಭಜನೆಯ ಅವರ ಗುರಿ ಈಡೇರಬಾರದು

–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ಅಮರನಾಥ ಯಾತ್ರಿಕರ ಮೇಲೆ ಜುಲೈ 10 ರ ರಾತ್ರಿ ಭಯೋತ್ಪಾದಕರು ದಾಳಿ ಮಾಡಿದ್ದು, ಏಳು ಮಂದಿ ಹತರಾಗಿದ್ದಾರೆ, ಇವರಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚು, 19 ಮಂದಿ ಗಾಯಗೊಂಡಿದ್ದಾರೆ. ಇದೊಂದು ಅತ್ಯಂತ ನೀಚ ಹೇಡಿ ಕೃತ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ತಮ್ಮ ಬಂಧುಗಳನ್ನು ಕಳೆದುಕೊಂಡಿರುವ ಕುಟುಂಬಗಳಿಗೆ ಹಾರ್ದಿಕ ಸಂತಾಪಗಳನ್ನು ಮತ್ತು ಗಾಯಗೊಂಡಿರುವವರಿಗೆ ಸಹಾನುಭೂತಿಯನ್ನು ಪೊಲಿಟ್‌ಬ್ಯುರೊ ವ್ಯಕ್ತಪಡಿಸಿದೆ.

ಕಾಶ್ಮೀರದ ಜನತೆ ಅಮರನಾಥ ಯಾತ್ರೆ ತಮ್ಮ ಸಮ್ಮಿಶ್ರ ಪರಂಪರೆಯ ಭಾಗವೆಂದೇ ಸದಾ ಕಂಡಿದ್ದಾರೆ. ಯಾತ್ರಿಕರ ಮೇಲೆ ದಾಳಿ ಉಗ್ರಗಾಮಿಗಳ ನಡುವೆ ಧಾರ್ಮಿಕ ಉಗ್ರವಾದ ಬೆಳೆಯುತ್ತಿರುವುದರ ಸಂಕೇತ.

ಕೋಮು ವಿಭಜನೆಯನ್ನು ಆಳಗೊಳಿಸುವುದು ಈ ದಾಳಿಯ ಉದ್ದೇಶಗಳಲ್ಲಿ ಒಂದು. ಅವರ ಈ ಪ್ರಚೋದನೆ ಯಶಸ್ವಿಯಾಗದಂತೆ ನೋಡಿಕೊಳ್ಳುವುದು ಮಹತ್ವದ ಸಂಗತಿ. ಇದನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ ಹಾಗೂ ದೇಶದ ಇತರೆಡೆಗಳಲ್ಲಿ ಶಾಂತಿ ಮತ್ತು ಕೋಮು ಸೌಹಾರ್ದವನ್ನು ಕಾಯ್ದುಕೊಳ್ಳುವ ಮೂಲಕ ಸಾಧಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಬಿಜೆಪಿ ಸರಕಾರದ ವಿಫಲತೆಯೇ ಹೊಣೆ–ಯೆಚುರಿ

ಈ ದಾಳಿಯನ್ನು ಬಲವಾಗಿ ಖಂಡಿಸುತ್ತ, ಇದಕ್ಕೆ ಬಲಿಯಾದವರ ಕುಟುಂಬಗಳಿಗೆ ಸಂತಾಪ ವ್ಯಕ್ತಪಡಿಸಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಜಮ್ಮು ಮತ್ತು ಕಾಶ್ಮೀರದ ಪರಿಸ್ಥಿತಿಯನ್ನು ಬಿಜೆಪಿ ಸರಕಾರ ತಪ್ಪಾಗಿ ನಿರ್ವಹಿಸುತ್ತಿರುವುದು ಗಂಭೀರ ಆತಂಕದ ಸಂಗತಿ ಎಂದಿದ್ದಾರೆ.

ಅವರ ಕಣ್ಮುಂದೆಯೇ ಪರಿಸ್ಥಿತಿ ಹದಗೆಡುತ್ತ ಸಾಗಿದೆ. ಅಮರನಾಥ ಯಾತ್ರಿಕರ ಮೇಲೆ ಈ ಹಿಂದೆ ದಾಳಿ ನಡೆದದ್ದು 2010ರಲ್ಲಿ. ಅದೂ ನಡೆದದ್ದು ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಅಡಿಯಲ್ಲಿ ಎಂದು ನೆನಪಿಸಿರುವ ಅವರು ಕಾಶ್ಮೀರದಲ್ಲಿನ ಪರಿಸ್ಥಿತಿ ಈ ಮಟ್ಟಕ್ಕೆ ಏಕೆ ಬಂದಿದೆ ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ರಾಜ್ಯದಲ್ಲಿನ ಸನ್ನಿವೇಶವನ್ನು ಸರಿಯಾಗಿ ನಿರ್ವಹಿಸುವಲ್ಲಿ ವಿಫಲವಾಗಿರುವುದರಿಂದ ಈಗ ಮುಗ್ಧ ಜೀವಗಳು ಬಲಿಯಾಗುವಂತಾಗಿದೆ. ಇದಕ್ಕೆ ಬಿಜೆಪಿ ಸರಕಾರವೇ ಜವಾಬುದಾರ ಎಂದು ಅವರು ಹೇಳಿದ್ದಾರೆ.

ಉಗ್ರಗಾಮಿ ಶಕ್ತಿಗಳ ಸಂಚಿಗೆ ಬಲಿ ಬೀಳಬಾರದು–ಸೋದರಭಾವದ ಪರಂಪರೆಯನ್ನು ಎತ್ತಿ ಹಿಡಿಯಬೇಕು– ಕಾಶ್ಮೀರಿಗಳಿಗೆ ತರಿಗಾಮಿಯವರ ಕಳಕಳಿಯ ಮನವಿ

ಏಳು ಮಂದಿ ಯಾತ್ರಿಕರ ಹತ್ಯೆ ಮಾಡಿರುವಮತ್ತು ಹಲವರು ಗಾಯಗೊಳಿಸಿರುವ ದಾಳಿ ಕಾಶ್ಮೀರದ ಕೋಮು ಸೌಹಾರ್ದದ ಪರಂಪರೆಗೆ ಒಂದು ನಾಚಿಕೆಗೇಡಿನ ದೊಡ್ಡ ಪ್ರಹಾರ ಎಂದು ಸಿಪಿಐ(ಎಂ)ನ ಹಿರಿಯ ಕಾಶ್ಮೀರಿ ಮುಖಂಡ ಮತ್ತು ಶಾಸಕ ಎಂ.ವೈ. ತರಿಗಾಮಿ ಖೇದ ವ್ಯಕ್ತಪಡಿಸಿದ್ದಾರೆ.

'ನಮ್ಮ ರಾಜ್ಯ ಸದಾ ಕೋಮು ಸೌಹಾರ್ದದ, ಸೋದರಭಾವದ ಶ್ರೀಮಂತ ಪರಂಪರೆಯ ಬೀಡಾಗಿದೆ, ಅತ್ಯಂತ ಸಂಕ್ಷೋಭೆಯ ಕಷ್ಟಕರ ಘಟ್ಟದಲ್ಲೂ ಅದನ್ನು ಕಾಯ್ದುಕೊಂಡಿದೆ. ಈ ದಾಳಿ ರಾಜ್ಯದ ಬಹುಳತ್ವಕ್ಕೆ ಅಪಖ್ಯಾತಿ ತರುವ ಒಂದು ಪ್ರಯತ್ನ" ಎಂದು ಅವರು ಹೇಳಿದ್ದಾರೆ.

ಮುಂದುವರೆದು ಅವರು "ನಾವೆತ್ತ ಸಾಗುತ್ತಿದ್ದೇವೆ ಎಂದು ಕೇಳಿಕೊಳ್ಳಬೇಕಾಗಿದೆ, ಇಂತಹ ನೀಚ ಕೃತ್ಯಗಳ ಮೂಲಕ ನಾವು ಯಾರ ಮೇಲೆ ಗುರಿಯಿಡುತ್ತಿದ್ದೇವೆ, ಬೇರಾರ ಮೇಲೂ ಅಲ್ಲ, ನರಳುತ್ತಿರುವ ಕಾಶ್ಮೀರದ ಜನತೆಯ ಮೇಲೆಯೇ ಮತ್ತು ನಮ್ಮ ಅಸ್ಮಿತೆಯ ಬುನಾದಿಯ ಮೇಲೆಯೇ" ಎಂದು ಅವರು ಅತ್ಯಂತ ನೋವಿನಿಂದ ಹೇಳಿದ್ದಾರೆ.

ಅಮರನಾಥ ಯಾತ್ರೆ ದೀರ್ಘ ಕಾಲದಿಂದ ನಡೆದುಕೊಂಡು ಬಂದಿದೆ. ಕಾಶ್ಮೀರದ ಜನತೆಗೆ ಈ ಪರಂಪರೆ ಜೀವನಾಧಾರವೂ ಆಗಿದೆ, ಅವರು ಯಾತ್ರಿಗಳನ್ನು ಸ್ವಾಗತಿಸುವಲ್ಲಿ ಅತ್ಯಂತ ಉತ್ಸಾಹದಿಂದ ಮುಂಚೂಣಿಯಲ್ಲಿರುವವರು ಎಂದು ನೆನಪಿಕೊಳ್ಳುತ್ತ 'ಯಾತ್ರಿಗಳು ಯಾವುದೇ ರಾಜಕೀಯ ಅಜೆಂಡಾದೊಂದಿಗೆ ಬಂದಿಲ್ಲ, ಕಾಶ್ಮೀರದ ಜನತೆಗೆ ಭಾರತದ ಜನತೆಯೊಂದಿಗೆ ಯಾವುದೇ ವೈರತ್ವವಿಲ್ಲ. ಇಂತಹ ಬರ್ಬರ ಕೃತ್ಯಗಳು ಕಾಶ್ಮೀರದ ಜನತೆಯನ್ನು ಇನ್ನಷ್ಟು ಏಕಾಂಗಿಯಾಗಿಸುತ್ತವೆ" ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.

"ನಮ್ಮ ರಾಜ್ಯದ ಜನತೆ ನಮ್ಮ ಸೌಹಾರ್ದವನ್ನು ಛಿದ್ರಗೊಳಿಸುವ ಹತಾಶ ಪ್ರಯತ್ನ ನಡೆಸುತ್ತಿರುವ ಉಗ್ರವಾದದ ಶಕ್ತಿಗಳಿಗೆ ಬಲಿಬೀಳಬಾರದು ಎಂದು ನಾವು ಮನವಿ ಮಾಡಿಕೊಳ್ಳುತ್ತೇವೆ. ನಮ್ಮ ಅತಿ ದೊಡ್ಡ ಶಕ್ತಿ ನಮ್ಮ ಐಕ್ಯತೆಯಲ್ಲಿದೆ. ನಾವು ಛಿದ್ರಕಾರಿ ಶಕ್ತಿಗಳ ವಿರುದ್ಧ ಒಕ್ಕೊರಲಿನಿಂದ ನಮ್ಮ ದನಿಯನ್ನು ಎತ್ತಬೇಕು" ಎಂದು ಅವರು ಅತ್ಯಂತ ಕಳಕಳಿಯಿಂದ ಮನವಿ ಮಾಡಿದ್ದಾರೆ.

ಜಾನುವಾರು ಮಾರಾಟ ನಿಷೇಧಕ್ಕೆ ತಡೆಯಾಜ್ಞೆ–ಸುಪ್ರಿಂ ಕೋರ್ಟ್ ತೀರ್ಪಿಗೆ ಸ್ವಾಗತ

ಕೇಂದ್ರ ಸರಕಾರದ ಜಾನುವಾರು ಮಾರಾಟ ನಿಷೇಧ ಕಾನೂನಿನ ಮೇಲೆ ಮದ್ರಾಸ್ ಹೈಕೋರ್ಟ್ ನೀಡಿದ್ದ ತಡೆಯಾಜ್ಞೆಯನ್ನು ದೇಶದ ಸರ್ವೋಚ್ಚ ನ್ಯಾಯಾಲಯ ಎತ್ತಿ ಹಿಡಿದಿದೆ. ಇದನ್ನು ಸಿಪಿಐ(ಎಂ) ಸ್ವಾಗತಿಸಿದೆ. ದಿಲ್ಲಿ ಹೈಕೋರ್ಟಿನ ತಡೆಯಾಜ್ಞೆ ಜಾರಿಯಲ್ಲಿರುತ್ತದೆ ಮತ್ತು ಇಡೀ ದೇಶಕ್ಕೆ ಅನ್ವಯಿಸುತ್ತದೆ ಎಂದು ಸುಪ್ರಿಂ ಕೋರ್ಟ್ ಹೇಳಿದೆ.

ಇದು ಸರಕಾರ ಒಂದು ಸಂಕುಚಿತ ಅಜೆಂಡಾವನ್ನು ಎಷ್ಟು ತರಾತುರಿಯಿಂದ ಮುಂದೊತ್ತಲು ಪ್ರಯತ್ನಿಸಿದೆ, ಆಮೂಲಕ ಕೋಟ್ಯಂತರ ರೈತರ ಜೀವನಾಧಾರಗಳನ್ನು ಅಪಾಯಕ್ಕೊಡ್ಡಿದೆ ಎಂಬುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಹೇಳಿದೆ. ಸುಪ್ರಿಂ ಕೋರ್ಟ್ ಕೂಡ 'ಜನಗಳ ಜೀವನಾಧಾರಗಳನ್ನು ಅನಿಶ್ಚಿತತೆಗೆ ಒಳಪಡಿಸಲು ಸಾಧ್ಯವಿಲ್ಲ" ಎಂದಿದೆ. ಸರಕಾರ ಈ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳಬೇಕು, ಬೇಸಾಯದಲ್ಲಿ ತೊಡಗಿರುವ ಸಮುದಾಯದ ಮೇಲೆ ಸತತ ಹೊಡೆತಗಳನ್ನು ಹಾಕುವುದನ್ನು ನಿಲ್ಲಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ. ಈ ಕುರಿತಾಗಿಯೇ ಅಖಿಲ ಭಾರತ ಕಿಸಾನ್ ಸಭಾ ಸುಪ್ರಿಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿತ್ತು.

6 ಲಕ್ಷ ಅಂಗನವಾಡಿ ನೌಕರರ ದೇಶವ್ಯಾಪಿ ಪ್ರತಿಭಟನೆ

ಜುಲೈ 10 ರಂದು ದೇಶಾದ್ಯಂತ ಅಂಗನವಾಡಿ ನೌಕರರು ಮೋದಿ ಸರಕಾರದ ವಚನ ಭಂಗದ ವಿರುದ್ಧ ಭಾರೀ ಪ್ರತಿಭಟನೆ ನಡೆಸಿದ್ದಾರೆ. ಅಖಿಲ ಭಾರತ ಅಂಗನವಾಡಿ ನೌಕರರು ಮತ್ತು ಸಹಾಯಕಿಯರ ಒಕ್ಕೂಟ (ಎಐಎಫ್‌ಎಡಬ್ಲ್ಯುಹೆಚ್) ಕರೆಯ ಓಗೊಟ್ಟು 24 ರಾಕ್ಯಗಳಲ್ಲಿ 6 ಲಕ್ಷಕ್ಕೂ ಹೆಚ್ಚು ನೌಕರರು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿದರು.

ಹಲವು ರಾಜ್ಯಗಳಲ್ಲಿ ನೋಟೀಸುಗಳನ್ನು ಜಾರಿ ಮಾಡಿ, ಪರವಾನಿಗೆಗಳನ್ನು ನಿರಾಕರಿಸಿ ಮತ್ತಿತರ ವಿಧಾನಗಳಿಂದ ಪ್ರತಿಭಟನೆಗಳನ್ನು ತಡೆಯಲು ಪ್ರಯತ್ನಿಸಿದರೂ ದೊಡ್ಡ ಸಂಖ್ಯೆಯಲ್ಲಿ ಅಂಗನವಾಡಿ ನೌಕರರು ಬೀದಿಗಿಳಿದು ಪ್ರತಿಭಟಿಸುವುದನ್ನು ನಿಲ್ಲಿಸಲಾಗಲಿಲ್ಲ ಎಂದು ಎಐಅಡಬ್ಲ್ಯುಹೆಚ್ ಹೇಳಿದೆ. ಜಮ್ಮು–ಕಾಸ್ಮೀರದ ರಾಜಧಾನಿ ಶ್ರೀನಗರದಲ್ಲಿಯೂ ಪ್ರತಿಭಟನೆ ನಡೆಯಿತು. ಅಸ್ಸಾಂನಲ್ಲಿ ಬಾರೀ ಮಳೆಯನ್ನೂ ಲೆಕ್ಕಿಸದೆ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಯಿತು. ಹಲವು ಕಡೆಗಳಲ್ಲಿ ಬಂಧನಗಳೂ ನಡೆದವು.

ಅಂಗನವಾಡಿ ನೌಕರರು ಮತ್ತು ಸಹಾಯಕಿಯರಿಗೆ ಇದ್ದ ಏಕೈಕ ಸಾಮಾಜಿಕ ಭದ್ರತಾ ಕ್ರಮವಾದ 'ಅಂಗನವಾಡಿ ಕಾರ್ಯಕರ್ತಿ ಬಿಮಾ ಯೋಜನಾ'ವನ್ನು ಹಿಂತೆಗೆದುಕೊಂಡದ್ದು, ಮತ್ತು ಅಂಗನವಾಡಿಗಳನ್ನು ವೇದಾಮತ ಎಂಬ ದೊಡ್ಡ ಕಾರ್ಪೊರೇಟ್ ಕಂಪನಿಗೆ ಕೌಶಲ ಅಭಿವೃದ್ಧಿಗೆಂದು ವಹಿಸಿಕೊಡುವ ಒಪ್ಪಂದ ಇವೆರಡರ ವಿರುದ್ಧ ವಿಶೇಷವಾಗಿ ಆಕ್ರೋಶ ವ್ಯಕ್ತವಾಯಿತು.

ಮೋದಿಯವರ ಸರಕಾರ 'ಅಂಗನವಾಡಿ ಕಾರ್ಯಕರ್ತೆಯರ ಕೆಲಸದ ಪರಿಸ್ಥಿತಿಗಳ ಪರಾಮರ್ಶೆ ನಡೆಸಲಾಗುವುದು ಮತ್ತು ಪ್ರಿಫಲವನ್ನು ಹೆಚ್ಚಿಸಲಾಗುವುದು'ಎಂಬ ಭರವಸೆ ನೀಡಿ ಅಧಿಕಾರಕ್ಕೆ ಬಂದಿತ್ತು. ಆದರೆ ಈಗ 'ಪ್ರತಿಫಲವನ್ನು ಹೆಚ್ಚಿಸುವುದಿಲ್ಲ" ಎಂದು ಸ್ಪಷ್ಟವಾಗಿ ಸಆರಿದೆ. ಸರಕಾರದ ಪ್ರತಿನಿಧಿಗಳೂ ಇರುವ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ಯ 45ನೇ ಅಧಿವೇಶನ ಅಂಗನವಾಡಿ ನೌಕರರನ್ನು ಕಾರ್ಮಿಕರೆಂದು ಪರಿಗಣಿಸಬೇಕು, ಕನಿಷ್ಟ ಸಂಬಳ ಮತ್ತು ಪೆನ್ಶನ್‌ಗೆ ಅವರು ಅರ್ಹರಾಗಬೇಕು ಎಂದು ನಿರ್ಧರಿಸಿದ್ದರೂ ಅದನ್ನು ಕಡೆಗಣಿಸಲಾಗಿದೆ. 2011ರ ನಂತರ ಪ್ರತಫಲವೆಂಬ ಮೊತ್ತವನ್ನು ಪರಿಷ್ಕರಿಸಲಾಗಿಲ್ಲ, ಆದರೆ ಕೆಲಸದ ಅವಧಿಯನ್ನು ಮಾತ್ರ ಹೆಚ್ಚಿಸಿ, ಅಲ್ಪಾವಧಿ ಇದ್ದದ್ದನ್ನು ಪೂರ್ಣಾವಧಿ ಮಾಡಲಾಗಿದೆ.

ಈ ಬೇಡಿಕೆಗಳನ್ನು ನೆನಪಿಸಿರುವ ಈ ಯಶಸ್ವಿ ಪ್ರತಿಭಟನೆಗೆ ಅಂಗನವಾಡಿ ನೌಕರರನ್ನು ಅಭಿನಂದಿಸುತ್ತ ಎಐಅಡಬ್ಲ್ಯುಹೆಚ್ ಈ ಮೇಲಿನ ಹಂತಗಳ ಹೋರಾಟಗಳಿಗೆ ಅಣಿಯಾಗಬೇಕು ಎಂದು ಕರೆ ನೀಡಿದೆ. ದಿಲ್ಲಿಯಲ್ಲಿ ಅನಿರ್ದಿಷ್ಟ ಕಾಲದ ಧರಣಿ(ಪಡಾವ್) ನಡೆಸುವ ಬಗ್ಗೆ ಯೋಚಿಸುತ್ತಿರುವ ಒಕ್ಕೂಟ ಮಕ್ಕಳ ಆಹಾರ, ಆರೋಗ್ಯ ಮತ್ತು ಶಿಕ್ಷಣದ ಹಕ್ಕನ್ನು ರಕ್ಷಿಸಲು ಐಸಿಡಿಎಸ್ ಉಳಿಸುವ ಅಂಗನವಾಡಿ ನೌಕರರ ಹೋರಾಟವನ್ನು ಬೆಂಬಲಿಸಬೇಕು ವಿವಿಧ ಜನವಿಭಾಗಗಳ ಸಾಮೂಹಿಕ ಮತ್ತು ವರ್ಗಸಂಘಟನೆಗಳಿಗೆ ಮನವಿ ಮಾಡಿದೆ.

ಪೂಜಾ ವಸ್ತುಗಳಿಗೆ, ಕುಂಕುಮ, ಬಳೆಗಳಿಗೆ ಕೊಟ್ಟಿರುವ ಜಿಎಸ್‌ಟಿ ವಿನಾಯ್ತಿ 'ದಿವ್ಯಾಂಗ'ರ ಸಬಲೀಕರಣ ಸಾಧನಗಳಿಗೇಕಿಲ್ಲ?–ಅಂಗವಿಕಲರ ಹಕ್ಕುಗಳ ಸಂಘಟನೆಗಳ ಪ್ರಶ್ನೆ

ಪ್ರಧಾನಿಗಳು ಅಂಗವಿಕಲತೆ ಇರುವ ವ್ಯಕ್ತಿಗಳನ್ನು'ದಿವ್ಯಾಂಗ'ರೆಂದೇ ಕರೆಯಬೇಕೆಂದು ಹೇಳಿದ್ದರು. ಆದರೆ ಈ ಕಾಳಜಿ ಅವರಿಗೆ ಅನಿವಾರ್ಯವಾದ ಉಪಕರಣಗಳಿಗೆ ಜಿಎಸ್‌ಟಿ ದರಗಳನ್ನು ವಿಧಿಸುವಾಗ ಕಾಣಿಸುತ್ತಿಲ್ಲ ಎಂಬ ಬಗ್ಗೆ ಆಕ್ರೋಶ ವ್ಯಕ್ತವಾಗಿತ್ತು.

ಬ್ರೈಲ್ ಟೈಪ್‌ರೈಟರ್‌ಗಳು, ಕಾಗದ, ವ್ಹೀಲ್ ಚೆಯರ್‌ಗಳು, ಇತರ ನೆರವು ಉಪಕರಣಗಳಿಗೆ 5ರಿಂದ 18ಶೇ. ತೆರಿಗೆ, ಊರುಗೋಲು, ಸರ್ಜಿಕಲ್ ಬೆಲ್ಟ್, ದೇಹದ ಕೃತಕ ಭಾಗಗಳು, ಕಿವಿಗೆ ಬಳಸುವ ಉಪಕರಣಗಳು ಇತ್ಯಾದಿಗಳಿಗೆ 12% ಮತ್ತು ಅಂಗವಿಕಲರ ವಾಹನಗಳಿಗೆ,ಸಂವಹನ ಮುಂತಾದವುಗಳ ಸಮಸ್ಯೆಗಳನ್ನು ಪರಿಹರಿಸಲು ನೆರವಾಗುವ ಉಪಕರಣಗಳು/ಸಾಧನಗಳಿಗೆ 18% ಜಿಎಸ್‌ಟಿ ವಿಧಿಸಲಾಗಿದೆ.

ಮಾತು ಮತ್ತು ಕೃತಿಯ ನಡುವೆ ಇಂತಹ ಅಂತರಕ್ಕೆ ಆಕ್ರೋಶಕ್ಕೆ ಸ್ಪಷ್ಟೀಕರಣವಾಗಿ ಜುಲೈ 4ರಂದು ಜಿಎಸ್‌ಟಿ ಮಂಡಳಿಯ ಪರವಾಗಿ ಒಂದು ಹೇಳಿಕೆಯನ್ನು ಪ್ರಕಟಿಸಲಾಗಿದೆ. ಆದರೆ ಇದು ಸ್ಪಷ್ಟೀಕರಣ ನೀಡುವ ಬದಲು ಹುಸಿ ದಾವೆಗಳನ್ನೇ ಮುಂದಿಟ್ಟಿದೆ ಎಂದು ಅಂಗವಿಕಲರ ನಡುವೆ ಕೆಲಸ ಮಾಡುತ್ತಿರುವ ಸಂಘಟನೆಗಳು ದಿಗಿಲು ವ್ಯಕ್ತಪಡಿಸಿವೆ.

5% 'ರಿಯಾಯ್ತಿ ದರ'ವೇ ಎಂದು ಜಿಎಸ್‌ಟಿ ಮಂಡಳಿಯ ಹೇಳಿಕೆಯಲ್ಲಿರುವುದನ್ನು ಪ್ರಶ್ನಿಸುತ್ತ ಇದು ದಾರಿ ತಪ್ಪಿಸುವ ಮಾತು, ಜಿಎಸ್‌ಟಿಯ ಮೊದಲು ಅಂಗವಿಕಲರ ಕಾರುಗಳನ್ನು ಬಿಟ್ಟರೆ ಬೇರೆ ಯಾವ ಉಪಕರಣಕ್ಕೂ ಕರ, ತೆರಿಗೆ ಇರಲಿಲ್ಲ ಎಂಬ ಸಂಗತಿಯತ್ತ ಈ ಸಂಘಟನೆಗಳು ಮಂಡಳಿಯ ಗಮನ ಸೆಳೆದಿವೆ.

ಬಹಳಷ್ಟು ಪೂಜಾ ವಸ್ತುಗಳಿಗೆ ಸಂಪೂರ್ಣ ವಿನಾಯ್ತಿ ನೀಡಿರುವಾಗ, ಕುಂಕುಮ, ಬಳೆ ಬಿಂದಿ ಇತ್ಯಾದಿಗಳಿಗೂ ಜಿಎಸ್‌ಟಿ ವಿನಾಯ್ತಿ ನೀಡಿರುವಾಗ ವಿಕಲತೆ ಇರುವ ವ್ಯಕ್ತಿಗಳಿಗೆ ಅದನ್ನು ಮೀರಲು ಅಗತ್ಯವಾದ ಸಾಧನಗಳು/ ಉಪಕರಣಗಳು ಸಿಗದಿದ್ದರೆ ಅವರ ಚಲನೆ, ಶಿಕ್ಷಣ, ಉದ್ಯೋಗ, ಹಕ್ಕುಗಳ ಚಲಾವಣೆ, ಕರ್ತವ್ಯಗಳ ಪಾಲನೆ ಎಲ್ಲವೂ ಕುಂಠಿಗೊಳ್ಳುವುದಾದರೂ, ಅವಕ್ಕೆಲ್ಲ 5% ಜಿಎಸ್‌ಟಿ ವಿಧಿಸಿರುವ ಬಗ್ಗೆ ಅವು ಆಶ್ಚರ್ಯ ವ್ಯಕ್ತಪಡಿಸಿವೆ.

ನಯಗೊಳಿಸದ ವಜ್ರಗಳಿಗೆ 0.25%, ನುಣುಪುಗೊಳಿಸಿದ ವಜ್ರ ಮತ್ತು ಬಂಗಾರಕ್ಕೆ 3% ಜಿಎಸ್‌ಟಿ ನಿಗದಿ ಪಡಿಸಿರುವ ಮಂಡಳಿ ಅಂಗವಿಕಲರು ಮತ್ತು ವಯಸ್ಸಾದವರು ಬಳಸುವ ಡಯಾಪರ್‌ಗಳಿಗೆ 12% ಜಿಎಸ್‌ಟಿ ವಿಧಿಸಿದೆ! ಇವೆಲ್ಲ ಈ ಸರಕಾರದ ಆದ್ಯತೆಗಳು ಏನು ಎಂಬುದನ್ನು ಬಯಲುಗೊಳಿಸಿವೆ ಎಂದು ಈ ಸಂಘಟನೆಗಳು ಖೇದ ವ್ಯಕ್ತಪಡಿಸಿವೆ.

ವಾಸ್ತವವಾಗಿ ಅಂಗವಿಕಲರ ಬಳಕೆಯ ಸಾಧನಗಳಿಗೆ 5ರಿಂದ 18ಶೇ.ದ ವರೆಗೆ ಜಿಎಸ್‌ಟಿ ವಿಧಿಸಲಾಗಿತ್ತು. ಜೂನ್11ರ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಕೇರಳ ಮತ್ತು ತ್ರಿಪುರಾದ ಹಣಕಾಸು ಮಂತ್ರಿಗಳು ಇದನ್ನು ಎತ್ತಿದ ಮೇಲೆಯೇ ಈ 5ಶೇ.ದ 'ರಿಯಾಯ್ತಿ' ದರವನ್ನು ನಿಗದಿಪಡಿಸಲಾಯಿತು ಎಂಬ ಸಂಗತಿಯತ್ತವೂ ಈ ಸಂಘಟನೆಗಳು ಗಮನ ಸೆಳೆದಿವೆ.

ಜಿಎಸ್‌ಟಿ ಮಂಡಳಿ ನೀಡಿದ ಮತ್ತೊಂದು ಸಮಜಾಯಿಷಿ ಎಂದರೆ ಈ ಉಪಕರಣಗಳ ದೇಶೀ ಉತ್ಪಾದಕರಿಗೆ ನೆರವಾಗಲು ಈ ದರ'ಗಳನ್ನು ಅನಿವಾರ್ಯವಾಗಿ ವಿಧಿಸಲಾಗಿದೆ ಎಂಬುದು. ಆದರೆ ಇವುಗಳಲ್ಲಿ ಬಹಳಷ್ಟು ಆಧುನಿಕ ಉಪಕರಣಗಳು ಆಮದಾಗುವಂತವು. ಇಲ್ಲಿ ಉತ್ಪಾದಿಸುವ ಸಾಧನಗಳ ವಿಷಯದಲ್ಲೂ ಇದಕ್ಕಾಗಿ ಬಡ ಬಳಕೆದಾರರ ಮೇಲೆ ಹೊರೆ ಹಾಕಬೇಕಿಲ್ಲ, ಈ ಮೊದಲು ಕೂಡ ದೇಶೀ ಉತ್ಪಾದಕರ ಹಿತಗಳಿಗೆ ಗಮನ ನೀಡಲಾಗಿತ್ತು, ಅವರು ಬಳಸುವ ಅಲುಮಿನಿಯಂ ಇತ್ಯಾದಿ ಕಚ್ಚಾಸಾಮಗ್ರಿಗಳಿಗೆ ವಿನಾಯ್ತಿ ನೀಡಲಾಗಿತ್ತು ಎಂದೂ ಅಂಗವಿಕಲರ ನಡುವೆ ಕೆಲಸ ಮಡುವ ಸಂಘಟನೆಗಳು ಜಿಎಸ್‌ಟಿ ಮಂಡಳಿಯ ಈ ಸಮಜಾಯಿಷಿಯ ಮತ್ತೊಂದು ಹುಸಿ ತರ್ಕವನ್ನು ಬಯಲಿಗೆಳೆದಿದೆ.

ಸಂಪಾದಕೀಯ

“ಅಸಂಸದೀಯ” ಸಂಸದರ ಮೇಲೆ ಕ್ರಮ ಕೈಗೊಳ್ಳಿ!

ದಕ್ಷಿಣ ಕನ್ನಡದಲ್ಲಿ ಬಂಟ್ವಾಳದಲ್ಲಿ ಚೂರಿ ಇರಿತ, ಕೊಲೆ, ದಾಳಿಗಳು ಮುಂತಾದ ಆಗಾಗ ನಡೆಯುತ್ತಿದ್ದ ಅಪರಾಧದ ಘಟನೆಗಳು ನಿಂತು ಶಾಂತಿ ಮೂಡುವ ಸೂಚನೆಗಳು ಕಾಣುತ್ತಿದ್ದಂತೆ, ಬಿಜೆಪಿ ಸಂಸದರು, ಶಾಸಕರು, ನಾಯಕರು ಪ್ರಚೋದನಕಾರಿ ಹೇಳಿಕೆಗಳ ಮೂಲಕ ಪುನಃ ಅಶಾಂತಿ ಮೂಡಿಸುವ ಬೆಂಕಿ ಹಚ್ಚುವ ಕೆಲಸ ಆರಂಭಿಸಿದ್ದಾರೆ. ಕೊಲೆಯಾಧ ಆರೆಸ್ಸೆಸ್ ಕಾರ್ಯಕರ್ತ ಶರತ್ ಹಂತಕರನ್ನು ಬಂಧಿಸಬೇಕು ಎಂದು ಜಾರಿಯಲ್ಲಿರುವ ಸೆಕ್ಶನ್ 144 ಮುರಿದ ಪ್ರತಿಭಟನಾ ಮೆರವಣಿಗೆಯ ನಾಯಕತ್ವವನ್ನು ಬಿಜೆಪಿ ಸಂಸದರೇ ವಹಿಸಿದ್ದರು. ಎರಡೂ ಕೋಮುಗಳ ವ್ಯಕ್ತಿಗಳು ಹಲ್ಲೆ, ಕೊಲೆಗಳಿಗೆ ಗುರಿಯಾಗಿದ್ದರೂ ‘ಹಿಂದೂ’ ಮತ್ತು ಸಂಘಿ ಕಾರ್ಯಕರ್ತರ ಬಗ್ಗೆ ಮಾತ್ರ ದಾಂಧಲೆ ಎಬ್ಬಿಸುತ್ತಾ, ಜಿಲ್ಲಾ ಉಸ್ತುವಾರಿ ಸಚಿವರು ಕರೆದಿರುವ ಶಾಂತಿ ಸಭೆಯನ್ನು ಬಿಜೆಪಿ ಬಹಿಷ್ಕರಿಸಿದೆ. ಒಂದು ಕಡೆ ಸರಕಾರ ದಾಳಿ, ಕೊಲೆ, ದೊಂಬಿಗಳನ್ನು ನಿಯಂತ್ರಿಸುವಲ್ಲಿ ವಿಫಲವಾಗಿದೆ ಎಂದು ಕೂಗಾಡುತ್ತಾ, ಇನ್ನೊಂದು ಕಡೆ ಪೋಲಿಸ್ ಮತ್ತು ಆಡಳಿತದ ಅಧಿಕಾರಿಗಳನ್ನು ಸರಕಾರವನ್ನು ಅಸಹ್ಯ ಭಾಷೆಯಲ್ಲಿ ಬಯ್ಯುತ್ತಾ ಹೀಗಳೆಯುತ್ತಾ ಹಲವು ಕಡೆ ಅವರನ್ನು ತಮ್ಮ ಕರ್ತವ್ಯ ಮಾಡುವಲ್ಲಿ ಅಡೆತಡೆ ಉಂಟು ಮಾಡುತ್ತಾ ತಾವೇ ದೊಂಬಿ ಮಾಡುತ್ತಿದ್ದಾರೆ. ಶರತ್ ಶವಯಾತ್ರೆಯಲ್ಲಿ ಕಲ್ಲು ತೂರಾಟ ನಡೆಸಿದ ಸಂಬಂಧ ಶಂಕಿತರ ಮೇಲೆ ಎಫ್.ಐ.ಆರ್., ಹಾಕಿ ಬಂಧಿಸಲು ಹೊರಟಾಗ ಅದನ್ನು ಟೀಕಿಸಿದ್ದು ಮಾತ್ರವಲ್ಲದೆ ಅಡ್ಡಿಪಡಿಸಿದರಂತೆ. ಹೀಗೆ ಬಿಜೆಪಿ ಮತ್ತು ಸಂಘ ಪರಿವಾರದ ನಾಯಕರು ತಮ್ಮ ನಗ್ನ ಕೋಮುವಾದವನ್ನು ಪದೇ ಪದೇ ಪ್ರದರ್ಶಿಸುತ್ತಿದ್ದಾರೆ.

ಸಾಲದೆಂಬಂತೆ ಜಿಲ್ಲೆಯ ಹಲವು ಕಡೆ ಸಭೆಗಳನ್ನು ನಡೆಸಿ ಅತ್ಯಂತ ಅಸಹ್ಯ ‘ಅಸಂಸದೀಯ’ ಭಾಷೆ ಬಳಸಿ ಪ್ರಚೋದನಕಾರಿ ಭಾಷಣ ಮಾಡುತ್ತಾ ಬಿಜೆಪಿ ಸಂಸದರು ಮುಖ್ಯಮಂತ್ರಿ, ಮಂತ್ರಿಗಳು, ಅಧಿಕಾರಿಗಳನ್ನು ಬಯ್ಯುತ್ತಾ ತಿರುಗಾಡುತ್ತಿದ್ದಾರೆ. ಇದರಲ್ಲಿ ಮುಂಚೂಣಿಯಲ್ಲಿ ಇರುವುದು ಉಡುಪಿ ಸಂಸದೆ ಶೋಭಾ ಕರಂದ್ಲಾಜೆ. “ನಮ್ಮ ಜಿಲ್ಲೆಯಲ್ಲಿ ಏನೇ ಆದರೂ ನೋಡ್ಕೊಂಡು ಸುಮ್ಮನಿರಲು ದಕ್ಷಿಣ ಕನ್ನಡ ಜಿಲ್ಲೆಯವರು ಷಂಡರಾ?” ಎಂದು ಅವರು ಹೇಳಿದ್ದಾರೆಂದು ವರದಿಯಾಗಿದೆ. ಇದು ಅಸಂಸದೀಯ, ಅಸೂಕ್ಷ್ಮ, ತೃತೀಯ ಲಿಂಗಿಗಳಿಗೆ ಅವಮಾನಕಾರಿ, ಮಹಿಳಾ–ವಿರೋಧಿ ಮಾತ್ರವಲ್ಲ, ಪ್ರಚೋದನಕಾರಿ ಹೇಳಿಕೆ ಸಹ. “ಒಂದು ವೇಳೆ ಪ್ರಭಾಕರ್ ಭಟ್ ಹಾಗೂ ನನ್ನನ್ನು ಮುಟ್ಟಿದ್ದೇ ಆದಲ್ಲಿ, ಅದು ಕಾಂಗ್ರೆಸ್ ಶವ ಪೆಟ್ಟಿಗೆಯ ಮೇಲಿನ ಕೊನೆಯ ಮೊಳೆ ಆಗಲಿದೆ’ ಎಂಬ ಎಚ್ಚರಿಕೆ ಕೊಡುವುದು ಸಂಸದರಿಗೆ ಶೋಬೆ ತರುವಂತಹದ್ದಲ್ಲ. ಪ್ರಭಾಕರ ಭಟ್ ಮೇಲೆ ಕೋಮು–ಪ್ರಚೋದನಕಾರಿ ಭಾಷಣ ಮಾಡಿದ್ದು ಸೇರಿದಂತೆ ಹಲವು ಕೇಸುಗಳು ಇವೆ ಎಂಬ ಹಿನ್ನೆಲೆಯಲ್ಲಿ ಈ ಎಚ್ಚರಿಕೆ ಶಾಂತಿಭಂಗಕ್ಕೆ ಮತ್ತು ಅಪರಾಧಗಳಿಗೆ ಪ್ರಚೋದನೆ ಕೊಡುವಂಥಹದ್ದು ಅಲ್ಲವೆ? ಈ ಹೇಳಿಕೆಯನ್ನು ಖಂಡಿಸುವ ಬದಲು ಇನ್ನೊಬ್ಬ ಬಿಜೆಪಿ ಸಂಸದ ಪ್ರಹ್ಲಾದ ಜೋಶಿ, ‘ಷಂಡ ಎಂಬ ಪದಕ್ಕೆ ಉತ್ತರ ಕರ್ನಾಟಕದಲ್ಲಿ ಸಾಂಸ್ಕೃತಿಕ ಹಿನ್ನೆಲೆ ಇದೆ. ಷಂಡ ಪದ ಸಂಸದೀಯ ಪದವೋ ಅಸಂಸದೀಯ ಪದವೋ ಎಂಬ ಬಗ್ಗೆ ಚರ್ಚೆ ನಡೆಯಲಿ. ಈ ರಾಜ್ಯ ಸರ್ಕಾರಕ್ಕೆ ಷಂಡ ಪದಕ್ಕಿಂತಲೂ ಕಠಿಣ ಪದ ಬಳಸಬೇಕು” ಎಂದು ಅಪ್ಪಣೆ ಕೊಡಿಸಿದ್ದಾರೆ. ಬಿಜೆಪಿ ಸಂಸದರ ಅಸಂದೀಯ “ಸಂಸ್ಕೃತಿ”ಯನ್ನು ವಿಸ್ತರಿಸುತ್ತಾ, “ಇತ್ತೀಚೆಗೆ ನೀವು ದಾವೂದ್ ಇಬ್ರಾಹಿಂ ಚಿಕ್ಕಪ್ಪನಂತೆ ವರ್ತಿಸುತ್ತಿರುವಿರೆಂಬ ಅನಿಸಿಕೆಯನ್ನು ಸತ್ಯ ಮಾಡುತ್ತಿರುವಿರಿ” ಎಂದು ಮುಖ್ಯಮಂತ್ರಿಗಳನ್ನು ಆರೋಪಿಸಿದ್ದಾರೆ.

‘ಗಲಭೆಗೆ ಕಾರಣರಾದ ಯಾವೊಬ್ಬ ಮುಸಲ್ಮಾನನ ಮನೆಗೂ ಪೊಲೀಸರು ಹೋಗಿಲ್ಲ ಅದೇ ಕಾರಣಕ್ಕೆ ಷಂಡರು ಎಂದು ಕರೆಯಲಾಯಿತು. ಹಿಂದೂಗಳು ಪುಗಸಟ್ಟೆ ಸಿಕ್ಕಿದ್ದಾರೆ ಎಂಬ ಕಾರಣಕ್ಕೆ ಬಂಧಿಸಲಾಗುತ್ತಿದೆ. ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಹಿಂದೂಗಳಿಗೆ ರಕ್ಷಣೆ ಇಲ್ಲ. ಇನ್ನೇನು ಆಯುಧ ಪೂಜೆ ಹಬ್ಬ ಹತ್ತಿರ ಬರುತ್ತಿದ್ದು, ಹಿಂದೂಗಳು ತಮ್ಮ ರಕ್ಷಣೆಗೆ ಶಸ್ತ್ರಗಳನ್ನು ಪೂಜೆ ಮಾಡಿ. ನಮ್ಮನ್ನು ನಾವೇ ರಕ್ಷಣೆ ಮಾಡಿಕೊಳ್ಳಬೇಕಿದೆ. ಸರ್ಕಾರ ನಮಗೆ ರಕ್ಷಣೆ ಕೊಡುತ್ತದೆ ಅನಿಸುತ್ತಿಲ್ಲ’ ಎಂದು ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ವಿ. ಸುನೀಲ್ ಕುಮಾರ್ ಹೇಳಿ “ಸಶಸ್ತ್ರ ದೊಂಬಿ”ಗೆ ಕರೆ ಕೊಟ್ಟಿದ್ದಾರೆ. “ನಿರಂತರವಾಗಿ ನಡೆಯುತ್ತಿರುವ ಗಲಭೆ ಮತ್ತು ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರ ಕೊಲೆ ಹಿಂದೆ ವ್ಯವಸ್ಥಿತ ಷಡ್ಯಂತ್ರ ಇದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯ ಕಾಂಗ್ರೆಸ್ ಉಸ್ತುವಾರಿ ಕೆ.ಸಿ. ವೇಣುಗೋಪಾಲ್ ಅವರ ಕೈವಾಡ ಇದೆ’ ಎಂದು ಬಿ.ಎಸ್. ಯಡಿಯೂರಪ್ಪ ಗಂಭೀರ ಆಧಾರ–ರಹಿತ ಆರೋಪ ಮಾಡಿದ್ದಾರೆ. “ಶರತ್ ಮಡಿವಾಳ ಇವರ ಹತ್ಯೆ ತೀವ್ರ ಖಂಡನೀಯ. ಈ ಕೃತ್ಯದ ಹಿಂದೆ ಕಾಣದ ಕೈ ಕೆಲಸ ಮಾಡಲು ರಾಜ್ಯದಲ್ಲಿರುವ ಆಡಳಿತಾರೂಢರು ನೀಡುತ್ತಿರುವ ಪರೋಕ್ಷ ಸಹಕಾರವೇ ಕಾರಣ” ಎಂದು ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡ ಆರೋಪಿಸಿದ್ದಾರೆ.. ಕರ್ನಾಟಕದ ಮಾಧ್ಯಡಮ ಲೋಕದಲ್ಲಿ "ಬೆತ್ತಲೆ” ಭಾಷೆಯ ಪ್ರವರ್ತಕರಾದ ಸಂಸದ ಪ್ರತಾಪ ಸಿಂಹ ಪಾಪ ಹೇಗೆ ಸುಮ್ಮನಿರುತ್ತಾರೆ? “ಮುಖ್ಯಮಂತ್ರಿ ಪ್ರೀತಿ ಪಾತ್ರರೇ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತ ಶರತ್ ಮಡಿವಾಳ ಅವರನ್ನು ಹತ್ಯೆ ಮಾಡಿದ್ದಾರೆ” ಎನ್ನುತ್ತಾ ಆಧಾರ–ರಹಿತ ಆರೋಪದಲ್ಲಿ ಯಡಿಯೂರಪ್ಪ ಅವರನ್ನು ಮೀರಿಸಿದ್ದಾರೆ.

ಸಂಸದರ ಶಾಸಕರ “ಅಸಂಸದೀಯ” ಬೇಜವಾಬ್ದಾರ ಪ್ರಚೋದನಕಾರಿ ಭಾಷೆಯನ್ನು ಒತ್ತಟ್ಟಿಗಿ–ಟ್ಟರೂ, ಅವರ ಒತ್ತಾಯದಲ್ಲಿ ಏನಾದರೂ ತರ್ಕ ಇದೆಯೇ? ಹಣ, ಆಸ್ತಿ ಅಥವಾ ವೈಯಕ್ತಿಕ ಸೇಡಿನಿಂದ ವೈಯಕ್ತಿಕ ಕೊಲೆ, ಹಲ್ಲೆ ಗಳು ನಡೆಯುವುದು ಅಪರೂಪವೇನಲ್ಲ. ಕೊಲೆಯಾದ ವ್ಯಕ್ತಿ ರಾಜಕೀಯ “ಸಾಂಸ್ಕೃತಿಕ” ಕಾರ್ಯಕರ್ತನಿದ್ದಾಗ ಸಹ ಇದು ಅಸಾಧ್ಯಯವೇನಲ್ಲ. ಇಂತಹ ಅಪರಾಧಗಳು ನಡೆದಾಗ ತನಿಖೆ ನಡೆಸಿ ಅಪರಾಧಿಗಳ ಪತ್ತೆ ಹಚ್ಚುವುದಕ್ಕೆ ಸ್ವಲ್ಪ ಸಮಯ ಹಿಡಿದೇ ಹಿಡಿಯುತ್ತದೆ. ಕೊಲೆ ನಡೆದ ಕೆಲವೇ ದಿನಗಳಲ್ಲಿ ಅಪರಾಧಿ ಹಿಡಿದಿಲ್ಲ ಎಂದು ದಾಂಧಲೆ ಎಬ್ಬಿಸುವುದರ ಹಿಂದೆ ಯಾವುದೇ ತರ್ಕವಿಲ್ಲ. ಅದೂ “ಆಯ್ದ” ಕೆಲವೇ ಕೊಲೆಗಳ ಹಿಂದೆ “ವ್ಯವಸ್ಥಿತ ಷಡ್ಯಂತ್ರ”, “ಕಾಣದ ಕೈ” ಎಂದು ಆಧಾರ–ರಹಿತ ಆರೋಪ ಮಾಡುತ್ತಾ ಸಂಸದರು ಶಾಸಕರು ಒಂದು ಕೋಮಿನ ವಕ್ತಾರರಂತೆ ವರ್ತಿಸುವುದು ಸಂವಿಧಾನಕ್ಕೆ ಬಗೆಯುವ ಅಕ್ಷಮ್ಯ ಅಪಚಾರ. ಇಂತಹ ಸಂಸದರನ್ನು ಶಾಸಕರನ್ನು ಅವರನ್ನು ಆರಿಸಿದ ಜನ ತರಾಟೆಗೆ ತೆಗೆದುಕೊಳ್ಳಬೇಕಾಗಿದೆ. ಇದು ಬಿಜೆಪಿಯ ಚುನಾವಣಾ–ಪೂರ್ವ ತಂತ್ರ ಎಂಬುದು ಎಲ್ಲರಿಗೂ ಸ್ಪಷ್ಟವಿದ್ದರೂ ಈ ಬಗ್ಗೆ ಕಾಂಗ್ರೆಸ್ ಸರಕಾರದ “ಸಹಿಷ್ಣುತೆ” ಅಕ್ಷಮ್ಯ. ಸಂಸದ ನಳಿನ್ ಕಟೀಲ್ ಜಿಲ್ಲೆಗೆ ಬೆಂಕಿ ಇಡುವ ಮಾತನಾಡಿದಾಗ ಅವರ ಮೇಲೆ ಕಟು ದಿಟ್ಟ ಕ್ರಮ ಕೈಗೊಂಡಿದ್ದರೆ ಈ “ಅಸಂಸದೀಯ” ಪರ್ವ ನೋಡಬೇಕಾಗಿರಲಿಲ್ಲ.

ಈಗಲೂ ಸರಕಾರ ಶಾಂತಿ ಕದಡುವ ವ್ಯಕ್ತಿಗಳು, ಶಕ್ತಿಗಳು, ಸಂಘಟನೆಗಳ ಮೇಲೆ ದಿಟ್ಟ ಕಟು ಕ್ರಮಕೈಗೊಳ್ಳದಿದ್ದರೆ ಪರಿಸ್ಥಿತಿ ಕೈಮೀರಿ ಹೋಗಲಿದೆ. ಇತ್ತೀಚಿನ ಕೆಲವು ಸಂಘದ ಕಾರ್ಯಕರ್ತರ ಕೊಲೆಯ ತನಿಖೆ ನಂತರ ಬಂಧಿಸಲಾದ ಪ್ರಮುಖ ಆರೋಪಿಗಳು ಯಾರು ಎಂದು ನೋಡಿದರೆ, “ವ್ಯವಸ್ಥಿತ ಷಡ್ಯಂತ್ರ”, “ಕಾಣದ ಕೈ”ಯ ಆರೋಪಗಳು ತೀರಾ ಆಧಾರ–ರಹಿತವೇನಲ್ಲ! ಪ್ರವೀಣ್ ಪೂಜಾರಿ, ಪ್ರತಾಪ್, ಕಾರ್ತಿಕ್ ರಾಜ್ ಕೊಣಾಜೆ, ವಿನಾಯಕ ಬಾಳಿಗಾ, ಹರೀಶ್ ಪೂಜಾರಿ? ಇವರೆಲ್ಲರ ಕೊಲೆ ಪ್ರಕರಣಗಳಲ್ಲಿ ಆಪಾದಿತರು ಸಂಘ ಪರಿವಾರದ ಸದಸ್ಯರೇ! ಸರಕಾರ “ವ್ಯವಸ್ಥಿತ ಷಡ್ಯಂತ್ರ”, “ಕಾಣದ ಕೈ” ಗಳ ಹಿಂದಿರುವವರನ್ನೂ ಬಂಧಿಸಿ ಅದಕ್ಕೆ ಕೊನೆ ಹಾಕಬೇಕಾಗಿದೆ.

ಶಾಂತಿ ಕಾಪಾಡುವುದು ಸರಕಾರದ ಜವಾಬ್ದಾರಿ ಮಾತ್ರವಲ್ಲ. ಧಾರ್ಮಿಕ ಕಾರಣಗಳಿಗಾಗಿ ಜನರ ನಡುವೆ ಅಶಾಂತಿ ಹಬ್ಬಿಸುವ ಕೆಲಸ ನಡೆಯುತ್ತಿರುವಾಗ ಕರಾವಳಿಯ ಧಾರ್ಮಿಕ ಮುಖಂಡರು, ಮಠಾಧೀಶರು; ಸಾಹಿತಿ–ಕಲಾವಿದರು, ಬುದ್ಧಿಜೀವಿಗಳು, ರಾಜಕೀಯ ಪಕ್ಷಗಳು, ಸಾಮಾಜಿಕ ನಾಯಕರು ಶಾಂತಿ ಸ್ಥಾಪನೆಗೆ ಮತ್ತು ಶಾಂತಿ ಕದಡುವ ವ್ಯಕ್ತಿಗಳು, ಶಕ್ತಿಗಳು, ಸಂಘಟನೆಗಳ ವಿರುದ್ಧ ತಮ್ಮ ದನಿ ಎತ್ತಬೇಕಾಗಿದೆ.

ಜನಶಕ್ತಿ ಉತ್ಸವ ಮತ್ತು ಪ್ರಸಾರಾಂದೋಲನ 2017

ಕಳೆದ 3 ವರ್ಷಗಳಂತೆ ಈ ವರ್ಷವೂ “ಜನಶಕ್ತಿ ಉತ್ಸವ”ವನ್ನು ಹಮ್ಮಿಕೊಳ್ಳಲಾಗುತ್ತಿದೆ. ಜನಶಕ್ತಿ ಪತ್ರಿಕೆಯನ್ನು ದುಡಿಯುವ ಜನರ ಚಳುವಳಿಯ ಒಳಗೂ/ಹೊರಗೂ ಇನ್ನಷ್ಟು ಹೆಚ್ಚಿನ ಜನವಿಭಾಗಗಳಿಗೆ ಪರಿಚಯಿಸುವುದು, ವ್ಯಾಪಕವಾಗಿ ತೆಗೆದುಕೊಂಡು ಹೋಗುವುದು, ಜನಪ್ರಿಯಗೊಳಿಸುವುದು ‘ಜನಶಕ್ತಿ ಉತ್ಸವ’ದ ಪ್ರಮುಖ ಗುರಿ. ಈ ವರ್ಷ ಈ ಕೆಳಗಿನ ಕೆಲವು ಹೊಸ ಅಂಶಗಳನ್ನು ಒಳಗೊಂಡ “ಜನಶಕ್ತಿ ಉತ್ಸವ ಮತ್ತು ಪ್ರಚಾರಾಂದೋಲನ 2017” ಜುಲೈ–ಅಗಸ್ಟ್ ನಲ್ಲಿ ನಡೆಯಲಿದೆ.

- “ಜನಶಕ್ತಿ ಉತ್ಸವ 2017”ರ ಒಟ್ಟಾ–ರೆ ಥೀಮ್ “ಇಂಡಿಯಾ 70 : ಸಾಧನೆಗಳು, ಸವಾಲುಗಳು”
- ಅಗಸ್ಟ್ 19 (ಶನಿವಾರ) ರಂದು ಬೆಂಗಳೂರಲ್ಲಿ “ಜನಶಕ್ತಿ ಉತ್ಸವ 2017” ಉತ್ಸವ ನಡೆಯಲಿದೆ. ಕಾ. ಬೃಂದಾ ಕಾರಟ್ ಅವರು ಉತ್ಸವವನ್ನು ಉದ್ಘಾಟಿಸಲಿದ್ದಾರೆ.
- ಉತ್ಸವದಲ್ಲಿ ಮೊದಲ ಅರ್ಧದಿನ ಜನಶಕ್ತಿ ಬಳಗದ ಸಮಾವೇಶ ಹಾಗೂ ಎರಡನೇ ಅರ್ಧದಿನ ವ್ಯಾಪಕವಾಗಿ ಮಾಧ್ಯಮ/ಜನತೆಯ ಗಮನ ಸೆಳೆಯುವ ವಿಚಾರ ಸಂಕಿರಣ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಳ್ಳಲಿದೆ. ಜನಶಕ್ತಿ ವಿಶೇಷಾಂಕ ಬಿಡುಗಡೆನೂ ಮಾಡಬೇಕು. ಜನಶಕ್ತಿ ವಿಶೇಷಾಂಕದ ಥೀಮ್ ಸಹ “ಇಂಡಿಯಾ 70 : ಸಾಧನೆಗಳು, ಸವಾಲುಗಳು” ಕಾರ್ಯಾಗಾರ ಸಂಘಟಿಸಬೇಕು.
- ಜನಶಕ್ತಿ ಪತ್ರಿಕೆಯ ಪ್ರಸಾರ ಮತ್ತು ಫೇಸ್ ಬುಕ್ ಪುಟದ “ಲೈಕ್”ಗಳನ್ನು ವನ್ನು ಇಮ್ಮಡಿಯಷ್ಟು ಹೆಚ್ಚಿಸುವ ಗುರಿ ಇಟ್ಟುಕೊಳ್ಳಲಾಗಿದೆ
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವಗಳ ಭಾಗವಾಗಿ ಉತ್ಸವ ಥೀಮ್ ನ ಒಂದು ಆಯಾಮದ ಸುತ್ತ ಒಂದು ವಿಶೇಷ ಉಪನ್ಯಾಸ/ಸಂವಾದ, ಓದುಗರ ವೇದಿಕೆ, ಜನಶಕ್ತಿ ಬಳಗದ ಸಮಾವೇಶ, ಪ್ರಸಾರಾಂದೋಲನದ ಉದ್ಘಾಟನೆ ಇರುತ್ತದೆ.
- ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವ, ಬಳಗದ ಸಮಾವೇಶದಿಂದ ಆರಂಭಿಸಿ ಎರಡು ವಾರಗಳ ಕಾಲ ಜಿಲ್ಲಾ ಮಟ್ಟದ ಪ್ರಸಾರಾಂದೋಲನ ನಡೆಸಲಾಗುತ್ತದೆ
- ಇನ್ನಷ್ಟು ವ್ಯಾಪಕವಾಗಿ ಪಕ್ಷದ ಮತ್ತು ನಮ್ಮ ಚಳುವಳಿಯ ಹೊರಗಿರುವ ಎಡ/ಪ್ರಜಾಸತ್ತಾತ್ಮಕ ಬುದ್ಧಿಜೀವಿಗಳು ಚಳುವಳಿಕಾರರನ್ನು ವಿಶೇಷಾಂಕದ ಲೇಖಕರಾಗಿ ಮತ್ತು ಇತರ ಎಲ್ಲಾ ಚಟುವಟಿಕೆಗಳಲ್ಲಿ ಒಳಗೊಳ್ಳಲು ಪ್ರಯತ್ನಿಸಬೇಕು.
- ಜನಶಕ್ತಿ ಬಳಗದ ರಾಜ್ಯ ಮಟ್ಟದ ಒಂದು ಸಾಮಾಜಿಕ ಮಾಧ್ಯಮ ಕಾರ್ಯಾಗಾರವನ್ನು ಕಾರ್ಯಾಗಾರವನ್ನು ಜುಲೈ ನಲ್ಲಿ ಸಂಘಟಿಸಲಾಗುತ್ತದೆ
- ಜನಶಕ್ತಿಯ ಮುಂದಿನ ಬೆಳವಣಿಗೆಗಳಿಗೆ ನಿಧಿ ಸ್ಥಾಪಿಸಲು ವಿಶೇಷಾಂಕದ ಜಾಹೀರಾತುಗಳ ಮೂಲಕ ರೂ. 25 ಲಕ್ಷದ ನಿಧಿಯ ಗುರಿ ಇಟ್ಟುಕೊಳ್ಳಲಾಗಿದೆ.

ಡೆಂಗ್ಯೂ, ಇತ್ಯಾದಿ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಒತ್ತಾಯಿಸಿ ತುಮಕೂರು ಜಿಲ್ಲಾಧಿಕಾರಿಗೆ ಮುತ್ತಿಗೆ



ಡೆಂಗ್ಯೂ, ಚಿಕೂನ್‌ಗುನ್ಯ, ಮಲೇರಿಯಾ ಸೇರಿದಂತೆ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮಾಡಬೇಕು ಸರ್ಕಾರಿ ಆಸ್ಪತ್ರೆಗಳಲ್ಲಿ ಸೂಕ್ತ ಚಿಕಿತ್ಸೆ ನೀಡುವಂತೆ ಕ್ರಮ ಕೈಗೊಳ್ಳಬೇಕು, ಖುದ್ದು ಜಿಲ್ಲಾಧಿಕಾರಿಗಳು ವಾರ್ಡ್‌ಗಳಿಗೆ ಭೇಟಿ ನೀಡಿ ವಾಸ್ತವಗಳನ್ನು ತಿಳಿಯಬೇಕು, ಈ ಕೂಡಲೇ ಮಹಾನಗರಪಾಲಿಕೆ ತುರ್ತು ಸಭೆಯನ್ನು ಕರೆಯಬೇಕು ಎಂದು ಆಗ್ರಹಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿಪಿಐ(ಎಂ), ಸಿಐಟಿಯು, ಡಿ.ವೈ.ಎಫ್.ಐ ಸಂಘಟನೆಗಳು ಜಿಲ್ಲಾ ಪಂಚಾಯತ್ ಕಛೇರಿ ಎದುರು ಜಿಲ್ಲಾಧಿಕಾರಿಗಳಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು.

ಬಿ.ಎಸ್.ಎನ್.ಎಲ್. ಕಛೇರಿ ಎದುರು ಪ್ರತಿಭಟನೆ ನಡೆಸಿ ನಂತರ ಜಿಲ್ಲಾಪಂಚಾಯತ್ ಕಛೇರಿ ಎದುರು ಪ್ರತಿಭಟನೆ ನಡೆಸಲಾಯಿತು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ನಗರ ಕಾರ್ಯದರ್ಶಿ ಎಸ್. ರಾಘವೇಂದ್ರ ತುಮಕೂರು ಜಿಲ್ಲೆಯಲ್ಲಿ ಡೆಂಗ್ಯೂ ಜ್ವರಕ್ಕೆ ಸಾಕಷ್ಟು ಮಂದಿ ಬಲಿಯಾಗಿದ್ದಾರೆ. ತುಮಕೂರು, ಸಿರಾ, ಚಿಕ್ಕನಾಯಕನಹಳ್ಳಿ, ಗುಬ್ಬಿ ತಾಲೂಕು ಸೇರಿದಂತೆ ಹತ್ತು ತಾಲೂಕುಗಳಲ್ಲೂ ಡೆಂಗ್ಯೂ ಚಿಕನ್‌ಗುನ್ಯಾ, ಮಲೇರಿಯಾ ಸೇರಿದಂತೆ ಅಪಾಯಕಾರಿ ರೋಗಗಳಿಂದ ಸಾವಿರಾರು ಮಂದಿ ಬಳಲುತ್ತಿದ್ದು, ನಿತ್ಯವೂ ಖಾಸಗಿ ಆಸ್ಪತ್ರೆಗಳಿಗೆ ಅಲೆಯುವ ಪರಿಸ್ಥಿತಿ ಬಂದಿದೆ. ಒಂದೆಡೆ ಮಳೆ ಇಲ್ಲದೆ ಬರಗಾಲ ಆವರಿಸಿದೆ. ಇಂತಹ ಸಂದರ್ಭದಲ್ಲಿ ಜನರ ಕೈಯಲ್ಲಿ ಹಣವಿಲ್ಲದೆ ತಮಗೆ ಬಂದಿರುವ ಜ್ವರ ಮೊದಲಾದ ಕಾಯಿಲೆಗಳನ್ನು ವೈದ್ಯರಿಗೆ ತೋರಿಕೊಳ್ಳಲು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದ್ದು ಜಿಲ್ಲಾಧಿಕಾರಿಗಳು ಖುದ್ದು ವಾರ್ಡ್‌ಗಳಿಗೆ ಭೇಟಿ ನೀಡಿ ವಾಸ್ತವತೆಯನ್ನು ತಿಳಿಯಬೇಕು ಮತ್ತು ಕಾಯಿಲೆ ಪೀಡಿತ ಜನರಿಗೆ ಸೂಕ್ತ ಚಿಕಿತ್ಸೆಗಳನ್ನು ಕೊಡಿಸಬೇಕು ಹಾಗೂ ಈ ಕೂಡಲೇ ಮಹಾನಗರಪಾಲಿಕೆ ತುರ್ತು ಸಭೆಯನ್ನು ಕರೆಯಬೇಕು. ನಗರ ಸ್ವಚ್ಚತೆಗೆ ಹೆಚ್ಚಿನ ಗಮನವನ್ನು ಹರಿಸಬೇಕು. ಅಗತ್ಯ-ಕ್ಕೆ ತಕ್ಕಂತೆ ಪೌರಕಾರ್ಮಿಕರನ್ನು ನೇಮಿಸಿಕೊಳ್ಳಬೇಕು. ಈಗ ಇರುವ ಪೌರಕಾರ್ಮಿಕರಿಗೆ ಸುರಕ್ಷತಾ ಸಲಕರಣೆಗಳನ್ನು ನೀಡಬೇಕು. ಅವರ ಆರೋಗ್ಯದ ಕಡೆಯೂ ಹೆಚ್ಚಿನ ಗಮನವನ್ನು ಹರಿಸಬೇಕು ಎಂದು ಆಗ್ರಹಿಸಿದ ಅವರು ತುಮಕೂರು ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಡೆಂಗ್ಯೂ ಪೀಡಿತರಿಗೆ ಪ್ಲೇಟ್‌ಲೆಟ್‌ಗಳು ಸಿಗುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಜಿಲ್ಲಾಡಳಿತದ ಮೇಲೆ ಇದೆ. ರೋಗಪೀಡಿತರು ಆಸ್ಪತ್ರೆಗಳಿಗೆ ಬಂದರೆ ಅವರಿಗೆ ಉಚಿತವಾಗಿ ಔಷಧಿ ಮತ್ತು ಪ್ಲೇಟ್‌ಲೆಟ್‌ಗಳು ಸಿಗುವಂತೆ ನೋಡಿಕೊಳ್ಳಬೇಕು. ಆಗ ಮಾತ್ರ ರೋಗಗಳನ್ನು ಹತೋಟಿಗೆ ತರಲು ಸಾಧ್ಯವಾಗುತ್ತದೆ. ಇದಕ್ಕೆ ಜಿಲ್ಲಾಡಳಿತ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಗರ ಸಮಿತಿ ಸದಸ್ಯ ಇ. ಶಿವಣ್ಣ ಮಾತನಾಡಿ ಜ್ವರ ಬಾಧಿತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು ಆಸ್ಪತ್ರೆಗಳಿಗಾಗಿ ಸಾವಿರಾರು ರೂಪಾಯಿ ವೆಚ್ಚ ಮಾಡಬೇಕಾದಂತಹ ಸನ್ನಿವೇಶ ಒದಗಿದೆ. ಡೆಂಗ್ಯೂ ಪೀಡತರು ತುಮಕೂರು ಜಿಲ್ಲೆಯ ಯಾವುದೇ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಹೋದರೆ ಅಲ್ಲಿ ಪ್ಲೇಟ್‌ಲೆಟ್ ಸಿಗದೆ ದೂರದ ಬೆಂಗಳೂರಿಗೆ ಹೋಗುವಂತಹ ಪರಿಸ್ಥಿತಿ ಬಂದಿದೆ. ಹಣವಿಲ್ಲದವರು ಸ್ಥಳೀಯ ಆಸ್ಪತ್ರೆಗಳಲ್ಲೇ ಚಿಕಿತ್ಸೆ ಮತ್ತು ಮಾತ್ರೆ ಪಡೆದು ಮನೆಯಲ್ಲಿ ಕೂರುವಂತಾಗಿದೆ. ಸಾಂಕ್ರಾಮಿಕ ರೋಗಗಳಿಂದ ಬಳಲುತ್ತಿರುವವರು ದಿಕ್ಕುತೋಚದೆ ತಲೆಮೇಲೆ ಕೈ ಹೊತ್ತು ಕೂತಿದ್ದು ಅವರ ನೆರವಿಗೆ ಜಿಲ್ಲಾಡಳಿತ ಬರಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾ ಖಜಾಂಚಿ ಎ. ಲೋಕೇಶ್ ಮಾತನಾಡಿ ವಿಶೇಷವಾಗಿ ಕೊಳಗೇರಿಗಳಲ್ಲಿ ವಾಸವಾಗಿರುವವರು ಇಂತಹ ಸಾಂಕ್ರಾಮಿಕ ರೋಗಳಿಂದ ಬಳಲುತ್ತಿರುವ ಹಿನ್ನೆಲೆಯಲ್ಲಿ ಲಾರ್ವಾ ಸೇರಿದಂತೆ ಸಾಂಕ್ರಾಮಿಕ ರೋಗಗಳನ್ನು ಹರಡುವ ಸೊಳ್ಳೆಗಳ ನಿಯಂತ್ರಣಕ್ಕೆ ಫಾಗಿಂಗ್ ಮಾಡುವುದಕ್ಕೆ ವ್ಯಾಪಕ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ ಅವರು ತುಮಕೂರು ನಗರದ ಬಹುತೇಕ ಬಡಾವಣೆಗಳಲ್ಲಿ ಚರಂಡಿಗಳ ಸಮಸ್ಯೆ ಇದ್ದು ಕೊಳಚೆ ನೀರು ಸರಾಗವಾಗಿ ಹರಿದು ಹೋಗಲು ತೊಂದರೆಯಿದೆ, ನಗರವನ್ನು ಸೊಳ್ಳೆಮುಕ್ತಗೊಳಿಸುವಂತೆ ಹಲವು ಬಾರಿ ಮಹಾನಗರ ಪಾಲಿಕೆಗೆ ಮನವಿ ಪತ್ರಗಳನ್ನು ನೀಡಿದ್ದರೂ ಪಾಲಿಕೆ ಅಧಿಕಾರಿಗಳು ಇತ್ತ ಗಮನಹರಿಸಿಲ್ಲದೆ ಇರುವುದರಿಂದ ರೋಗಗಳು ಉಲ್ಬಣಗೊಳ್ಳಲು ಕಾರಣವಾಗಿದೆ. ನಗರದ ಸ್ವಚ್ಚತೆ ಸುಮಾರು 750 ಮಂದಿ ಪೌರಕಾರ್ಮಿಕರ ಅವಶ್ಯಕತೆ ಇದ್ದು ಈಗ ಕೇವಲ 350 ಮಂದಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರಿಗೆ ಸೂಕ್ತ ಸುರಕ್ಷತಾ ಸಲಕರಣಗಳು ಇಲ್ಲದೆ ಪೌರಕಾರ್ಮಿಕರಿಗೆ ಕೆಲಸ ಒತ್ತಡ ಇದ್ದು ಅವರು ಕೂಡ ರೋಗಗಳಿಂದ ಬಳಲುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಹೆಚ್ಚುವರಿ ಪೌರಕಾರ್ಮಿರನ್ನು ನೇಮಕ ಮಾಡಿಕೊಂಡು ನಗರದ ಸ್ವಚ್ಛತೆ ಮತ್ತು ಸೌಂದರ್ಯಕ್ಕೆ ಆದ್ಯತೆ ನೀಡಬೇಕು ಎಂದರು.

ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿ ಕೆ.ಪಿ. ಮೋಹನ್‌ರಾಜ್ : ಡೆಂಗ್ಯೂ ನಿಯಂತ್ರಣಕ್ಕೆ ಈಗಾಗಲೇ ಕ್ರಮಗಳನ್ನು ಕೈಗೊಂಡಿದ್ದು ಜೂನ್ 27–28 ರಲ್ಲಿ ಡೆಂಗ್ಯೂ ಹೆಚ್ಚಿವ ಬಗ್ಗೆ ಮಾಹಿತಿ ಬಂದಿದ್ದು ಈಗಾಗಲೇ ಜಿಲ್ಲಾಡಳಿತ ಎಲ್ಲಾ ಅಧಿಕಾರಿಗಳನ್ನು ಕರೆದು ಸಭೆಯನ್ನು ನಡೆಸಲಾಗಿದೆ. ಮತ್ತೆ ಜುಲೈ 14, 2017ರಂದು ಜಿಲ್ಲಾಉಸ್ತುವಾರಿ ಸಚಿವರಾದ ಟಿ.ಬಿ.ಜಯಚಂದ್ರರವರ ಅಧ್ಯಕ್ಷತೆಯಲ್ಲಿ ಎಲ್ಲಾ ಶಾಸಕರುಗಳ ಮತ್ತು ಸ್ಥಳೀಯ ಸಂಸ್ಥೆಗಳಾದ ಮಹಾನಗರಪಾಲಿಕೆ, ನಗರಸಭೆ, ಪಟ್ಟಣ ಪಂಚಾಯ್ತಿ ಮತ್ತು ಆರೋಗ್ಯಾಧಿಕಾರಿಗಳ ಸಭೆಯನ್ನು ನಡೆಸಲಾಗುವುದು ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಡಿ.ವೈ.ಎಫ್.ಐ ಜಿಲ್ಲಾ ಉಪಾಧ್ಯಕ್ಷ ರವೀಂದ್ರ, ಸಂಘಟನಾ ಕಾರ್ಯದರ್ಶಿ ಜಿ. ದರ್ಶನ್, ಟಿ.ಹೆಚ್. ರಾಮು, ಸಿಡಬ್ಲ್ಯೂಎಫ್‌ಐನ ಜಿಲ್ಲಾ ಖಜಾಂಚಿ, ರಾಮಚಂದ್ರು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಧರ್ ಪಾಪಣ್ಣ, ಶಂಕರಪ್ಪ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ, ಸಿ. ಅಜ್ಜಪ್ಪ, ಖಲೀಲ್ ಸೇರಿದಂತೆ ಮುಂತಾದವರು ನೇತೃತ್ವಹಿಸಿದ್ದರು.

ಸ್ವಾತಂತ್ರ್ಯ ಸಿಕ್ಕು 70 ವರ್ಷಗಳಾದರೂ ರೈತರಿಗೆ, ಕಾರ್ಮಿಕರಿಗೆ ಘನತೆಯ ಬದುಕು ಸಾಧ್ಯವಾಗಿಲ್ಲ: ವರಲಕ್ಷ್ಮಿ




ಕಾಂ. ಎಸ್. ವರಲಕ್ಷ್ಮಿ ಅವರು ನಗರದ ಶಿವಶರಣೆ ನಿಂಬೆಕ್ಕ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ ಸಿಐಟಿಯು ಕಾರ್ಮಿಕ ಸಂಘಟನೆಯ ಜಿಲ್ಲಾಮಟ್ಟದ ಅಧ್ಯಯನ ಶಿಬಿರದಲ್ಲಿ ಮಾತನಾಡುತ್ತಾ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು 70 ವರ್ಷಗಳಾದರೂ ದೇಶದ ರೈತರಿಗೆ, ಕಾರ್ಮಿಕರಿಗೆ ಘನತೆಯಿಂದ ಬದುಕಲು ಸಾಧ್ಯವಾಗಿಲ್ಲ. ದೇಶದ ಬಹು ಸಂಖ್ಯಾತ ಕಾರ್ಮಿಕರು ರೈತರು ಹಸಿವು, ನೀರಡಿಕೆ, ಉದ್ಯೋಗ ಶಿಕ್ಷಣ ಬಡತನ ಆರೋಗ್ಯದಂತಹ ಸಮಸ್ಯೆಗಳು ನಿವಾರಿಸಿಕೊಳ್ಳಲಾಗದ ದಟ್ಟ ದರಿದ್ರ ಪರಿಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆಂದು ದೂರಿದರು. ಕಳೆದ 70 ವರ್ಷಗಳಿಂದ ಅಧಿಕಾರದಲ್ಲಿರುವ ಕಾಂಗ್ರೆಸ್ ಬಿಜೆಪಿ ಜನತಾ ಪರಿವಾರದಂತ ಬಂಡವಾಳಗಾರರ ಪಕ್ಷಗಳಿಂದ ನಡೆದ ರೈತ ಕಾರ್ಮಿಕ ವಿರೋಧಿ ಆಡಳಿತ ನೀತಿಯಿಂದಾಗಿ ಅತ್ಯಂತ ಧಾರುಣ ಪರಿಸ್ಥಿತಿ ನಿರ್ಮಾಣವಾಗಿದೆ. 1991 ಕಾಂಗ್ರೆಸ್ ಸರ್ಕಾರ ತಗೆದುಕೊಂಡ ಉದಾರಿಕರಣ, ಜಾಗತೀಕರಣ ನೀತಿಯಿಂದಾಗಿ ದೇಶದ ಆರ್ಥಿಕ ಸ್ವತಂತ್ರ್ಯಕ್ಕೆ ತೀವ್ರ ದಕ್ಕೆಯುಂಟಾಯಿತು. ತದನಂತರ ಬಂದ ಎ.ಬಿ. ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರ ಹಾಗೂ ಈಗಿನ 56 ಇಂಚಿನ ಎದೆಯ ನರೇಂದ್ರ ಮೋದಿಯ ಸರ್ಕಾರಗಳು ತಂದಿರುವ ಎಲ್ಲಾ ನೀತಿಗಳು ಕಾರ್ಪೋರೇಟ್ ಕಂಪನಿಗಳ ಪರವಾದ ನೀತಿಗಳೇ ಆಗಿವೆ. ಹೀಗಾಗಿ ದೇಶದ ಸಂಪತ್ತನ್ನೆಲ್ಲಾ ಲೂಟಿ ಮಾಡಿ ಕಾರ್ಪೋರೇಟ್ ಕಂಪನಿಗಳು ಲಕ್ಷ ಲಕ್ಷ ಕೋಟ್ಯಾಧೀಶರೂ ಬಿಗುತ್ತಿದ್ದರೆ, ಕಾರ್ಮಿಕರು, ನೌಕರರು, ರೈತರು, ಕೂಲಿ ಕಾರರು, ದೈನಾಶಿ ಸ್ಥಿತಿಗೆ ತಳಪ್ಪಟ್ಟ ಅಂಗಲಾಚಿ ಬೇಡಿಕೊಳ್ಳುವ ಗುಲಾಮಗಿರಿ ಪದ್ದತಿಗೆ ನೂಕಲ್ಪಟ್ಟಿದ್ದಾರೆ. ಎಂದು ಅಂಕಿ ಅಂಶಗಳಿಂದ ಹೇಳುತ್ತಾ ವಿವರಿಸಿದ ವರಲಕ್ಷ್ಮೀಯವರು ಅಗಸ್ಟ 14 ರಂದು ಮಧ್ಯರಾತ್ರಿ ಎಚ್ಚರವಾಗಿದ್ದು, ಜಿಲ್ಲೆಯ ಹಾಗೂ ತಾಲೂಕಾ ಕೇಂದ್ರಗಳಲ್ಲಿ ಕಾರ್ಮಿಕರು ಐಕ್ಯ ಚಳುವಳಿಯನ್ನು ನಡೆಸಿ ಆರ್ಥಿಕ ಸಮಾನತೆಗಾಗಿ ಸಂಘರ್ಷ ಎಂಬ ಘೋಷಣೆ ಮೊಳಗಿಸುವ ಮೂಲಕ ಆರ್ಥಿಕ ಬೇಡಿಕೆ ಈಡೇರಿಕೆಗಾಗಿ ಹೋರಾಟ ಮಾಡಲು ಪಣ ತೊಡೋಣ ಎಂದು ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ. ಎಸ್. ವರಲಕ್ಷ್ಮಿಯವರು ಹೇಳಿದರು.

ಅಧ್ಯಯನ ಶಿಬಿರದ ಅಧ್ಯಕ್ಷತೆ ವಹಿಸಿದ ಅಣ್ಣಾರಾಯ ಈಳಗೇರ ಅವರು ಮಾತನಾಡಿ, ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರವಾಗಲಿ, ರಾಜ್ಯದ ಕಾಂಗ್ರೆಸ್ ಸರ್ಕಾರವಾಗಲಿ ಕಾರ್ಮಿಕರ ರಕ್ಷಣೆಗಿದ್ದ ಕಾನೂನುಗಳೆಲ್ಲ ಮೊಟುಕುಗೊಳಿಸಿ ಅವರಿಗೆ ಸಿಗುತ್ತಿದ್ದ ಅಲ್ಪ,ಸ್ವಲ್ಪ ಆರ್ಥಿಕ ಸಮಾಜಿಕ ಸೌಲಭ್ಯಗಳನ್ನು ಕಿತ್ತುಕೊಂಡು ನಿರ್ಗತಿಕರನ್ನಾಗಿಸಿದೆ. ಕಾರ್ಮಿಕರ ಹಕ್ಕುಗಳ ಹೋರಾಟಕ್ಕೆ ಮುಂದಾದರೆ ಎಸ್ಮಾ, ನಾಸಾ ಕಾನೂನು ತಂದು ಕಾರ್ಮಿಕರ ಚಳುವಳಿಯನ್ನು ಹತ್ತಿಕ್ಕಲಾಗುತ್ತಿದೆ ಎಂದು ಅವರು 2 ಸರ್ಕಾರಗಳು ಆರ್ಥಿಕ ವೈಫಲ್ಯಗಳನ್ನು ಮರೆ ಮಾಚಲು ಕೋಮುವಾದವನ್ನ ಪ್ರಚೋಧಿಸುವ ಪ್ರಾಣಿ ವದೆ ನಿಷೇದ ಮುಂತಾದ ಕಾನೂನುಗಳನ್ನು ಜಾರಿಗೆ ತಂದು ಸಮಾಜದ ಐಕ್ಯತೆಯನ್ನು ಹಾಳುಗೆಡುವುಲಾಗುತ್ತದೆ. ಇದನ್ನು ರೈತಕಾರ್ಮಿಕರು ಇಂತಹ ಅಧ್ಯಯನ ನಡೆಸುವುದರ ಮೂಲಕ ಇಂತಹ ಕೋಮು ವಿಭಜಕ ಶಕ್ತಿಗಳನ್ನು ಧೃಡವಾಗಿ ಎದುರಿಸಬೇಕೆಂದು ಕರೆ ನೀಡಿದರು.

ಲಕ್ಷ್ಮಣ ಹಂದ್ರಾಳ ಮಾತನಾಡಿ, ಹಳ್ಳಿಹಳ್ಳಿಗಳಲ್ಲಿ ನಗರದ, ಓಣಿಗಳಲ್ಲಿ ಜನರನ್ನು ಜಾಗೃತಿಗೊಳಿಸುವ ಜವಾಬ್ದಾರಿ ನಮ್ಮ ನಿಮ್ಮ ಮೇಲಿದೆ. ಕಾಂಗ್ರೆಸ್ ಬಿಜೆಪಿ ಪಕ್ಷಗಳ ಕಾರ್ಮಿಕ ವಿರೋಧಿ, ರೈತ ವಿರೋಧಿ ನೀತಿಗಳನ್ನು ಬಯಲುಗೊಳಿಸಬೇಕೆಂದರು.

ಲಕ್ಷ್ಮಣ ಹಂದ್ರಾಳ

"ಆರಾಮದಾಯಕ ಋತುಸ್ರಾವ ನಮ್ಮ ಹಕ್ಕು" : ಬೆಂಗಳೂರಲ್ಲಿ ಜಿ.ಎಸ್.ಟಿ. ಪ್ರತಿಭಟನೆ



ಕೇಂದ್ರ ಸರ್ಕಾರವು ಸ್ಯಾನಿಟರಿ ನ್ಯಾಪಕೀನ್ ಗಳ ಮೇಲೆ ವಿಧಿಸಿರುವ ಜಿಎಸ್.ಟಿ 12% ರದ್ದುಗೊಳಿಸಲು ಹಾಗೂ ಉಚಿತ ಸುರಕ್ಷಿತ ಸ್ಯಾನಿಟರಿ ನ್ಯಾಪಕೀನ್ ವಿತರಣೆಗಾಗಿ ಒತ್ತಾಯಿಸಿ ಜನವಾದಿ ಮಹಿಳಾ ಸಂಘಟನೆ ನೇತ್ರತ್ವದಲ್ಲಿ ನೂರಾರು ವಿದ್ಯಾರ್ಥಿನಿಯರು ಬೆಂಗಳೂರಿನ ಬಸವನಗುಡಿಯಲ್ಲಿ ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ಜೆಎಂಎಸ್ ರಾಜ್ಯ ಉಪಾಧ್ಯಕ್ಷರಾದ ಕಾಂ. ಕೆಎಸ್ ವಿಮಲ, ಕಾಂ. ಕೆಎಸ್ ಲಕ್ಷ್ಮೀ, ಕಾಂ. ಶಾರದಾ, ಕಾಂ. ಶ್ರೀಮತಿ, ಖಈಖ ಕೇಂದ್ರ ಸಮಿತಿ ಸದಸ್ಯರಾದ ಬಸವರಾಜ ಪೂಜಾರ, ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷರಾದ ಕಾಂ. ಮಹೇಶ್ ಹಾಗೂ ಕಾಲೇಜು ವಿದ್ಯಾರ್ಥಿನಿ ಎಂಜೆಲ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿ ಕೇಂದ್ರ ಸರಕಾರದ ಮಹಿಳಾ ವಿರೋಧಿ ನೀತಿಯನ್ನು ಖಂಡಿಸಿದರು. ಕಾಂ. ಬಸಮ್ಮ, ಕಾಂ. ಸೆಲ್ವಿ, ಕಾಂ. ಆಶಾ, ಕಾಂ. ಕವನ ಸೇರಿದಂತೆ ಇತರ ಮುಖಂಡರು ನೇತೃತ್ವ ವಹಿಸಿದ್ದರು.

ಹಾವೇರಿ ಬಸ್ಸಿನಲ್ಲಿ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನಗರದ ರಾಷ್ಟ್ರೀಯ ಹೆದ್ದಾರಿ ಬಳಿ ಇರುವ ಜಿ.ಎಚ್.ಕಾಲೇಜು ಮುಂಭಾಗದಲ್ಲಿ ಜುಲೈ 12ರಂದು ಪ್ರತಿಭಟನೆ ನಡೆಸಿ, ರಾಣೆಬೆನ್ನೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಬಸ್‌ನಲ್ಲಿ ಇದ್ದ ಬಾಲಕಿ ಮೇಲೆ ಬಸ್ ಚಾಲಕರು ಹಾಗೂ ನಿರ್ವಾಹಕ ನಡೆಸಿದ ಸಾಮೂಹಿಕ ಅತ್ಯಾಚಾರ ಖಂಡಿಸಿ ಪ್ರತಿಭಟನೆ ನಡೆಸಿದರು.

ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ಸುಭಾಸ ಎಂ ಮಾತನಾಡಿ, ದೇಶಕ್ಕೆ ಸ್ವತಂತ್ರ್ಯ ಸಿಕ್ಕು 7 ದಶಕಗಳು ಕಳೆದರೂ ಕೂಡಾ ಮಹಿಳೆ ಸ್ವತಂತ್ರ ವಾಗಿ ಬದುಕಲು ಸಾಧ್ಯವಾಗದ ಸ್ಥಿತಿಯಲ್ಲಿ ಇಂದಿನ ಸಮಾಜ ನಿಂತಿರುವುದು ದುರಂತ ಎಂದರು. ಇಂತಹ ಪ್ರಕರಣಗಳಿಂದ ಒಂಟಿಯಾಗಿ ಬದುಕುವ ಉದ್ಯೋಗಸ್ಥ ಮಹಿಳೆಯರು, ವಿದ್ಯಾರ್ಥಿನಿಯರು ಬಸ್‌ಗಳಲ್ಲಿ ಪ್ರಯಾಣಿಸಲು ಆತಂಕ ಪಡುವ ಸ್ಥಿತಿ ನಿರ್ಮಾಣವಾಗಿದೆ, ಖಾಸಗಿ ಬಸ್‌ಗಳು, ಖಾಸಗಿ ವಾಹನಗಳು ಸುರಕ್ಷಿತವಲ್ಲ ಎಂಬ ಕಾರಣಕ್ಕೆ ಸರ್ಕಾರಿ ಬಸ್‌ಗಳನ್ನು ಸಾರ್ವಜನಿಕರು ಅವಲಂಬಿಸಿದ್ದಾರೆ, ಸುರಕ್ಷಿತವಾಗಿ ಪ್ರಯಾಣಿಕರನ್ನು ಅವರ ಊರುಗಳಿಗೆ ತಲುಪಿಸುವ ಜವಾಬ್ದಾರಿ ಹೊತ್ತಿರುವ ಕೆಎಸ್‌ಆರ್‌ಟಿಸಿ ಬಸ್ ಸಿಬ್ಬಂದಿಯಿಂದಲೇ ಇಂತಹ ಕೃತ್ಯ ನಡೆದಿರುವುದರಿಂದ ಬೇಲಿಯೇ ಎದ್ದು ಹೊಲ ಮೇಯಿದಂತಾಗಿದೆ. ಇದರಿಂದ ಸಾರ್ವಜನಿಕರಲ್ಲಿ ಮತ್ತಷ್ಟು ಆತಂಕವನ್ನು ಉಂಟು ಮಾಡಿದಂತಾಗಿದೆ ಎಂದರು. ರಾಣೆಬೆನ್ನೂರಿನಲ್ಲಿ ನಡೆದ ಘಟನೆ ಕುರಿತು ಸಮಗ್ರ ತನಿಖೆಯಾಗಿ ತಪ್ಪಿತಸ್ಥ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಗುರಿಪಡಿಬೇಕು. ಇನ್ನು ಒಂದು ವಾರದೊಳಗಾಗಿ ಆರೋಪಿಗಳ ಮೇಲೆ ಚಾರ್ಜಶೀಟ್ ಸಲ್ಲಿಕೆಯಾಗಬೇಕು. ಮಹಿಳಾ ಸುರಕ್ಷತೆ ಬಗ್ಗೆ ಪ್ರತ್ಯೇಕ ಕಾನೂನು ರಚನೆಯಾಗಬೇಕು. ಜಿಲ್ಲಾಡಳಿತ ಶಾಲಾ–ಕಾಲೇಜುಗಳಿಗೆ, ಬಸ್ ನಿಲ್ದಾಣಗಳಲ್ಲಿ, ಬಸ್‌ಗಳಲ್ಲಿ, ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಬೇಕು, ಈಗ ಅಳವಡಿಸಿರುವ ಸಿಸಿ ಕ್ಯಾಮರಾಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲಾ ಎಂದು ಆರೋಪಿಸಿದರು. ಶಾಲಾ–ಕಾಲೇಜುಗಳಲ್ಲಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿ ರಚನೆಯಾಗಬೇಕು, ಅತ್ಯಾಚಾರಕ್ಕೆ ಒಳಗಾದ ಬಾಲಕಿಯ ವಿದ್ಯಾಭ್ಯಾಸ ಹಾಗೂ ರಕ್ಷಣೆಯ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಹೋರಾಟಕ್ಕೆ ಬೆಂಬಲಿಸಿ ಸಿಐಟಿಯು ಜಿಲ್ಲಾ ಸಂಚಾಲಕರಾದ ವಿನಾಯಕ ಕುರುಬರ ಮಾತನಾಡಿ, ದೇಶದಲ್ಲಿ ಮಹಿಳೆಯರ ಸುರಕ್ಷತೆಗೆ ಸಾಕಷ್ಟು ಕಾನೂನುಗಳನ್ನು ಸರ್ಕಾರಗಳು ರಚಿಸಿದ್ದರೂ ಕೂಡಾ ಆಡಳಿತ ವ್ಯವಸ್ಥೆ ಲೋಪದಿಂದಾಗಿ ಯಾವುದೇ ಕಾನೂನು ಪರಿಪೂರ್ಣವಾಗಿ ಜಾರಿಯಾಗಿಲ್ಲ ಎಂದು ಆರೋಪಿಸಿದರು. ಇಂತಹ ಪ್ರಕರಣಗಳು ಜಿಲ್ಲೆಯಲ್ಲಿ ಪದೇ ಪದೇ ಮರುಕಳಿಸುತ್ತಿದ್ದರೂ ಕೂಡಾ ಜಿಲ್ಲಾಡಳಿತ ಇಂತಹ ಘಟನೆಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ, ಈ ಪ್ರಕರಣದಲ್ಲಿ ಜಿಲ್ಲಾಡಳಿತ ಮಧ್ಯಪ್ರವೇಶ ಮಾಡಿ ಈ ಘಟನೆಗೆ ಕಾರಣರಾದ ಕೆಎಸ್‌ಆರ್‌ಟಿಸಿಯ ಬೇಜವಾಬ್ದಾರಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.



ಎಸ್‌ಎಫ್‌ಐ ತಾಲೂಕು ಅಧ್ಯಕ್ಷರಾದ ಬಸನಗೌಡ ಭರಮಗೌಡ್ರ, ಸಾಮಜಿಕ ಪರಿವರ್ತನಾ ಜನಾಂದೋಲನದ ಮುಖ್ಯಸ್ಥರಾದ ಹಸಿನಾ ಹೆಡಿಯಾಲ, ವಿದ್ಯಾರ್ಥಿನಿಯರ ಮುಖಂಡರಾದ ಹೀನಾ ಕೌಸರ್ ಹತ್ತಿಕಾಳ,. ಐಶ್ವರ್ಯ ಜಿ.ವಿ, ಭಾಗ್ಯಾ ಮಡಿವಾಳರ, ಅಂಬಿಕಾ ಕರೆಮಣ್ಣನವರ, ಸುಷ್ಮಾ ಶ್ಯಾಡಂಬಿ, ನಂದಾ ಕುಂಚೂರು, ಜ್ಯೋತಿ ಪಿ ಹಾಗೂ ನೂರಾರು ಜನ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಸುಭಾಸ ಎಂ

ನಿವೇಶನ ರಹಿತರಿಗೆ ನಿವೇಶನ ನೀಡಬೇಕೆಂದು ಒತ್ತಾಯಿಸಿ ಧರಣಿ



ಬೆಂಗಳೂರು ನಗರದಲ್ಲಿ ನೂರಾರು ಸ್ಲಂ ಮತ್ತು ಸರ್ಕಾರಿ ಭೂಮಿಗಳಲ್ಲಿ ಕೂಲಿ–ನಾಲಿ ಮಾಡಿ ಬದುಕುವ ದಲಿತರು, ಅಲ್ಪಸಂಖ್ಯಾತ ಹಾಗು ಹಿಂದುಳಿದ ವರ್ಗಕ್ಕೆ ಸೇರಿದ ಜನರು ಗುಡಿಸಲು ಕಟ್ಟಿ–ಕೊಂಡು 30–40 ವರ್ಷಗಳಿಂದ ವಾಸ ಮಾಡುತ್ತಿರುವ ಜನರಿಗೆ ಹಕ್ಕು ಪತ್ರ ಮತ್ತು ನಿವೇಶನ ರಹಿತರಿಗೆ ನಿವೇಶನ ನೀಡಬೇಕು ಎಂದು ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯಕರ್ತರು ನಗರದ ಪುರಭವನದ ಎದುರು ಜುಲೈ 10ರಂದು ಧರಣಿ ನಡೆಸಿದರು.

ಈ ವೇಳೆ ಮಾತನಾಡಿದ ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಆರ್ ಶ್ರೀನಿವಾಸ್ ರವರು ದೇಶದ ಪ್ರತಿಯೊಬ್ಬ ನಾಗರೀಕನಿಗೂ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಶಿಕ್ಷಣ, ವಸತಿ, ಆರೋಗ್ಯ, ಉದ್ಯೋಗ ನೀಡಬೇಕಾದದ್ದು ಸರ್ಕಾರಗಳ ಆದ್ಯ ಕರ್ತವ್ಯ. ಆದರೆ ನಮಗೆ ಸ್ವತಂತ್ರ ಬಂದು 70 ವರ್ಷಗಳು ಕಳೆದರೂ ತಲೆಗೊಂದು ಸೂರು ಇಲ್ಲದೆ, ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಲಕ್ಷಾಂತರ ಕಾರ್ಮಿಕರು ನಗರದಲ್ಲಿದ್ದು ಬರುವ ಆದಾಯದಲ್ಲಿ ಬಾಡಿಗೆ ಮನೆ ಮಾಡಿಕೊಂಡು ಹೊಟ್ಟೆ ತುಂಬ ಊಟ ಮಾಡಲಾರದೆ, ಸರಿಯಾದ ಶಿಕ್ಷಣ ಕೊಡಿಸಲಾಗದೆ, ಕಾಯಿಲೆ ಬಂದಾಗ ಸರಿಯಾದ ಚಿಕಿತ್ಸೆ ಪಡೆಯಲಾರದಂತಾ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಹಲವಾರು ಬಾರಿ ಹೋರಾಟಗಳು ನಡೆದಿದ್ದರೂ ಇವತ್ತಿಗೂ ನಿವೇಶನ ಅನ್ನುವುದು ಈ ಜನರಿಗೆ ಮರೀಚಿಕೆಯಾಗಿದೆ. ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎ. ಟಿ. ರಾಮಸ್ವಾಮಿ ಸಮಿತಿ ವರದಿ ಅನ್ವಯ ವಶಪಡಿಸಿಕೊಂಡಿ 41 ಸಾವಿರು ಎಕರೆ ಜಮೀನಿನಲ್ಲಿ ಕನಿಷ್ಠ 1 ಸಾವಿರ ಎಕರೆ ಭೂಮಿಯನ್ನು ನಿವೇಶನ ರಹಿತರಿಗೆ ಹಂಚಿಕೆಗೆ ಮೀಸಲಿಡಬೇಕು. ಸ್ಲಂಗಳಲ್ಲಿ ವಾಸಿಸುತ್ತಿರುವವರಿಗೆ ಕೂಡಲೇ ನಿವೇಶನಗಳನ್ನು ನೀಡಬೇಕು. ಕೆರೆ ಅಂಗಳದಲ್ಲಿ ಹಾಗೂ ಸರಕಾರಿ ಭೂಮಿಯಲ್ಲಿ ಮನೆ ನಿರ್ಮಿಸಿಕೊಂಡುರುವ ಬಡವರನ್ನು ವಿನಾಕಾರಣ ಒಕ್ಕಲೆಬ್ಬಿಸಬಾರದು.

ಅಸಂಘಟಿತ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಭೂಮಿ ನೀಡಬೇಕು ಹಾಗೂ ಭೂ ಮತ್ತು ನಿವೇಶನಕ್ಕಾಗಿ ಸಲ್ಲಿಸಿರುವ ಅರ್ಜಿಗಳನ್ನು ಪರಿಷ್ಕರಣೆ ಮಾಡಿ, ಸಂಬಂಧಿಸಿದವರಿಗೆ ವಿತರಿಸಬೇಕು ಮತ್ತು ನಿವೇಶನ ರಹಿತರಿಗೆ ನೀವೇಶ ನಡುವಂತೆ ಆಗ್ರಹಿಸಿ ಜಿಲ್ಲಾಧಿಕಾರಗಳ ಮುಖಾಂತರ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಪಕ್ಷದ ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ.ಎನ್ ಉಮೇಶ್, ಮುಖಂಡರಾದ ಗೌರಮ್ಮ, ಗೋಪಾಲ ಗೌಡ, ಬಿ.ಎನ್ ಮಂಜುನಾಥ, ಟಿ. ಲೀಲಾವತಿ, ನಂಜೇಗೌಡ, ಮತ್ತಿತರರು ಉಪಸ್ಥಿತರಿದ್ದರು.



ನೈಜ ರಾಷ್ಟ್ರೀಯತೆ ಕುರಿತ ಕೃತಿ ಬಿಡುಗಡೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಮೈಸೂರು ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಜುಲೈ 12ರಂದು 'ಇಂಡಿಯಾ ವಾಸ್ತವ–ರಾಷ್ಟ್ರೀಯತೆ' ಎಂಬ ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರೊ. ಕೆ.ಪಿ.ವಾಸುದೇವನ್ ಹಾಗೂ ಕಾಂ॥ಎನ್.ವಿಜಯ್‌ಕುಮಾರ್ ಅನುವಾದಿಸಿರುವ ಕೃತಿಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ಜಿ.ಎನ್.ನಾಗರಾಜ್ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, "ರಾಷ್ಟ್ರೀಯತೆ ಕುರಿತು ರಚಿತವಾಗಿರುವ ಈ ಕೃತಿ ಅನನ್ಯವಾಗಿ ಮೂಡಿಬಂದಿದೆ. ನೈಜ ರಾಷ್ಟ್ರೀಯತೆ ಹಾಗೂ ಶೋಷಣೆಗೆ ಒಳಪಟ್ಟ ಜನರ ಕುರಿತು ರಚಿತವಾಗಿದ್ದು ಹುಸಿ ರಾಷ್ಟ್ರೀಯವಾದದ ಬಗ್ಗೆ ತಿಳಿಸಿಕೊಡುತ್ತದೆ. ವಸಾಹತುಶಾಹಿ ರಾಷ್ಟ್ರೀಯವಾದಕ್ಕೂ ನೈಜ ರಾಷ್ಟ್ರೀಯ ವಾದಕ್ಕೂ ಇರುವ ವ್ಯತ್ಯಾಸವನ್ನು ಕೃತಿಯಲ್ಲಿ ಕಟ್ಟಿಕೊಡಲಾಗಿದೆ" ಎಂದು ಹೇಳಿದರು.

ಸಮಾರಂಭದಲ್ಲಿ ರಾಜ್ಯ ಕಾರ್ಯದರ್ಶಿ ಕಾಂ॥ಜಿ.ವಿ.ಶ್ರೀರಾಮರೆಡ್ಡಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ವಿ.ಜೆ.ಕೆ.ನಾಯರ್, ಜಿಲ್ಲಾ ಕಾರ್ಯದರ್ಶಿ ಕಾಂ॥ಕೆ.ಬಸವರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜುಲೈ 26 ರಂದು ಕಟ್ಟಡ ಕಾರ್ಮಿಕರ ಪ್ರತಿಭಟನೆ

'ಕಟ್ಟಡ ನಿರ್ಮಾಣ ಹಾಗೂ ಇತರೆ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಸೌಕರ್ಯಗಳನ್ನು ಕಲ್ಪಿಸುವಲ್ಲಿ ವಿಫಲವಾಗಿರುವ ಸರ್ಕಾರದ ಕ್ರಮವನ್ನು ಖಂಡಿಸಿ ಸಚಿವರ ಮತ್ತು ಶಾಸಕರ ಮನೆಗೆ ಮುತ್ತಿಗೆ ಹಾಗೂ ಪ್ರತಿಭಟನೆಯನ್ನು ಜುಲೈ 26ರಂದು ಹಮ್ಮಿಕೊಳ್ಳಲಾಗಿದೆ' ಎಂದು ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶರವರು ತಿಳಿಸಿದರು.

ಜುಲೈ 13ರಂದು ಕೋಲಾರ ನಗರದ ಪತ್ರಕರ್ತರ ಭವನದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ 'ಕಾರ್ಮಿಕರ ಅಭಿವೃದ್ಧಿಗಾಗಿ ಸರ್ಕಾರವೇ ಸ್ಥಾಪನೆ ಮಾಡಿರುವ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಇದುವರೆಗೂ 11.2 ಲಕ್ಷ ಮಂದಿ ಕಾರ್ಮಿಕರು ನೊಂದಣಿ ಮಾಡಿಸಿಕೊಂಡಿದ್ದಾರೆ. 'ಕಾರ್ಮಿಕರ ನೋಂದಣಿ ಹಾಗೂ ಸೆಸ್ ಮೂಲಕ ರೂ 5650 ಕೋಟಿ ಸಂಗ್ರಹವಾಗಿದೆ. ಆದರೆ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಇದುವರೆಗೂ ರೂ.117 ಕೋಟಿ ಮಾತ್ರ ವೆಚ್ಚ ಮಾಡಿದೆ. ಉಳಿದ ಹಣವನ್ನು ಏನು ಮಾಡಿದ್ದಾರೆ ಎಂಬ ಪ್ರಶ್ನೆಗೆ ಅಧಿಕಾರಿಗಳಿಂದ ಇದುವರೆಗೂ ಉತ್ತರ ನೀಡುವಲ್ಲಿ ಅಸಡ್ಡೆ ತೋರುತ್ತಿದ್ದಾರೆ' ಎಂದು ಆರೋಪಿಸಿದರು.

'ಈ ಹಿಂದೆ ಮಂಡಳಿಯವರು ರೂ.750 ಕೋಟಿ ಹಣವನ್ನು ದುಂದವೆಚ್ಚ ಮಾಡಲು ಪ್ರಯತ್ನಿಸುತ್ತಿದ್ದರು, ಇದರ ವಿರುದ್ಧ ಸಿಐಟಿಯು ನಡೆಸಿದ ಹೋರಾಟದಿಂದ ಹಣವನ್ನು ಕಾರ್ಮಿಕರ ಕಲ್ಯಾಣಕ್ಕಾಗಿ ವೆಚ್ಚ ಮಾಡಲು ಮುಂದಾಗಿದೆ' ಎಂದರು.

'ಕಲ್ಯಾಣ ಮಂಡಳಿಯಲ್ಲಿ ನೊಂದಣಿಯಾಗಿರುವ ಫಲಾನುಭವಿಗಳಿಗೆ ತ್ವರಿತಗತಿಯಲ್ಲಿ ಸೌಕರ್ಯಗಳನ್ನು ನೀಡಬೇಕು. ಕಾರ್ಮಿಕರು ನೊಂದಣಿ ಮಾಡಿಸಿಕೊಳ್ಳಲು

ಪುಟ 6 ಕ್ಕೆ

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಲಿಂಚಿಂಗ್ ಕೊಲೆಯಲ್ಲವೇ?

ಇಂದಿನ ಇಡೀ ರಾಜಕೀಯ ವ್ಯವಸ್ಥೆಯು ಇವುಗಳನ್ನು ಕೊಲೆಯೆಂದು ಒಪ್ಪುತ್ತಿಲ್ಲ. ಏಕೆಂದರೆ ಈ ಪ್ರಭುತ್ವದ ಸಿದ್ಧಾಂತಗಳ ಮೂಲವಾಗಿರುವ ಆರ್.ಎಸ್.ಎಸ್ ಮೊದಲಿನಿಂದಲೂ "ಸೈದ್ಧಾಂತಿಕ ಕೊಲೆಗಳನ್ನು" ಸಮರ್ಥಿಸುತ್ತಲೇ ಬಂದಿದೆ.

'ಲಿಂಚಿಂಗ್' ಎನ್ನುವ ಪದವನ್ನು ನಾನು ಮೊದಲು ನೋಡಿದ್ದು ಅಮೇರಿಕದ ಕಪ್ಪು ಜನರ ಮೇಲೆ ಅಲ್ಲಿಯ ಜನಾಂಗೀಯ ದ್ವೇಷದ ಸಂಘಟನೆಯಾಗಿದ್ದ ಕೆ.ಕೆ.ಕೆ. (ಕೂ ಕ್ಲುಕ್ಸ್ ಕ್ಲಾನ್) ಮಾಡುತ್ತಿದ್ದ ಮಾರಣಾಂತಿಕ ಹಲ್ಲೆಗಳ ಕಥನಗಳಲ್ಲಿ. ಒಂದು ಗುಂಪು ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಹೊಡೆದು ಸಾಯಿಸುವುದು ಎಂಬುದು ಅದರ ಅರ್ಥ. ಆದರೆ ಅದನ್ನು ಕೊಲೆಯೆಂದು ಯಾಕೆ ಕರೆಯುವುದಿಲ್ಲವೆಂದು ಯೋಚಿಸಿದಾಗ ಎಲ್ಲೋ ಆಳದಲ್ಲಿ ಅದನ್ನು ಸಮರ್ಥಿಸುವ ಮನೋಭಾವನೆ ಕೆಲಸ ಮಾಡುತ್ತದೆ ಎನ್ನುವುದು ಗೊತ್ತಾಗುತ್ತದೆ. ಅದೇ ರೀತಿ ಇಂಡಿಯ ದೇಶದಲ್ಲಿ ಕೋಮು ಗಲಭೆಯಲ್ಲಿ ಹತ್ಯೆಗಳಾದಾಗ ಅವುಗಳನ್ನು ಕೊಲೆಯೆಂದು ಕರೆಯುವುದಿಲ್ಲ. ಈ ಘಟನೆಗಳಿಗೆ ಒಂದು ನ್ಯಾಯಬದ್ಧತೆ ಇದೆಯೆನ್ನುವ ಹಾಗೆ ಅಥವಾ ಅವು ಆ ಕ್ಷಣದ ಉನ್ಮಾದದಲ್ಲಿ ಆಗಿರುವ ಸಂಗತಿಗಳು, ಪೂರ್ವ ನಿಯೋಜಿತವಲ್ಲವೆಂದು ಭಾವಿಸಲಾಗುತ್ತದೆ. ಹೀಗೆಂದು ನಮ್ಮ ಮಾಧ್ಯಮಗಳು ಪರೋಕ್ಷವಾಗಿ ವ್ಯಾಖ್ಯಾನಿಸುತ್ತವೆ.

ಗುಜರಾತಿನಲ್ಲಿ ಭೀಕರ ಪ್ರಮಾಣದ ಜನಾಂಗೀಯ ಹತ್ಯೆ ನಡೆದಾಗ ಅಲ್ಲಿಯ ಮುಖ್ಯ ಮಂತ್ರಿಗಳು "ಅದು ಕ್ರಿಯೆಗೆ ಪ್ರತಿಕ್ರಿಯೆ" ಎಂದು ವಿವರಿಸಿದ್ದರು. ಇತ್ತೀಚೆಗೆ 20 ತಿಂಗಳಲ್ಲಿ 19 ಕೊಲೆಗಳು ಗೋರಕ್ಷಣೆಯ ಹೆಸರಿನಲ್ಲಿ ನಡೆದಿವೆ. ಇವು ಸಾರ್ವಜನಿಕವಾಗಿ ನಡೆದಿವೆ. ಹಾಗೂ ಬಹುಪಾಲು ಮೊಬೈಲ್ ವಿಡಿಯೋಗಳಲ್ಲಿ, ಫೋಟೊಗಳಲ್ಲಿ ದಾಖಲೆ ಕೂಡ ಆಗಿವೆ. ಆದರೆ ಇಂದಿನ ಇಡೀ ರಾಜಕೀಯ ವ್ಯವಸ್ಥೆಯು ಇವುಗಳನ್ನು ಕೊಲೆಯೆಂದು ಒಪ್ಪುತ್ತಿಲ್ಲ. ಏಕೆಂದರೆ ಈ ಪ್ರಭುತ್ವದ ಸಿದ್ಧಾಂತಗಳ ಮೂಲವಾಗಿರುವ ಆರ್.ಎಸ್.ಎಸ್ ಮೊದಲಿನಿಂದಲೂ "ಸೈದ್ಧಾಂತಿಕ ಕೊಲೆಗಳನ್ನು" ಸಮರ್ಥಿಸುತ್ತಲೇ ಬಂದಿದೆ. ಜರ್ಮನಿಯಲ್ಲಿ ಹಿಟ್ಲರ್‌ನ ಪಕ್ಷವು ಯಹೂದಿಗಳನ್ನು ಕೊಲ್ಲುವುದೇ ಅಂತಿಮ ಪರಿಹಾರ (ದಿ ಫೈನಲ್ ಸೊಲ್ಯೂಶನ್) ಎಂದಿದ್ದನ್ನು ಮತ್ತು ಆ ಬಗೆಗಿನ ಕಾರ್ಯಾಚರಣೆಗಳನ್ನು ಆರ್.ಎಸ್.ಎಸ್.ನ ಸೈದ್ಧಾಂತಿಕ ಗುರುಗಳು ಮೆಚ್ಚಿ ಸಮರ್ಥಿಸಿದ್ದರು. ಗೋಲ್ವಾಲ್ಕರ್ ಹಿಂದು ರಾಷ್ಟ್ರದ "ಇತರರನ್ನು" ಹೀಗೆಯೇ ಮಾಡಿ ಶುದ್ಧೀಕರಣಗೊಳಿಸಬೇಕೆನ್ನುವ ಆಶಯವನ್ನು ವ್ಯಕ್ತಪಡಿಸಿದ್ದರು.



ಕು ಕ್ಲುಕ್ಸ್ ಕ್ಲಾನ್ ಲಿಂಚಿಂಗ್: 150 ವರ್ಷಗಳಿಂದ ಅಮೆರಿಕದಲ್ಲಿ ಸಕ್ರಿಯವಾಗಿರುವ ಸಂಘಟನೆ 'ಕು ಕ್ಲುಕ್ಸ್ ಕ್ಲಾನ್' ಕರಿಯರ ಲಿಂಚಿಂಗ್‌ಗೆ ಕುಖ್ಯಾತವಾದ ಸಂಘಟನೆ. 'ಕು ಕ್ಲುಕ್ಸ್ ಕ್ಲಾನ್' ಕರಿಯನ ಲಿಂಚಿಂಗ್ ಮಾಡುತ್ತಿರುವ ದೃಶ್ಯ

ಈ ಬಗೆಯ ಚಿಂತನೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿರುವ ಪಕ್ಷದ ಪ್ರಭುತ್ವವು ಮುಸ್ಲಿಮ್‌ರ ಕೊಲೆಗಳನ್ನು ಪರೋಕ್ಷವಾಗಿ ಸಮರ್ಥಿಸುತ್ತಿದೆ. ಇದರ ಹಿಂದಿನ ರಾಜಕಾರಣವು ಬಹಳ ಸರಳವಾಗಿದೆ. ಇಂಥ ಭಯೋತ್ಪಾದನೆಯ ಮೂಲಕ ಮುಸ್ಲಿಮ್ ಜನಾಂಗವನ್ನು ಇದ್ದರೂ ಇಲ್ಲದಂತೆ ಮಾಡುವುದು, ಯಾವ ಪ್ರತಿರೋಧವೂ ಇಲ್ಲದೆ ಬಹುಮತದ ಆಳ್ವಿಕೆಯನ್ನು ಒಪ್ಪಿಕೊಳ್ಳುವಂತೆ ಮಾಡುವುದು. ಆದ್ದರಿಂದಲೇ ದೇಶದ ಪ್ರಧಾನ ಮಂತ್ರಿಗಳು ತಮ್ಮ ಭಾಷಣದಲ್ಲಿ ಗೋ ಭಯೋತ್ಪಾದಕರನ್ನು ಕ್ಲಾಸ್‌ನಲ್ಲಿ ಸೀಮೆಸುಣ್ಣ ಕದ್ದ ಮಕ್ಕಳಿಗೆ ಬೈಯುವಂತೆ ಬೈದಿದ್ದಾರೆ. ಆದ್ದರಿಂದಲೇ ಆ ಭಾಷಣ ಆಗಿ 24 ಗಂಟೆಯಲ್ಲಿ ಇನ್ನೊಂದು ಕೊಲೆ ನಡೆದಿದೆ.

ಇಡೀ ದೇಶವೇ ಈ ಸಾರ್ವಜನಿಕ ಕೊಲೆಗಳು ಸಂಕೇತಿಸುವ ನೈತಿಕ ಅಧಃಪತನದ ಬಗ್ಗೆ ತೀವ್ರ ಕಳವಳದಿಂದ ಚಿಂತಿಸಬೇಕಾಗಿದೆ. "ಸಕಲ ಜೀವಿಗಳ ಲೇಸನ್ನು" ಬಯಸುವ ನೂರಾರು ಸಾಂಸ್ಕೃತಿಕ ಸಂಪ್ರದಾಯಗಳು, ಭಕ್ತಿ ಸಂಪ್ರದಾಯಗಳ ದೇಶದಲ್ಲಿ ಮನುಷ್ಯ ಜೀವಿಗಳ ಕೊಲೆಯನ್ನು ಸಮರ್ಥಿಸುವಂಥ ಅಥವಾ ನಿಷ್ಕ್ರಿಯವಾಗಿ ಅದನ್ನು ನೋಡುವಂಥ ಸಾವಿನ ಸ್ಥಿತಿಯನ್ನು ನಮ್ಮ ಸಾಮುದಾಯಿಕ ನೈತಿಕತೆಯು ತಲುಪಿದೆ. ಇಂಥ ಕೊಲೆಗಾರ ರಾಜಕೀಯವನ್ನು ಅಲಕ್ಷಿಸಿ ನಾಯಕನ ಕುರುಡು ಆರಾಧನೆಯಲ್ಲಿ ತೊಡಗಿರುವ ಸಮೂಹ ಸನ್ನಿಯಲ್ಲಿರುವ ಜನಸಮುದಾಯವು ಭಾರತದ ಕೊನೆಗಾಲವನ್ನು ಬರಮಾಡಿಕೊಳ್ಳುತ್ತದೆಯೆ? ನಮ್ಮೆಲ್ಲ ವಿಮರ್ಶೆ, ಅನುಮಾನ ಹಾಗೂ ವಿರೋಧಗಳೇನೆ ಇದ್ದರೂ ಭಾರತೀಯ ನಾಗರೀಕತೆ ಅಪಾರವಾದ ಬಹುಮುಖತ್ವವನ್ನು ಸಾವಿರಾರು ವರ್ಷ ನಿರಂತರವಾಗಿ ಕಾಪಾಡಿಕೊಂಡು ಬಂದ ನಾಗರೀಕತೆ. ವಿಶ್ವದ ಇನ್ನಾವ ನಾಗರೀಕತೆಯೂ ಇಂಥ ಬಹುತ್ವದ ಚರಿತ್ರೆಯನ್ನು ಹೊಂದಿಲ್ಲ. ಕೇವಲ ನೂರು ವರ್ಷಗಳ ಚರಿತ್ರೆ ಇರುವ ಕೆಲವೇ ವರ್ಷಗಳ ರಾಜಕೀಯ ಅಧಿಕಾರ ಪಡೆದಿರುವ ಒಂದು ಸಂಸ್ಥೆ, ಒಂದು ಪಕ್ಷವು ಈ ಭಾರತೀಯ ನಾಗರೀಕತೆಯನ್ನು ಮುಗಿಸಲು ನಾವು ಬಿಡಬೇಕೆ? ಇದು ಕೆಲವರಿಗೆ ಅತಿಶಯೋಕ್ತಿಯಾಗಿ ಅಥವಾ ವಿಪರ್ಯಾಸವಾಗಿ ಕಾಣಬಹುದು.

ನಮ್ಮೆದುರಿಗೆ ಇರುವ ಸವಾಲುಗಳು `Law and order' ನ ಸಮಸ್ಯೆಗಳಲ್ಲ. ಇವು ಮೂಲತಃ ನಾಗರೀಕತೆಯ ಪ್ರಶ್ನೆಗಳು. ಭಾರತೀಯ ನಾಗರೀಕತೆಯು ತನ್ನ ವಿಶಿಷ್ಟವಾದ ಚರಿತ್ರೆಯಿಂದಾಗಿ ಅಸಂಖ್ಯ ಭಾಷೆ, ಜಾತಿ, ಧರ್ಮ ಹಾಗೂ ಸಂಸ್ಕೃತಿಗಳ ಬಹುತ್ವದ ಹಾಗೂ ಸಹಬಾಳ್ವೆಯ ನಾಗರೀಕತೆಯಾಗಿದೆ. ಇದು ಈ ನಾಗರೀಕತೆಯ ಜೀವಶಕ್ತಿಯಾಗಿದೆ. ಇದು ನಾಶವಾದರೆ ಈ ನಾಗರೀಕತೆ ಉಳಿಯುವ ಯಾವ ಸಾಧ್ಯತೆಯೂ ಇಲ್ಲ. ಬಹುತ್ವವನ್ನು ನಾಶ ಮಾಡುವುದನ್ನೇ ತನ್ನ ಉದ್ದೇಶವಾಗಿಟ್ಟು ಕೊಂಡಿರುವ ಸಂಸ್ಥೆಯು ಈಗ ರಾಜಕೀಯ ಅಧಿಕಾರವನ್ನು ಪಡೆದುಕೊಂಡಿದೆ. ಇದರ ವಿರುದ್ಧ ಈಗಲೂ ನಾವು ಜನಾಂದೋಲನಗಳನ್ನು ಕಟ್ಟದಿದ್ದರೆ ಒಂದು ನಾಗರೀಕತೆಯ ಅವಸಾನಕ್ಕೆ ನಾವು ಸಾಕ್ಷಿಯಾಗುತ್ತೇವೆ.



ಲಿಂಚಿಂಗ್ : ಅಗಸ್ಟ್ 7, 1930 ರಂದು ಅಮೆರಿಕದ ಇಂಡಿಯಾನ ಪ್ರಾಂತ್ಯದ ಮರಿಯನ್ ಎಂಬಲ್ಲಿ ಇಬ್ಬರು ಕರಿಯರನ್ನು ಹೊಡೆದು ಸಾಯಿಸಿ ಬಿಳಿಯರು ಸಂಭ್ರಮಿಸುತ್ತಿರುವ ಕುಖ್ಯಾತ ಚಿತ್ರ

ನಾಳಿನ ಕಾರ್ಯಕ್ರಮಗಳು

ಎಸ್.ಎಫ್.ಐ.ನ ರಾಜ್ಯ ಮಟ್ಟದ (ಉತ್ತರ) ಅಧ್ಯಯನ ಶಿಬಿರ ಗಜೇಂದ್ರಗಡ ಜುಲೈ 15–18

ವಿದ್ಯುತ್ ಗುತ್ತಿಗೆ ಕಾರ್ಮಿಕರ ರಾಜ್ಯ ಸಮ್ಮೇಳನ ಜುಲೈ 19–20 ಬೆಂಗಳೂರು

ಜಿಲ್ಲಾ ಮಟ್ಟದ ಜನಶಕ್ತಿ ಉತ್ಸವ, ಪ್ರಸಾರಾಂದೋಲನ, ಸಮಾವೇಶಗಳು ಜುಲೈ 23 ರಿಂದ ಅಗಸ್ಟ್ 6

ಬೀಡಿ ಕಾರ್ಮಿಕರ 6 ನೇ ರಾಜ್ಯ ಸಮ್ಮೇಳನ ಜುಲೈ 24–25 ಮೂಡಬಿದರೆ

ಸಚಿವರ ಮತ್ತು ಶಾಸಕರ ಮನೆಗೆ ಮುತ್ತಿಗೆ ಕಟ್ಟಡ ಕಾರ್ಮಿಕರ ಸಂಘಟನೆ ಜುಲೈ 26

ಕ್ಯೂಬಾ ಚೆ ಕ್ಯಾಸ್ಟ್ರೊ ಜುಲೈ 26 ಬೆಂಗಳೂರು

ಸಮಾಜವಾದಿ ಕ್ರಾಂತಿ ಮತ್ತು ವಿಜ್ಞಾನ ಜುಲೈ 29 ಬೆಂಗಳೂರು

ಕಾರ್ಮಿಕರ ರಾಜ್ಯ ಜಾಥಾ ಜುಲೈ 29– ಅಗಸ್ಟ್ 13, ಸಿಐಟಿಯು, ರಾಜ್ಯಾದ್ಯಂತ

ಬುಡಕಟ್ಟು ಮಹಾಕಾವ್ಯಗಳು ಅಗಸ್ಟ್ 9 ಸಮುದಾಯ, ಧಾರವಾಡ

ಕಾರ್ಮಿಕರ ಅಹೋರಾತ್ರಿ ಧರಣಿ ಅಗಸ್ಟ್ 14 ಸಿಐಟಿಯು, ರಾಜ್ಯಾದ್ಯಂತ

ಜನಶಕ್ತಿ ರಾಜ್ಯ ಮಟ್ಟದ ಉತ್ಸವ 2017 ಅಗಸ್ಟ್ 19 ಬೆಂಗಳೂರು

ಸಮಾಜವಾದಿ ಕ್ರಾಂತಿ ಮತ್ತು ಸಂಸ್ಕೃತಿ ಅಗಸ್ಟ್ 20 ಬೆಂಗಳೂರು

ಸಾರ್ವತ್ರಿಕ ಮಹಾಮುಷ್ಕರ ಸೆಪ್ಟೆಂಬರ್ 14

ಕಟ್ಟಡ ಕಾರ್ಮಿಕರ ಪ್ರತಿಭಟನೆ.... ಪುಟ 5 ರಿಂದ

ಇರುವ ಆನ್ ಲೈನ್ ವ್ಯವಸ್ಥೆಯನ್ನು ಸರಿಪಡಿಸಬೇಕು. ಕಟ್ಟಡ ನಿರ್ಮಾಣ ಮಾಡಲು ಇರುವ ಮರಳು ಸಮಸ್ಯೆಯನ್ನು ಬಗೆಹರಿಸಬೇಕು. ಸರ್ಕಾರ ಘೋಷಿಸಿರುವಂತೆ ವಸತಿ ಸಹಿತ ಭವಿಷ್ಯನಿಧಿ ಯೋಜನೆಯನ್ನು ಜಾರಿಗೊಳಿಸಬೇಕು ಎಂದು ಬಹುದಿನಗಳಿಂದ ಹೋರಾಟಗಳನ್ನು ನಡೆಸಿದ್ದರು ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸರ್ಕಾರಗಳು ಸಂಪೂರ್ಣವಾಗಿ ವಿಫಲವಾಗಿವೆ' ಎಂದು ಆರೋಪಿಸಿದರು

'ಜಾನುವಾರು ಮಾರಾಟ ನಿಷೇಧದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರ ಸಮಸ್ಯೆಯನ್ನು ಬಗೆಹರಿಸಬೇಕು. ಕಾರ್ಮಿಕರ ಹಾಗೂ ಬಡವರ ಹಿತದೃಷ್ಟಿಯಿಂದ ಕಸ್ತೂರಿ ರಂಗನ್ ವರದಿ ಜಾರಿಯನ್ನು ರದ್ದುಪಡಿಸಬೇಕು ಸರ್ಕಾರದ ಮುಂದೆ ಪ್ರಮುಖವಾಗಿ ಬೇಡಿಕೆಗಳನ್ನು ಇಡಲಾಗಿತ್ತು. ಇದಕ್ಕೆ ಪ್ರತಿಕ್ರಿಯೆ ನೀಡಿದ ಸರ್ಕಾರದ ವಿರುದ್ಧ ಜುಲೈ 26ರಿಂದ ಹಂತಹಂತವಾಗಿ ಹೋರಾಟಗಳನ್ನು ನಡೆಸಲು ತೀರ್ಮಾನಿಸಲಾಗಿದೆ' ಎಂದು ಹೇಳಿದರು.

'ಜುಲೈ 26ರಂದು ಸಚಿವರ ಹಾಗೂ ಶಾಸಕರ ಮನೆಗೆ ಮುತ್ತಿ, ಆ.14ರಂದು ಮಧ್ಯರಾತ್ರಿ ಧರಣಿ ಸತ್ಯಾಗ್ರಹ ಹಾಗೂ ಸೆ.14ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿ ನಡೆಸಲಾಗುವುದು. ಇದು ಯಾವುದಕ್ಕೂ ಸರ್ಕಾರ ಮಣಿಯದಿದ್ದರೆ ಮುಂದಿನ ಹೋರಾಟವನ್ನು ತೀವ್ರಗೊಳಿಸಲಾಗುವುದು' ಎಂದು ಎಚ್ಚರಿಸಿದರು.

ಫೆಡರೇಷನ್‌ನ ರಾಜ್ಯ ಸಮಿತಿ ಸದಸ್ಯ ವಿಜಯಕೃಷ್ಣ, ಜಿಲ್ಲಾ ಕಾರ್ಯದರ್ಶಿ ಎಂ.ಭೂಮರಾಜ್, ಜಿಲ್ಲಾ ಖಂಜಾಂಚಿ ಎನ್.ಅಶೋಕ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಭಾರತ-ಚೀನಾ ವಿವಾದ : ಮಾತುಕತೆ ಬಿಟ್ಟು ಬೇರೆ ದಾರಿ ಇಲ್ಲ



ಗಡಿಯ ಬಗ್ಗೆ ಆಗಾಗ ಏಳುವ ಭಿನ್ನಾಭಿಪ್ರಾಯಗಳನ್ನು ಸೂಕ್ತ ಚೌಕಟ್ಟು ಇರುವ ಮಾತುಕತೆ-ಚೌಕಾಸಿ ಮೂಲಕ ಪರಿಹರಿಸುವುದಲ್ಲದೆ, ಬೇರೆ ಸಾಧ್ಯತೆಯಿಲ್ಲ ಎಂದು ಮೋದಿ ಸರಕಾರ ಅರಿತುಕೊಳ್ಳಬೇಕು. ಈ ವಿವಾದದಲ್ಲಿ ಭೂತಾನ್ ಮುಖ್ಯ ವಾದಿ ಎಂಬುದನ್ನು ಸಹ ಅರಿತುಕೊಳ್ಳಬೇಕು. ಭೂತಾನ್ ಭಾರತದ "ಸಂರಕ್ಷಿತ ಸಂಸ್ಥಾನ" ಅಲ್ಲ ಎಂಬುದನ್ನೂ ನೆನಪಿನಲ್ಲಿಡಬೇಕು. 1984ರಿಂದ ಭೂತಾನ್ ಗಡಿ ವಿಚಾರಗಳ ಬಗ್ಗೆ ಚೀನಾದ ಜತೆ ನೇರವಾಗಿ ಚೌಕಾಸಿ ಮಾಡುತ್ತಿದೆ ಎಂಬುದನ್ನೂ ಗಮನಿಸಬೇಕು. ದೊಕ್ಲಾಂ ಪಾತಳಿ ಮತ್ತಿತರ ವಿವಾದಗಳ ಬಗೆಗೆ ಭೂತಾನ್ ನೇರವಾಗಿ ಚೀನಾದ ಜತೆ ಚೌಕಾಸಿ ಮಾಡಲು ಅವಕಾಶ ಮಾಡಿಕೊಡುವುದು ಉತ್ತಮ. ಭಾರತ ಭೂತಾನ್ ನಿಲುವುಗಳಿಗೆ ಬೆಂಬಲ ನೀಡಬಹುದು.



ಪ್ರಕಾಶ್ ಕಾರಟ್

ಭಾರತ, ಚೀನಾ ಮತ್ತು ಭೂತಾನ್ ಮೂರೂ ದೇಶಗಳು ಸೇರುವಲ್ಲಿರುವ ದೊಕ್ಲಾಮ್ ಪಾತಳಿಯಲ್ಲಿ ಇಂಡಿಯಾ-ಚೀನಾ ಹಣಾಹಣಿ ಶುರುವಾಗಿ ಈಗಾಗಲೇ ಒಂದು ತಿಂಗಳಾಗಿದೆ. ಗಡಿ ಸಂಬಂಧಿಸಿ ವಿವಾದಗಳು ಭಿನ್ನಾಭಿಪ್ರಾಯಗಳು ಹೊಸದೇನಲ್ಲ. ಹಲವು ವರ್ಷಗಳಿಂದ ಆಗಾಗ ತಲೆದೋರುತ್ತಲೇ ಇದ್ದವು. ಆದರೆ ಈ ಬಾರಿ ದೊಕ್ಲಾಮ್ ವಿವಾದದ ಗಂಭೀರತೆ ಭಾರೀ ಪ್ರಮಾಣದ್ದಾಗಿದೆ. ಎರಡು ದೇಶಗಳ ಒಟ್ಟಾರೆ ಸಂಬಂಧಗಳು ಬಿಗಡಾಯಿಸಿದ್ದು ಇದಕ್ಕೆ ಕಾರಣವಾಗಿದೆ.

ಹಿಂದೆ, ಎರಡೂ ಕಡೆಯಿಂದ ನಿಯಂತ್ರಣ ರೇಖೆಯನ್ನು ದಾಟಿದ ಅಥವಾ ತಮ್ಮ ಪ್ರದೇಶದೊಳಗೆ ಅತಿಕ್ರಮಣ ಮಾಡಿದ ಪರಸ್ಪರ ಆಪಾದನೆಗಳು ಕೇಳಿ ಬರುತ್ತಿದ್ದವು. ಆದರೆ ಈ ಬಾರಿ ಒಂದು ವ್ಯತ್ಯಾಸವಿದೆ. ಈ ವಿವಾದ (ಸಿಕ್ಕಿಂ ರಾಜ್ಯದಲ್ಲಿರುವ) ಭಾರತ-ಚೀನಾ ಗಡಿಗೆ ಸಂಬಂಧಿಸಿದ್ದಲ್ಲ.

ಸುಮಾರು 269 ಚದರ ಕಿ.ಮಿ. ಇರುವ ದೊಕ್ಲಾಮ್ ಪಾತಳಿ ಬಗ್ಗೆ ಚೀನಾ ಮತ್ತು ಭೂತಾನ್ ನಡುವೆ ಇರುವ ವಿವಾದ. 1890 ರ ಆಂಗ್ಲೋ-ಚೀನಿ ಒಪ್ಪಂದದ ಪ್ರಕಾರ ದೊಕ್ಲಾಮ್ ಪಾತಳಿ ಟಿಬೆಟ್ ಗೆ ಸೇರಿದ್ದು. ಆದರೆ ಭೂತಾನ್ ಆ ಒಪ್ಪಂದಕ್ಕೆ ಸಹಿ ಹಾಕಿಲ್ಲವಾದ್ದರಿಂದ ಭೂತಾನ್ ಅದು ತನಗೆ ಸೇರಿದ ಪ್ರದೇಶ ಅಂತ ಹೇಳುತ್ತದೆ. ದೊಕ್ಲಾಮ್ ಮೂರೂ ದೇಶಗಳು ಸೇರುವಲ್ಲಿರುವ ಚುಂಬಿ ಕಣಿವೆಯ ತುದಿಯಲ್ಲಿರುವುದರಿಂದ ಅದು ಭಾರತಕ್ಕೆ ವ್ಯೂಹಾತ್ಮಕವಾಗಿ ಪ್ರಮುಖವಾದದ್ದು.

ಭಾರತದ ಸೇನಾ ಸಿಬ್ಬಂದಿ ಚೀನಾದ ರಸ್ತೆ ನಿರ್ಮಾಣ ತಂಡ ಕೆಲಸ ನಿಲ್ಲಿಸಬೇಕೆಂದು ಹೇಳಲು ದೊಕ್ಲಾಂಗೆ ಹೋಗಿತ್ತು. ಚೀನಾ ಇದು ತನ್ನ ಪ್ರದೇಶದೊಳಗೆ ಅತಿಕ್ರಮಣ ಎಂದು ಹೇಳುತ್ತದೆ. ಈ ವಿಷಯದಲ್ಲಿ ಭೂತಾನ್ ಸರಕಾರದ ದೂರಿನ ಮೇಲೆ ಅದರ ನೆರವಿಗೆ ಹೋಗಿದ್ದು ಎಂದು ಭಾರತ ಹೇಳುತ್ತದೆ.

ಭಾರತ ಮತ್ತು ಚೀನಾಗಳು ಗಡಿಯಲ್ಲಿ ಇಂತಹ ವಿವಾದಗಳು ಉದ್ಭವಿಸಿದಾಗ ಅದನ್ನು ಪರಿಹರಿಸಲು ಒಂದು ವಿಧಾನ ರೂಪಿಸಿವೆ. 1993ರಲ್ಲಿ ಎರಡೂ ದೇಶಗಳು ಗಡಿ ಶಾಂತಿ ಮತ್ತು ನೆಮ್ಮದಿಯ ಒಪ್ಪಂದಕ್ಕೆ ಸಹಿ ಹಾಕಿದವು. ಈ ಒಪ್ಪಂದದ ಮೂಲಕ ಆಗಿದ್ದ ಸ್ಥಿತಿಯನ್ನು ಒಪ್ಪಿಕೊಂಡು ಆ ಬಗೆಗೆ ಯಾವುದೇ ಭಿನ್ನಾಭಿಪ್ರಾಯಗಳನ್ನು ಶಾಂತಿಯುತ ಮಾತುಕತೆಗಳ ಮೂಲಕ ಬಗೆಹರಿಸಬೇಕೆಂದು ಒಪ್ಪಿಕೊಂಡವು. ಮುಂದೆ ನೇಮಿಸಲಾದ ಎರಡೂ ದೇಶಗಳ ವಿಶೇಷ ಪ್ರತಿನಿಧಿಗಳು ಇಂತಹ ವಿಷಯಗಳ ಬಗೆಗ ಚರ್ಚಿಸಿ ಪರಿಹರಿಸುವ ಇನ್ನೊಂದು ವೇದಿಕೆ ಆಯಿತು.

ಗಡಿ ವಿವಾದದ ಪರಿಹಾರದ ಬಗ್ಗೆ ಚೌಕಾಶಿ ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಆದರೆ ಇದು ಇತರ ಕ್ಷೇತ್ರಗಳಲ್ಲಿ ಸಹಕಾರ ಮತ್ತು ಸಂಬಂಧ ಬೆಳೆಸಲು ಅಡ್ಡಿಯಾಗಬಾರದು ಎಂದು ಎರಡೂ ದೇಶಗಳು ಸರಿಯಾಗಿಯೇ ಗ್ರಹಿಸಿದ್ದವು. ಈ ವ್ಯಾವಹಾರಿಕ ಧೋರಣೆ ಫಲಕಾರಿಯಾಗಿತ್ತು. ಈಗ ಭಾರತ-ಚೀನಾ ವ್ಯಾಪಾರ 70 ಶತಕೋಟಿ ಡಾಲರುಗಳಷ್ಟಿದೆ.

ಎರಡು ದೇಶಗಳ ನಡುವೆ ಭಿನ್ನಾಭಿಪ್ರಾಯಗಳು ಇರುವ ವಿಷಯಗಳು ಹೆಚ್ಚುತ್ತಿರುವುದರಿಂದ ಈಗಿನ ಗಡಿ ಗೊಂದಲ ಇಷ್ಟೊಂದು ಪ್ರಾಮುಖ್ಯತೆ ಪಡೆದಿದೆ. ಮೋದಿ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಇಂತಹ ಭಿನ್ನಾಭಿಪ್ರಾಯಗಳು ಹೆಚ್ಚಿವೆ. ಈ ಭಿನ್ನತೆಗೆ ಕಾರಣವಾಗಿರುವುದು ಅಮೆರಿಕದ ಜತೆ ಭಾರತದ ವ್ಯೂಹಾತ್ಮಕ ಕೂಟ. ಏಶ್ಯಾ-ಪೆಸಿಫಿಕ್ ಮತ್ತು ಭಾರತ ಮಹಾಸಾಗರದ ಪ್ರದೇಶದಲ್ಲಿ ಚೀನಾವನ್ನು "ಹದ್ದುಬಸ್ತಿನಲ್ಲಿಡುವ" ಅಮೆರಿಕದ ವ್ಯೂಹಾತ್ಮಕ ವಿನ್ಯಾಸಕ್ಕೆ ಭಾರತ ಅದರ ಜತೆ ಸೇರಿಕೊಂಡಿರುವುದು ಈ ಭಿನ್ನತೆ ಹೆಚ್ಚಲು ಪ್ರಮುಖ ಕಾರಣ. ದಕ್ಷಿಣ ಚೀನಾ ವಿವಾದದಲ್ಲಿ ಅಮೆರಿಕದ ನಿಲುವುಗಳಿಗೆ ಭಾರತ ಬಹಿರಂಗವಾಗಿಯೇ ಬೆಂಬಲಿಸಿದೆ. ಬೆಲ್ಟ್ ಅಂಡ್ ರೋಡ್ ಇನಿಶಿಯೆಟಿವ್ ನ್ನು ವಿರೋಧಿಸಿದೆ.

ಮೋದಿ ಸರಕಾರ ದೇಶದೊಳಗೆ ದಲೈ ಲಾಮಾ ಮತ್ತು ಟಿಬೆಟನ್ ತಾತ್ಕಾಲಿಕ ಸರಕಾರ ಎಂದು ಕರೆಯಲಾಗುವ ಸಂಘಟನೆಗೆ ಕುಮ್ಮಕ್ಕು ಕೊಡುತ್ತಿದೆ. ಅರುಣಾಚಲ ಪ್ರದೇಶಕ್ಕೆ ಒಬ್ಬ ಕೇಂದ್ರ ಮಂತ್ರಿ ಜತೆಗೆ ದಲೈ ಲಾಮಾ ಭೇಟಿ ಮತ್ತು ಲಡಾಕ್ ಪ್ರದೇಶದಲ್ಲಿ ಟಿಬೆಟನ್ ತಾತ್ಕಾಲಿಕ ಸರಕಾರದ ಧ್ವಜ ಹಾರಿಸಿದ್ದು ಚೀನಾಕ್ಕೆ ತೀವ್ರ ಕಿರಿಕಿರಿ ಉಂಟು ಮಾಡುವಂತಹುದು.

ಅಣು ಪೂರೈಕೆದಾರರ ಗುಂಪಿಗೆ ಸೇರುವುದು ಭಾರತಕ್ಕೆ ಆದ್ಯತೆಯ ವಿಷಯವಾಗಿದ್ದು ಚೀನಾ ಇದಕ್ಕೆ ತೊಡಕು ಎಂದು ಪರಿಗಣಿಸುತ್ತದೆ. ಮಸೂದ್ ಅಜರ್ ನ್ನು ವಿಶ್ವಸಂಸ್ಥೆಯ ಭಯೋತ್ಪಾದಕರ ಪಟ್ಟಿಗೆ ಸೇರಿಸುವ ವಿಷಯದಲ್ಲಿ ಸಹ ಚೀನಾ ಸಹಕರಿಸಿಲ್ಲ. ಎರಡು ದೇಶಗಳ ನಡುವೆ ನಂಬಿಕೆ ಮತ್ತು ಪರಸ್ಪರ ವಿಶ್ವಾಸದ ಕೊರತೆ ದೊಕ್ಲಾಂ ಬಗೆಗಿನ ಈಗಿನ ಸಂಘರ್ಷಮಯ ಪರಿಸ್ಥಿತಿಗೆ ಕಾರಣವಾಗಿದೆ.

ಗಡಿಯ ಬಗ್ಗೆ ಆಗಾಗ ಏಳುವ ಭಿನ್ನಾಭಿಪ್ರಾಯಗಳನ್ನು ಸೂಕ್ತ ಚೌಕಟ್ಟು ಇರುವ ಮಾತುಕತೆ-ಚೌಕಾಸಿ ಮೂಲಕ ಪರಿಹರಿಸುವುದಲ್ಲದೆ, ಬೇರೆ ಸಾಧ್ಯತೆಯಿಲ್ಲ ಎಂದು ಮೋದಿ ಸರಕಾರ ಅರಿತುಕೊಳ್ಳಬೇಕು. ಈ ವಿವಾದದಲ್ಲಿ ಭೂತಾನ್ ಮುಖ್ಯ ವಾದಿ ಎಂಬುದನ್ನು ಸಹ ಅರಿತುಕೊಳ್ಳಬೇಕು. ಭೂತಾನ್ ಭಾರತದ "ಸಂರಕ್ಷಿತ ಸಂಸ್ಥಾನ" ಅಲ್ಲ ಎಂಬುದನ್ನೂ ನೆನಪಿನಲ್ಲಿಡಬೇಕು. ಭೂತಾನ್ ಜತೆಗಿನ 1949ರ ಸ್ನೇಹ ಒಪ್ಪಂದದ ಪರಿಷ್ಕರಣೆಯ ನಂತರ, ಭೂತಾನ್ ವಿದೇಶ ನೀತಿಯಲ್ಲಿ ಭಾರತದ ಮಾರ್ಗದರ್ಶನ ತೆಗೆದುಕೊಳ್ಳಬೇಕು. ಶಸ್ತ್ರಾಸ್ತ್ರಗಳ ಆಮದಿಗೆ ಭಾರತದ ಸಮ್ಮತಿ ಪಡೆಯಬೇಕು ಎಂಬ ಕಲಮುಗಳನ್ನು ಕೈಬಿಡಲಾಗಿದೆ ಎಂಬುದನ್ನೂ ಗಮನಿಸಬೇಕು. ಈಗಿನ ಒಪ್ಪಂದ ಭಾರತ ಮತ್ತು ಭೂತಾನ್ ಗಳು "ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನಿಕಟವಾಗಿ ಸಹಕರಿಸಬೇಕು" ಎಂದಷ್ಟೇ ಹೇಳುತ್ತದೆ.

1984 ರಿಂದ ಭೂತಾನ್ ಗಡಿ ವಿಚಾರಗಳ ಬಗ್ಗೆ ಚೀನಾದ ಜತೆ ನೇರವಾಗಿ ಚೌಕಾಸಿ ಮಾಡುತ್ತಿದೆ ಎಂಬುದನ್ನೂ ಗಮನಿಸಬೇಕು. ದೊಕ್ಲಾಂ ಪಾತಳಿ ಮತ್ತಿತರ ವಿವಾದಗಳ ಬಗೆಗೆ ಭೂತಾನ್ ನೇರವಾಗಿ ಚೀನಾದ ಜತೆ ಚೌಕಾಸಿ ಮಾಡಲು ಅವಕಾಶ ಮಾಡಿಕೊಡುವುದು ಉತ್ತಮ. ಭಾರತ ಭೂತಾನ್ ನಿಲುವುಗಳಿಗೆ ಬೆಂಬಲ ನೀಡಬಹುದು.

ವಿದೇಶ ಕಾರ್ಯದರ್ಶಿ ಎಸ್. ಜಯಶಂಕರ್ ಭಾರತ-ಚೀನಾ ಭಿನ್ನಾಭಿಪ್ರಾಯಗಳು ದೊಡ್ಡ ವಿವಾದವಾಗಲು ಬಿಡಬಾರದು. "ಇದನ್ನು ಯಾವ ರೀತಿ ನಿರ್ವಹಿಸುತ್ತಿರೋ ಎಂಬುದು ನಿಮ್ಮ ಪಕ್ವತೆಯ ಸೂಚಕ" ಎಂದು ಹೇಳಿದ್ದಾರೆ.

ಈ ಧೋರಣೆಯನ್ನು ಮೋದಿ ಸರಕಾರ ಅಂಗೀಕರಿಸುವುದು ಒಳ್ಳೆಯದು. ಎರಡೂ ದೇಶಗಳ ನಡುವೆ ಅವುಗಳ ಪ್ರಮುಖ ಕಾಳಜಿಯ ಎಲ್ಲಾ ವ್ಯೂಹಾತ್ಮಕ ವಿಷಯಗಳ ಬಗ್ಗೆ ಹೊಸ ಸುತ್ತಿನ ಸಂವಾದದ ಅಗತ್ಯವಿದೆ. ಎರಡು ನೆರೆಯ ದೇಶಗಳ ನಡುವೆ ಉತ್ತಮ ಸಂಬಂಧಗಳಲ್ಲಿ ಹೊರಗಣ ಅಂಶಗಳು ಹಸ್ತಕ್ಷೇಪ ಮಾಡಲು ಬಿಡಬಾರದು.

ಉಪರಾಷ್ಟ್ರಪತಿ ಸ್ಥಾನಕ್ಕೆ ಪ್ರತಿಪಕ್ಷಗಳ ಒಮ್ಮತದ ಅಭ್ಯರ್ಥಿ ಗೋಪಾಲಕೃಷ್ಣ ಗಾಂಧಿ



ಜುಲೈ 11 ರಂದು ಸಂಸದ್ ಭವನದಲ್ಲಿ ಸಭೆ ಸೇರಿದ 18 ಪ್ರತಿಪಕ್ಷಗಳ ಮುಖಂಡರು ಪಶ್ಚಿಮ ಬಂಗಾಲದ ರಾಜ್ಯಪಾಲರಾಗಿದ್ದ ಗೋಪಾಲಕೃಷ್ಣ ಗಾಂಧಿಯವರನ್ನು ಉಪರಾಷ್ಟ್ರಪತಿ ಸ್ಥಾನಕ್ಕೆ ತಮ್ಮ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ಅವರು ಅಭ್ಯರ್ಥಿಯಾಗಲು ಒಪ್ಪಿದ್ದಾರೆ ಎಂದೂ ಪ್ರತಿಪಕ್ಷಗಳ ಮುಖಂಡರು ಪ್ರಕಟಿಸಿದ್ದಾರೆ.

ರಾಷ್ಟ್ರಪತಿ ಅಭ್ಯರ್ಥಿಯ ಆಯ್ಕೆಯಲ್ಲಿ ದೂರವುಳಿದಿದ್ದ ಜೆಡಿ(ಯು) ಪಕ್ಷದ ಹಿರಿಯ ಮುಖಂಡ ಶರದ್ ಯಾದವ್ ಕೂಡ ಈ ಸಭೆಯಲ್ಲಿ ಈ ಒಮ್ಮತದ ಆಯ್ಕೆಯಲ್ಲಿ ಭಾಗವಹಿಸಿದರು.

ಉಪರಾಷ್ಟ್ರಪತಿ ಸ್ಥಾನಕ್ಕೆ ಶ್ರೀ ಗೋಪಾಲಕೃಷ್ಣ ಗಾಂಧಿಯವರಿಗಿಂತ ಉತ್ತಮ ಅಭ್ಯರ್ಥಿ ಇರಲು ಸಾಧ್ಯವಿಲ್ಲ ಎಂದಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಅವರು ಅವಿರೋಧವಾಗಿ ಆರಿಸಿ ಬರುತ್ತಾರೆ ಎಂದು ಆಶಿಸಿದರು. ಎನ್‌ಡಿಎ ಇನ್ನೂ ತನ್ನ ಅಭ್ಯರ್ಥಿಯ ಬಗ್ಗೆ ಏನೂ ಹೇಳಿಲ್ಲ. ಜುಲೈ 18 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನಾಂಕವಾಗಿದ್ದು ಆಗಸ್ಟ್ 5ರಂದು ಚುನಾವಣೆ ನಡೆಯಲಿದೆ.

ರಾಷ್ಟ್ರಪತಿ ಸ್ಥಾನಕ್ಕೆ ಚುನಾವಣೆ ಜುಲೈ 17 ರಂದು ನಡೆಯುತ್ತದೆ.

ಭಾರತದ ಬಹುತ್ವ ಮತ್ತು ವೈವಿಧ್ಯತೆಯ ಮೇಲಿನ ಒಂದು ದಾಳಿ-ಪ್ರತಿಪಕ್ಷಗಳ ಮುಖಂಡರು

ಸಂಸತ್ತಿನ ಗ್ರಂಥಭಂಡಾರ ಕಟ್ಟಡದಲ್ಲಿ ಜುಲೈ 11 ರಂದು ಉಪರಾಷ್ಟ್ರಪತಿ ಹುದ್ದೆಗೆ ಪ್ರತಿಪಕ್ಷಗಳ ಅಭ್ಯರ್ಥಿಯ ಬಗ್ಗೆ ಚರ್ಚಿಸಲು ಸೇರಿದ ಸಭೆ ಈ ಕೆಳಗಿನ ನಿರ್ಣಯವನ್ನು ಅಂಗೀಕರಿಸಿದೆ:

"ನಾವು, ಪ್ರತಿಪಕ್ಷಗಳ ಮುಖಂಡರು, ಅಮರನಾಥ ಯಾತ್ರಿಗಳ ಮೇಲೆ ಹೇಡಿತನದ ಮತ್ತು ಭೀಕರ ಭಯೋತ್ಪಾದಕ ದಾಳಿಯನ್ನು ಬಲವಾಗಿ ಖಂಡಿಸುತ್ತೇವೆ. ಇದಕ್ಕೆ ಬಲಿಯಾದವರ ಕುಟುಂಬಗಳಿಗೆ ನಮ್ಮ ಅತ್ಯಂತ ಆಳವಾದ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇವೆ ಮತ್ತು ಅವರ ಈ ನೋವಿನ ಗಳಿಗೆಯಲ್ಲಿ ಅವರ ಬೆಂಬಲಕ್ಕೆ ನಿಲ್ಲುತ್ತೇವೆ.

ಇದು ಮಾನವತೆಯ ಮೇಲಿನ ಒಂದು ದಾಳಿ. ಇದು ಭಾರತದ ಬಹುತ್ವ ಮತ್ತು ವೈವಿಧ್ಯತೆಯ ಮೇಲಿನ ಒಂದು ದಾಳಿ. ಇದು ಮಾನವೀಯ ಮೌಲ್ಯಗಳು ಮತ್ತು ಕಶ್ಮೀರಿಯತ್ ಮೇಲಿನ ದಾಳಿ.

ಸರಕಾರ ಈ ಅಮಾನವೀಯ ಕೃತ್ಯವನ್ನು ಎಸಗಿರುವವರನ್ನು, ಅದರ ನಿಜವಾದ ಸಂಚನ್ನು ರೂಪಿಸಿದವರನ್ನು ನ್ಯಾಯನಿರ್ಣಯಕ್ಕೆ ಒಳಪಡಿಸಲು ತನ್ನ ಅಧೀನವಿರುವ ಎಲ್ಲ ಸಂಪನ್ಮೂಲಗಳನ್ನು ಬಳಸಬೇಕು ಎಂದು ಕೇಳುತ್ತೇವೆ. ಮುಂಗಡ ರಹಸ್ಯ ಮಾಹಿತಿಗಳಿದ್ದರೂ ಈ ದಾಳಿಯನ್ನು ತಡೆಯುವಲ್ಲಿ ವಿಫಲವಾದದ್ದೇಕೆ ಎಂದು ಸರಕಾರ ಆತ್ಮಾವಲೋಕನ ಮಾಡಬೇಕಾಗಿದೆ."

ಮಂಗಳೂರಿನಲ್ಲಿ ದಲಿತ, ರೈತ ಕಾರ್ಮಿಕರ ಜನಾಗ್ರಹ

ಸೌಹಾರ್ದ ಸಮಾವೇಶ, ಶಾಂತಿ ಪಾದಯಾತ್ರೆಗೆ ಕರೆ

ಕೋಮುವಾದದ ಮೂಲಕ ಪ್ರಜಾಪ್ರಭುತ್ವದ ದಮನ: ಪ್ರೊ. ಚೆನ್ನಿ

ವಾಸುದೇವ ಉಚ್ಚಿಲ

ಭಾರತದಲ್ಲಿ ಮಾತ್ರವಲ್ಲದೆ ಜಗತ್ತಿನ ಹಲವು ದೇಶಗಳಲ್ಲಿ ಬಲಪಂಥೀಯತೆ ಬೆಳೆಯುತ್ತಿದೆ. ಅದರ ಬೆಳವಣಿಗೆಗಾಗಿ ಭಾರತದಲ್ಲಿ ಬಂಡವಾಳಶಾಹಿಯು ಕೋಮುವಾದವನ್ನು ಬಳಸುತ್ತಿದೆ. ಭಾರತದಲ್ಲಿ ಬಂಡವಾಳಶಾಹಿಗೆ ವಿರೋಧ ಇರುವುದು ಪ್ರಜಾಪ್ರಭುತ್ವದಿಂದ ಮಾತ್ರ. ಆದ್ದರಿಂದ ಪ್ರಜಾಪ್ರಭುತ್ವದ ಸೊಂಟ ಮುರಿಯಲು ಬಂಡವಾಳಶಾಹಿ ಪ್ರಯತ್ನಿಸುತ್ತಿದೆ. ಬುದ್ಧಿಜೀವಿಗಳನ್ನು ಮಾತನಾಡದಂತೆ ಮಾಡಲಾಗುತ್ತಿದೆ. ಕೋಮುವಾದದ ಮೂಲಕ ಬಂಡವಾಳಶಾಹಿಯು ಪ್ರಜಾಪ್ರಭುತ್ವದ ಸ್ವಾತಂತ್ರ್ಯಗಳನ್ನು ದಮನ ಮಾಡುತ್ತಿದೆ. ಇದರಿಂದ ಬಡತನ, ಹಸಿವು, ನಿರುದ್ಯೋಗ ವಿಸ್ತರಿಸುತ್ತಿರುವುದನ್ನು ನಾವು ಕಾಣುವುದಿಲ್ಲ. ಮಾಧ್ಯಮಗಳೂ ಇವನ್ನು ಗುರುತಿಸದೆ ಕೋಮುವಾದಿ ಹಲ್ಲೆ, ಹತ್ಯೆಗಳನ್ನೇ ವಿವರಿಸುತ್ತಿದೆ ಎಂಬುದಾಗಿ ಖ್ಯಾತ ಚಿಂತಕ ಹಾಗೂ ಪ್ರಾಧ್ಯಾಪಕ ಡಾ.ರಾಜೇಂದ್ರ ಚೆನ್ನಿ ಆತಂಕ ವ್ಯಕ್ತಪಡಿಸಿದರು.

ಅವರು ಮಂಗಳೂರಿನಲ್ಲಿ ಪುರಭವನದಲ್ಲಿ ಜುಲೈ 10 ರಂದು ಸಿಪಿಐ, ಸಿಪಿಐ(ಎಂ), ಜನತಾದಳ (ಎಸ್), ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ಮತ್ತು ಕರ್ನಾಟಕ ರಾಜ್ಯ ರೈತ ಸಂಘ (ಹಸಿರು ಸೇನೆ) ಸಂಯುಕ್ತವಾಗಿ ಏರ್ಪಡಿಸಿದ ಕೋಮುವಾದ ವಿರೋಧಿ ಸೌಹಾರ್ದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಕೇಂದ್ರ ಸರಕಾರವು ಜಾರಿಗೆ ತಂದಿರುವ ಜಾನುವಾರು ಮಾರಾಟ ನಿಯಂತ್ರಣ ನಿಯಮಗಳನ್ನು ಕೈಬಿಡಲು ಆಗ್ರಹಿಸಿ ಹಾಗೂ ದ.ಕ.ಜಿಲ್ಲೆಯ ಕೋಮು ಪ್ರಚೋದಕ ಶಕ್ತಿಗಳನ್ನು ಬಂಧಿಸಲು ಒತ್ತಾಯಿಸಿ ನಡೆಸಿದ ದಲಿತ, ರೈತ ಕಾರ್ಮಿಕರ ಜನಾಗ್ರಹ ಸಮಾವೇಶವಾಗಿ ಈ ಸೌಹಾರ್ದ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು.

ಶಿಕ್ಷಣದ ಮುನ್ನಡೆ, ಕುದ್ಮಲ್ ರಂಗರಾಯರ ದಲಿತೋದ್ಧಾರ, ಆಧುನಿಕತೆ – ಈ ಎಲ್ಲಾ ಕಾರಣ-ಕ್ಕಾಗಿ ರಾಜ್ಯದ ಬೇರೆಡೆಯ ಜನತೆ ದಕ್ಷಿಣ ಕನ್ನಡ ಜಿಲ್ಲೆಯ ಕಡೆಗೆ ನೋಡುತ್ತಿದ್ದರು. ಕ್ರಿಶ್ಚಿಯನ್ ಮಿಶನರಿಗಳು ಕನ್ನಡ ಸಾಹಿತ್ಯ ಪ್ರಕಟಣ ಪರಂಪರೆ, ನಿಘಂಟುವನ್ನು ಇಲ್ಲಿ ಹುಟ್ಟು ಹಾಕಿದರು. ದಕ್ಷಿಣ ಕನ್ನಡದವರು ಇತರರಿಗಿಂತ ಮುಂಚಿತವಾಗಿ ಕಂಡಿದ್ದನ್ನು ಮಾಡಿದ್ದನ್ನು 10 ವರ್ಷಗಳ ಬಳಿಕ ಇತರರು ಮಾಡುತ್ತಿದ್ದರು. ಅಂಥ ಜಿಲ್ಲೆ ಇವತ್ತು ಕೋಮು ಸಂಘರ್ಷದ ತಾಣವಾಗಿರುವುದು ಎಲ್ಲರ ಆತಂಕಕ್ಕೆ ಕಾರಣವಾಗಿದೆ.

"ಕೊಲೆಯನ್ನು ಕೊಲೆ ಎಂದೇ ಕರೆಯಬೇಕು" : ಚೆನ್ನಿ

ಕೋಮುವಾದಿ ಘಟನೆಗಳೆಲ್ಲವೂ ಧಾರ್ಮಿಕ ಸಂಗತಿಗಳಲ್ಲ. ಅವು ರಾಜಕೀಯ ಸಂಗತಿಗಳೇ ಆಗಿವೆ. ಪ್ರತಿ ಸಾರಿ ಚುನಾವಣೆ ನಡೆಯುವ ಮೊದಲು ಈ ಕೋಮು ಸಂಘರ್ಷ ನಡೆಯುತ್ತಿರುವುದನ್ನು ನಾವು ಕಾಣುತ್ತೇವೆ. ಅಚಾನಕ್ ಆಗಿ ಭಾವಾವೇಶಕ್ಕೆ ಒಳಗಾಗಿ ಆಗುವ ವಿದ್ಯಮಾನಗಳು ಈ ಕೋಮುಗಲಭೆಗಳು ಎಂದು ಕೆಲವು ಮಾಧ್ಯಮಗಳು ವಿವರಿಸುತ್ತಿರುವುದು ನಿಜವಲ್ಲ. ಈಚೆಗೆ ಕೋಮುವಾದಿಗಳು ಮೇಲೆ ಬಿದ್ದು ಮಾಡುವ ಕೊಲೆಯನ್ನು ಕೊಲೆ ಎನ್ನದೆ 'ಲಿಂಚಿಂಗ್' ಎಂಬ ಪದದ ಮೂಲಕ ವಿವರಿಸಲಾಗುತ್ತಿದೆ. ಕೊಲೆ ಕೊಲೆಯೇ. ಎಲ್ಲಿಯವರೆಗೆ ಕೊಲೆಯನ್ನು ನಾವು ಕೊಲೆ ಎನ್ನುವುದಿಲ್ಲವೋ, ಅಪರಾಧವನ್ನು ಅಪರಾಧವೆನ್ನುವುದಿಲ್ಲವೋ, ಆಗ ನಾವು ತಪ್ಪು ಮಾಡಿದಂತೆ. ಅಮಾಯಕ ವ್ಯಕ್ತಿಗಳ ಕೊಲೆ ಆಗುತ್ತಿರುವಾಗ ನಾವು ಅಂದರೆ ಸಮಾಜ ಹೇಳಬೇಕು – ಈ ರಾಜಕೀಯವನ್ನು ಒಪ್ಪುವುದಿಲ್ಲ– ಎಂದು.

ಕೊಲೆಯನ್ನು ಸಿದ್ಧಾಂತದ ಕಾರಣ-ಕ್ಕಾಗಿ ಮಾಡಿರುವುದರಿಂದ ಅದು ಕೊಲೆಯಲ್ಲ ಎಂದು ಹೇಳುತ್ತದೆ ಒಂದು ಪಕ್ಷ. ಇನ್ನೊಂದು ಪಕ್ಷ ಇನ್ನೊಂದು ಮತಾಂಧ ಗುಂಪು ಕೊಲೆ, ಹಿಂಸೆ ಮಾಡಿದರೂ ಖಂಡಿಸುವುದಿಲ್ಲ, ತಾವು ಆ ಯಾವುದೇ ಕೊಲೆಗೆ ಜವಾಬ್ದಾರರಲ್ಲ ಎಂದು ಜಾಣವಾಗಿ ನುಣುಚಿಕೊಳ್ಳುತ್ತಿದೆ. ಯಾವುದೇ ಹಿಂಸೆ ಯಾರಿಂದ ಯಾರ ಮೇಲೆ ಆದರೂ ಅದನ್ನು ನಾವು ಒಪ್ಪುವುದಿಲ್ಲ ಎಂದು ಸಮಾಜ ಹೇಳಬೇಕಾಗಿದೆ. ಎರಡನೆಯದಾಗಿ ಲೆಕ್ಕಾಚಾರದ ರಾಜಕೀಯವನ್ನು ನಾವು ತಿರಸ್ಕರಿಸಬೇಕು ಎಂದು ಪ್ರೊ.ಚೆನ್ನಿ ವಿವರಿಸಿದರು.

ಇನ್ನೊಂದೆಡೆ ಜನಶಕ್ತಿಯನ್ನು ಕಟ್ಟುವಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಇವತ್ತು ಕೋಮುವಾದದ ಪ್ರಸಾರ ಎಷ್ಟೊಂದು ಬಲಿಷ್ಠವಾಗಿದೆಯೆಂದರೆ ಅದು ಹೆಚ್ಚೆಚ್ಚು ಜನಸಮೂಹದ ಮಧ್ಯೆ ಸಮ್ಮತಿ, ಒಮ್ಮತವನ್ನು ಮೂಡಿಸಿದೆ. 2-3 ದಶಕಗಳ ಹಿಂದೆ ಒಂದು ಕೋಮುವಾದಿ ವಿದ್ಯಮಾನ ಹುಟ್ಟಿದಾಗ ವಿವಿಧ ಪ್ರಜಾಪ್ರಭುತ್ವ ಶಕ್ತಿಗಳು ಬೇರೆ ಬೇರೆಯಾಗಿಯೂ ಒಟ್ಟಾಗಿಯೂ ಪ್ರತಿರೋಧವನ್ನು ಸಾಕಷ್ಟು ಬಲಿಷ್ಠವಾಗಿ ದಾಖಲು ಮಾಡುತ್ತಿದ್ದುದಕ್ಕೆ ಬಾಬಾಬುಡನ್‌ಗಿರಿ ಸಂಘರ್ಷದ ವಿದ್ಯಮಾನಗಳು ಗುರುತಾಗಿವೆ. ಈಗ ಒಗ್ಗಟ್ಟಾದ ಪ್ರತಿರೋಧಗಳು ಕಡಿಮೆಯಾಗಿವೆ.

"ಕೋಮುವಾದ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ" : ಚೆನ್ನಿ

ಕೋಮುವಾದದ ಬಗ್ಗೆ ನಾವು ಸ್ಪಷ್ಟವಾಗಿ ತಿಳಿಯಬೇಕಾದುದೇನೆಂದರೆ ಅದು ಪ್ರಜಾಪ್ರಭುತ್ವ ಶಕ್ತಿಗಳನ್ನು ದುರ್ಬಲಗೊಳಿಸುತ್ತವೆ. ಪ್ರಜಾಪ್ರಭುತ್ವದ್ದೇ ಆದ ಸಂಸ್ಕೃತಿಯನ್ನು ಕಾಪಾಡಿಕೊಂಡಿರಬೇಕೆಂದು ಡಾ.ಅಂಬೇಡ್ಕರ್ ಹೇಳಿದ್ದರು. ಈ ಸಂಸ್ಕೃತಿಯ ಲಕ್ಷಣ ಏನೆಂದರೆ ಎಲ್ಲರಲ್ಲೂ ಸಮಾನತೆಯನ್ನು ಕಾಣುವ ಪರಿಕಲ್ಪನೆ. ಆ ಸಮಾನತೆಯ ನೋಟ ಇಲ್ಲದಿದ್ದರೆ ಅದು ಪ್ರಜಾಪ್ರಭುತ್ವ ಅಲ್ಲ. ಪ್ರಜಾಪ್ರಭುತ್ವದ ಎರಡನೆಯ ಗುಣವೆಂದರೆ ಕಾನೂನು ಮತ್ತು ಸಂವಿಧಾನವನ್ನು ಒಪ್ಪಿಕೊಳ್ಳುವಂಥದ್ದು. ದಕ್ಷಿಣ ಕನ್ನಡದಲ್ಲಿ ಈಚೆಗೆ ನಡೆದ ಗಲಭೆಗಳಲ್ಲಿ ಕಾನೂನು, ಸಂವಿಧಾನವನ್ನು ಮತಾಂಧ ಗುಂಪುಗಳು ತಿರಸ್ಕರಿಸಿತು. ಕಾನೂನು ಮೂಲಕ ಹೇರಿದ ಸೆಕ್ಷನ್, ನಿರ್ಬಂಧ ಇದ್ದಾಗಲೇ ಗುಂಪಿನ ಮುಂದಾಳುಗಳು ಬಹಿರಂಗ ಪ್ರಚೋದಕ ಹೇಳಿಕೆ ನೀಡಿದರು; ಜನರ ಜವಾಬ್ದಾರಿಯೂ ನಡೆಯಿತು. ಈ ರೀತಿಯ ಸಂವಿಧಾನ ಮಾಡುವ ವರ್ತನೆ ಕೇವಲ ಹಿಂದುತ್ವ ಕೋಮುವಾದದಲ್ಲಿ ಮಾತ್ರವೇ ಇರುವುದೇನೂ ಅಲ್ಲ ಎಂಬುದನ್ನು ನಾವು ತಿಳಿಯಬೇಕು.



ಪ್ರೊ. ರಾಜೇಂದ್ರ ಚೆನ್ನಿ ಮಾತನಾಡುತ್ತಿರುವುದು

> "ಕೋಮುವಾದದ ಚೂರಿ ಇರಿತ ಒಬ್ಬನನ್ನು ಕೆಡವಿದರೆ ಹಸಿವು, ಬಡತನ, ನಿರುದ್ಯೋಗದಿಂದ ಸಾವಿರಾರು ಜನ ದಿನನಿತ್ಯ ಸಾಯುತ್ತಿದ್ದಾರೆ. ವಿಷಾದದ ಸಂಗತಿಯೆಂದರೆ ಒಂದು ಚೂರಿ ಇರಿತದ ಪ್ರಕರಣ ಈ ಎಲ್ಲಾ ಸಾವಿರಾರು ಸಾವುಗಳನ್ನು ಚರ್ಚೆಯೇ ಇಲ್ಲದಂತೆ ಮರೆಮಾಚಿ ಬಿಡುತ್ತದೆ. ಈ ರೀತಿಯ ಸಾವುಗಳ ಮರೆಮಾಚುವಿಕೆಯೇ ಕೋಮುಸಂಘರ್ಷದ ಉದ್ದೇಶ."
>
> – *ಪ್ರೊ. ರಾಜೇಂದ್ರ ಚೆನ್ನಿ*

ಇದು ಕರ್ನಾಟಕ ರಾಜ್ಯಕ್ಕೇನೇ ಸಂಕಷ್ಟದ ಸಮಯ. ಸಾವಿರಾರು ವರ್ಷಗಳ ಬಹುಮುಖತೆಯ, ಬಹುಸಂಸ್ಕೃತಿಯ ನಾಡು ಕರ್ನಾಟಕ. ಕರ್ನಾಟಕವನ್ನು ನಾವು ಉಳಿಸಬೇಕಾಗಿದೆ. ಅದಕ್ಕೆ ಒಂದೇ ಒಂದು ಶತ್ರು ಎಂದರೆ ಕೋಮುವಾದಿ ಚಿಂತನೆ ಮತ್ತು ಹಿಂಸೆ. ನಾಡಿನ ಲೇಖಕರು, ಸಾಹಿತಿಗಳು, ಚಿಂತಕರು ಮಂಗಳೂರಿನಲ್ಲಿ ಸೌಹಾರ್ದಕ್ಕಾಗಿ ಸೇರಿ ಕರೆಕೊಡುವಂತೆ ಪ್ರಯತ್ನ ಮಾಡಲು ಕಾರ್ಯಕ್ರಮ ಆಯೋಜಿಸಿದ ಸಂಘಟಕರಿಗೆ ಪ್ರೊ.ರಾಜೇಂದ್ರ ಚೆನ್ನಿಯವರು ಕಳಕಳಿಯ ವಿನಂತಿ ಮಾಡಿದರು.

"ಸಂವಿಧಾನವನ್ನು ತ್ರಿವರ್ಣ ಧ್ವಜವನ್ನು ಒಪ್ಪದವರು ದೇಶಭಕ್ತರಲ್ಲ" : ಜಿ.ವಿ.ಎಸ್.

ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿಯವರು ಎಡಪಕ್ಷಗಳು ಮಾತ್ರ ಕೋಮುವಾದವನ್ನು ನಿರ್ಭಿಡೆಯಿಂದ ಎದುರಿಸುತ್ತಿರುವ ರಾಜಕೀಯ ಪಕ್ಷಗಳು ಎಂಬುದನ್ನು ತಮ್ಮ ಮಾತುಗಳಲ್ಲಿ ಸ್ಪಷ್ಟಪಡಿಸಿದರು.

ಇವತ್ತು ಗೋವಿನ ಹೆಸರಲ್ಲಿ, ದೇಶಭಕ್ತಿಯ ಹೆಸರಲ್ಲಿ ಕೂಗಾಟ ನಡೆಸುತ್ತಿರುವವರು ಗೋಭಕ್ತರೂ ಅಲ್ಲ, ದೇಶಭಕ್ತರೂ ಅಲ್ಲ. ದೇಶವೇ ಅಂಗೀಕರಿಸಿದ ಸಂವಿಧಾನವನ್ನು ತ್ರಿವರ್ಣ ಧ್ವಜವನ್ನು ಒಪ್ಪದೇ ಇದ್ದವರು ಇಂದಿನ ಸಂಘಪರಿವಾರಕ್ಕೆ ಮುಖಂಡರು. ವಿವೇಕಾನಂದರ ವಿವರಿಸುವ 'ಹಿಂದೂ' ಶಬ್ದದ ಅರ್ಥದಲ್ಲಿ ಇವರುಗಳು ಹಿಂದೂಗಳು ಅಲ್ಲ. ಯಾರೂ ಪರಧರ್ಮವನ್ನು ದ್ವೇಷ ಮಾಡುವರೋ ಅವರು ಹಿಂದೂ ಧರ್ಮವನ್ನು ನಾಶಮಾಡುತ್ತಾರೆ ಎಂಬುದಾಗಿ ವಿವೇಕಾನಂದರು ಹೇಳಿದ್ದಾರೆ.

ಗೋರಕ್ಷಣೆಯ ಹೆಸರಲ್ಲಿ ಕಳೆದ 2 ವರ್ಷಗಳಲ್ಲಿ ದೇಶದಲ್ಲಿ 62 ಜನರ ಕೊಲೆ ಮಾಡಲಾಗಿದೆ.

ದೇಶವನ್ನು ಉಳಿಸಬೇಕಾದುದು ನಮ್ಮ ಸವಾಲು. ಅದಕ್ಕಾಗಿ ಸಂವಿಧಾನ, ಪ್ರಜಾಪ್ರಭುತ್ವವನ್ನು ಉಳಿಸಬೇಕಾಗಿದೆ. ರವೀಂದ್ರನಾಥ ಠಾಗೋರರು ಹೇಳುವಂತೆ 1916ರ ವರೆಗೆ ಭಾರತ ಒಂದು ರಾಷ್ಟ್ರ ಎಂಬ ಕಲ್ಪನೆ ಇರಲೇ ಇಲ್ಲ. ಸ್ವಾತಂತ್ರ್ಯದ ವೇಳೆಗೆ 350 ಮೀರಿ ರಾಜ್ಯಗಳೇ ಇದ್ದುವೇ ಹೊರತು ರಾಷ್ಟ್ರ ಅಥವಾ ದೇಶ ಎಂಬ ತಿಳುವಳಿಕೆ ಇರಲಿಲ್ಲ. ಜನ ಇಲ್ಲದಿರುವ ಪ್ರದೇಶವು ಎಂದೂ ದೇಶವಾಗಲಾರದು. ಆದ್ದರಿಂದ ಜನರು ಇದ್ದಲ್ಲಿ ಮಾತ್ರ ರಾಷ್ಟ್ರ ಅಥವಾ ದೇಶ ಇರುತ್ತದೆ. ಆದರೆ ಇವತ್ತು ಆಡಳಿತಗಾರರಿಗೆ ಜನರಿಗಿಂತ ಹಸು ಮುಖ್ಯವಾಗಿದೆ. ಗೋಮಾಂಸದ ಹೆಸರಿನಲ್ಲಿ ಅಖ್ಲಾಕ್ ಖಾನ್ ಎಂಬವರ ಕೊಲೆಯ ಸಮರ್ಥಕನಾದ ಬಿಜೆಪಿ ಸಂಸದ ಸಂಗೀತ್ ಸೋಮ್ ಒಬ್ಬ ಗೋಮಾಂಸದ ಪ್ರಮುಖ ರಫ್ತು ವ್ಯಾಪಾರಿ. ಗೋವನ್ನು ಮಾಂಸ ಹಾಗೂ ಸಾಧನವಾಗಿ ಬಳಕೆ ಮಾಡಿದ್ದನ್ನು ನಮ್ಮ ಪುರಾಣ ಶಾಸ್ತ್ರಗಳನ್ನು ತಿರುವಿ ಹಾಕಿದರೂ ತಿಳಿದುಬರುತ್ತದೆ.

"ಗಲಭೆ ಸೃಷ್ಟಿಸಲು 3800 ಸಂಘಿ ಕಾರ್ಯಕರ್ತರು" – ಜಿ.ವಿ.ಎಸ್.

ಚುನಾವಣೆ ಹತ್ತಿರ ಇದ್ದಾಗ ಧರ್ಮದ ಹೆಸರಲ್ಲಿ ರಾಜಕಾರಣ ಮಾಡಲಾಗುತ್ತದೆ. ಇವತ್ತು ದ.ಕ.ದಲ್ಲಿ ನಡೆಯುತ್ತಿರುವುದು ಅದೇನೇ. ಬಲ್ಲ ಮೂಲಗಳ ಪ್ರಕಾರ ರಾಜ್ಯಕ್ಕೆ ಈಗಾಗಲೇ 3800 ಸಂಘ ಪರಿವಾರದ ಕಾರ್ಯಕರ್ತರನ್ನು ಇದಕ್ಕಾಗಿ ನಿಯೋಜಿಸಲಾಗಿದೆ ದ.ಕ. ಜಿಲ್ಲೆಯಂತೆ ಗುಲ್ಬರ್ಗದಲ್ಲೂ ಅಮಾಯಕರ ಮೇಲೆ ಹಲ್ಲೆ ಆರಂಭಿಸಲಾಗಿದೆ. ದ.ಕ.ಜಿಲ್ಲೆಯಲ್ಲಿ ಹಿಂದುತ್ವ ಪರಿವಾರ ನಡೆಸಿದ ಕೊಲೆಗಳಲ್ಲಿ ಸತ್ತವರು 10 ಜನ ಹಿಂದೂಗಳೆ. ಇಷ್ಟೇ ತೀವ್ರತೆಯಿಂದ ಮುಸ್ಲಿಂ ಕೋಮುವಾದವೂ ಕೆಲಸ ಮಾಡುತ್ತಿದೆ. ಎರಡೂ ರೀತಿಯ ಕೋಮುವಾದವನ್ನು ಎದುರಿಸುವ ಇಚ್ಛಾಶಕ್ತಿ ಬೇಕಾಗಿದೆ. ಓಟಿಗೋಸ್ಕರ ಜಾತ್ಯಾತೀತವಾದಿಗಳಾದ ರಾಜಕೀಯ ವಿಭಾಗವೂ ದೊಡ್ಡದೇ ಆಗಿದ್ದರೂ, ಕೋಮುವಾದದ ವಿರುದ್ಧ ಗಟ್ಟಿಯಾಗಿ ಹೋರಾಡುವ ಇಚ್ಛಾಶಕ್ತಿ ಅವರಿಗಿಲ್ಲ. ಈ ನಿಟ್ಟಿನಲ್ಲಿ ಕೋಮುವಾದದ ವಿರುದ್ಧ ಹೋರಾಡುವ ಶಕ್ತಿಗಳೆಲ್ಲ ಒಂದಾಗಿ ಕೆಲಸ ಮಾಡಬೇಕಿದೆ.

ಮೊನ್ನೆ ನಮ್ಮ ಪ್ರಧಾನಿ ಅಮೇರಿಕಾದ ಅಧ್ಯಕ್ಷ ಟ್ರಂಪ್ ಒಂದಿಗೆ ಮಾಡಿಕೊಂಡಿರುವ ಒಪ್ಪಂದಗಳು ಈ ದೇಶವನ್ನು ಸಾಮ್ರಾಜ್ಯಶಾಹಿ ಅಡಿಯಾಳಾಗಿ ಮಾಡುವಂಥವು. ಪ್ರಧಾನಿ ಮತ್ತು ಅವರ ಪಕ್ಷ ದೇಶಭಕ್ತಿಯ ಕೂಗು ಹಾಕುತ್ತಿದೆ.

ಪುಟ 10 ಕ್ಕೆ

> "2018ರ ವಿಧಾನಸಭೆ ಚುನಾವಣೆಯನ್ನು ಗುರಿಯಾಗಿ ಇಟ್ಟುಕೊಂಡು ರಾಜ್ಯದಲ್ಲಿ ಕೋಮುಗಲಭೆ ಸೃಷ್ಟಿಸುವುದಕ್ಕಾಗಿ ಸಂಘ ಪರಿವಾರವು ಬೇರೆ ಬೇರೆ ರಾಜ್ಯಗಳ 3800 ಕಾರ್ಯಕರ್ತರನ್ನು ಕರ್ನಾಟಕಕ್ಕೆ ಕಳಿಸಿಕೊಟ್ಟಿದೆ. ಈ ಕಾರ್ಯಕರ್ತರ ಮೂಲಕ ಕೋಟಿಗಟ್ಟಲೆ ಹಣವನ್ನೂ ರವಾನೆ ಮಾಡಲಾಗಿದೆ. ಬಿಜೆಪಿ ಗೆಲ್ಲುವ ಸಾಧ್ಯತೆ ಹೆಚ್ಚಿರುವ ಕ್ಷೇತ್ರಗಳಿಗೆ ತಲಾ 25 ಮಂದಿ, ಉಳಿದ ಕ್ಷೇತ್ರಗಳಿಗೆ 10ರಿಂದ 15 ಮಂದಿಯನ್ನು ಹಂಚಿಕೆ ಮಾಡಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ."
>
> – *ಜಿ.ವಿ. ಶ್ರೀರಾಮರೆಡ್ಡಿ*



ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಮಾತನಾಡುತ್ತಿರುವುದು





ಕೆಂಪು, ನೀಲಿ ಮತ್ತು ಹಸಿರು ಬಾವುಟಗಳ ಸಂಗಮ

ರೈತ ದಲಿತ ಕೂಲಿಕಾರರ ಐತಿಹಾಸಿಕ ಸಮಾವೇಶ

ಹೆಚ್.ಆರ್. ನವೀನ್‌ಕುಮಾರ್

ಬೆಂಗಳೂರಿನ ಶಿಕ್ಷಕರ ಸದನದಲ್ಲಿ ಜುಲೈ 11ರಂದು ಸೇರಿದ್ದ ರೈತ, ಕೂಲಿಕರ ಮತ್ತು ದಲಿತರ ಜಂಟಿ ರಾಜ್ಯ ಸಮಾವೇಶ ಹಲವು ದೃಷ್ಟಿ ಕೋನಗಳಿಂದ ಐತಿಹಾಸಿಕವಾದದ್ದು ಎಂದೇ ಬಣ್ಣಿಸಲಾಗಿದೆ. ಒಂದು ನಿರ್ಧಿಷ್ಟ ಬೇಡಿಕೆಗಳ ಆಧಾರದಲ್ಲಿ ವಿವಿಧ ರೈತ, ದಲಿತ ಮತ್ತು ಕೂಲಿಕಾರ ಸಂಘಟನೆಗಳು ಒಂದೆಡೆ ಸೇರುವ ಈ ಪ್ರಯತ್ನ ಕರ್ನಾಟಕದ ಜನ ಚಳುವಳಿಗಳ ಮಟ್ಟಕ್ಕೆ ಒಂದು ನಿರ್ಣಾಯಕ ಪಾತ್ರವನ್ನ ವಹಿಸುತ್ತದೆ. ಮುಖ್ಯವಾಗಿ ರೈತ, ದಲಿತ, ಕೂಲಿಕಾರರ ಸಂಪೂರ್ಣ ಸಾಲಮನ್ನಾ, ಡಾ.ಎಂ. ಎಸ್.ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಕನಿಷ್ಟ ಬೆಂಬಲ ಬೆಲೆ ನಿಗದಿ, ಕೃಷಿಕರ ಪರವಾದ ಬೆಳೆ ವಿಮೆ ನೀತಿ ಮತ್ತು ಜಾನುವಾರು ಹತ್ಯೆ ನಿಷೇಧ ಕಾನೂನು ಜಾರಿಯ ವಿರುದ್ಧ ರಾಜ್ಯದಲ್ಲಿ ಒಂದು ಚಾರಿತ್ರಿಕ ಚಳುವಳಿಯನ್ನು ರೂಪಿಸುವ ಉದ್ದೇಶದಿಂದ ಈ ಸಮಾವೇಶವನ್ನು ಏರ್ಪಡಿಸಲಾಗಿತ್ತು.

ಸಮಾವೇಶದಲ್ಲಿ ಕಂಡು ಬಂದ ಮತ್ತೊಂದು ಪ್ರಮುಖ ಅಂಶವೆಂದರೆ ಇದು ಕೆಂಪು, ನೀಲಿ ಮತ್ತು ಹಸಿರು ಬಾವುಟಗಳ ಸಂಘಮ ಈ ಸಂಘಮದಿಂದ ರಾಜ್ಯದಲ್ಲಿ ಚಳುವಳಿಯನ್ನು ಬಲಪಡಿಸಿ ಕೆಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ, ದಲಿತ, ಕೂಲಿಕಾರರ ವಿರೋಧಿ ನೀತಿಗಳನ್ನು ಹಿಮ್ಮೆಟಿಸಲು ಸಾಧ್ಯ ಮತ್ತು ಈ ಸಮಾವೇಶ 80 ರ ದಶಕದಲ್ಲಿ ನರಗುಂದ, ನವಲಗುಂದ ರೈತ ಚಳುವಳಿ ಎದ್ದು ಬಂದಾಗ ರಾಜ್ಯದ ಎಲ್ಲ ಜನಪರ ಸಂಘಟನೆಗಳು ಒಟ್ಟಿಗೆ ಸೇರಿದ್ದನ್ನು ಮತ್ತೊಮ್ಮೆ ನೆನಪಿಸಿತು. ಬೆಂಗಳೂರಿನ ಶಿಕ್ಷಕರ ಸದನ ಕಿಕ್ಕಿರಿದು ತುಂಬಿತ್ತು.

ಅಖಿಲ ಭಾರತ ಕಿಸಾನ ಸಭಾದ ಪ್ರಧಾನ ಕಾರ್ಯದರ್ಶಿ ಪಾಲವ್ವನಹಳ್ಳಿ ಪ್ರಸನ್ನಕುಮಾರ್ ಸ್ವಾಗತ ಮಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಶ್ರೀ ಜಿ.ಸಿ. ಬಯ್ಯಾರೆಡ್ಡಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ನಿತ್ಯಾನಂದಸ್ವಾಮಿ, ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಶ್ರೀ ಕೆ.ಟಿ. ಗಂಗಾಧರ, ಕರ್ನಾಟಕ ರಾಜ್ಯ ದಲಿತ ಸಂಘಗಳ ಸಮನ್ವಯ ಸಮಿತಿ (ಒಕ್ಕೂಟ) ದ ರಾಜ್ಯ ಸಂಚಾಲಕರುಗಳಾದ ಎನ್. ಮುನಿಸ್ವಾಮಿ, ಸಿ.ಎಂ. ಮುನಿಯಪ್ಪ, ಹಾಗೂ ಮುಖಂಡರುಗಳಾದ ಮಾವಳ್ಳಿ ಶಂಕರ್, ಎನ್. ಮೂರ್ತಿ; ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷ ದೊಡ್ಡಉಳ್ಳಾರ್ತಿ ಕರಿಯಣ್ಣ, ರೈತ–ಕೃಷಿ ಕಾರ್ಮಿಕರ ಸಂಘಟನೆಯ ಅಧ್ಯಕ್ಷ ಶ್ರೀ ಟಿ.ಎಸ್. ಸುನೀತ್ ಕುಮಾರ್, ಕರ್ನಾಟಕ ರಾಜ್ಯ ಕೃಷಿ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಡಾ। ಕೆ.ಎಸ್. ಜನಾರ್ಧನ ಅವರುಗಳು ಇರುವ ಅಧ್ಯಕ್ಷೀಯ ಮಂಡಳಿ ಸಮಾವೇಶ ನಡೆಸಿತು. ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷ ಮಾರುತಿ ಮಾನಪಡೆ, ಕರ್ನಾಟಕ ರಾಜ್ಯ ರೈತ ಸಂಘದ ಗೌರವ ಅಧ್ಯಕ್ಷ ಚಾಮರಸ ಪಾಟೀಲ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಪಾಧ್ಯಕ್ಷ ಜಿ.ಎನ್. ನಾಗರಾಜ್, ಅಖಿಲ ಭಾರತ ಕಿಸಾನ್ ಸಭಾ ರಾಷ್ಟ್ರೀಯ ಮಂಡಳಿ ಸದಸ್ಯ ಪಿ.ವಿ. ಲೋಕೇಶ್ ಅವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ ನಿರ್ಣಯ ಮಂಡಿಸಿದರು. ನಿರ್ಣಯದ ಮೇಲೆ ಪ್ರತಿ ಸಂಘಟನೆಯಿಂದ ಪ್ರತಿನಿಧಿಗಳು ಮಾತನಾಡಿದ ಮೇಲೆ ಸಮಾವೇಶ ನಿರ್ಣಯವನ್ನು ಅಂಗೀಕರಿಸಿತು. ನಿರ್ಣಯದ ಪೂರ್ಣ ಪಾಠವನ್ನು ಇದರ ಜತೆಗೆ ಕೊಡಲಾಗಿದೆ.

ರೈತ–ಕೃಷಿ ಕಾರ್ಮಿಕರ ಸಂಘಟನೆಯ ಪ್ರಧಾನ ಕಾರ್ಯದರ್ಶಿ, ಹೆಚ್.ವಿ. ದಿವಾಕರ ನಿರೂಪಣೆ ಮಾಡಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಚಂದ್ರಪ್ಪ ಹೊಸ್ಕೇರಾ ವಂದನಾರ್ಪಣೆ ಮಾಡಿದರು



ಸಮಾವೇಶದ ನಿರ್ಣಯ

ರಾಜ್ಯದಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಆಗಸ್ಟ್ 21, 2017 ರಂದು ಬೃಹತ್ ಪ್ರತಿಭಟನೆ ನಡೆಸಲು ಕರೆ

ರೈತರು–ಕೃಷಿ ಕಾರ್ಮಿಕರು ಮತ್ತು ದಲಿತರ ಖಾಸಗಿ ಸೇರಿದಂತೆ ಎಲ್ಲಾ ರೀತಿಯ ಸಾಂಸ್ಥಿಕ ಸಾಲವನ್ನು ಒಂದು ಬಾರಿಯೆಂಬಂತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮನ್ನಾ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ರೈತರ–ಕೃಷಿಕಾರ್ಮಿಕರ ಮತ್ತು ದಲಿತ ಸಂಘಗಳು ಜಂಟಿಯಾಗಿ ಸಂಘಟಿಸಿರುವ ಈ ರಾಜ್ಯ ಸಮಾವೇಶವು ಒಕ್ಕೊರಲಿನಿಂದ ಒತ್ತಾಯಿಸುತ್ತದೆ.

ರೈತರು, ಕೃಷಿಕಾರ್ಮಿಕರು ಮತ್ತು ದಲಿತರಾದ ನಮ್ಮೆಲ್ಲರನ್ನು ಬಾಧಿಸುವ ಈ ಎಲ್ಲ ರೀತಿಯ ಸಾಲಗಳು ನಾವು ಮಾಡಿಕೊಂಡ ಸಾಲಗಳಾಗಿಲ್ಲ. ತಮ್ಮ ಸರಕಾರಗಳು ಅನುಸರಿಸಿದ ತಪ್ಪು ನೀತಿಗಳಿಂದಾಗಿ ನಮ್ಮ ಮೇಲೆ ಬಲವಂತವಾಗಿ ಹೇರಿದ ಸಾಲಗಳಾಗಿದ್ದು ಅದನ್ನು ಮನ್ನಾ ಮಾಡುವ ಹೊಣೆಗಾರಿಕೆಯು ಕೇಂದ್ರ ಹಾಗೂ ರಾಜ್ಯ ಸರಕಾರಗಳದ್ದೇ ಆಗಿದೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳು ನಿರಂತರವಾಗಿ ಜಾರಿಗೆ ತರುತ್ತಿರುವ, ದೇಶವನ್ನು ಕೊಳ್ಳೆ ಹೊಡೆಯುವ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ, ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದ ನೀತಿಗಳ ಪರಿಣಾಮವೇ ಈ ಸಾಲದ ಹೊರೆಯಾಗಿದೆ. ಇವುಗಳಿಂದಾಗಿ, ಒಂದೆಡೆ, ರಸಾಯನಿಕ ಗೊಬ್ಬರ, ಬೀಜ ಮತ್ತು ಕ್ರಿಮಿನಾಶಕ, ಕೃಷಿ ಯಂತ್ರೋಪಕರಣಗಳು ಹಾಗೂ ಪೆಟ್ರೋಲ್, ಡೀಸೆಲ್ ಗಳಿಗಾಗಿ ನೀಡಲಾಗುತ್ತಿದ್ದ ಸಹಾಯಧನಗಳನ್ನು ಕಡಿತ ಮಾಡಿ, ಬೆಲೆಗಳನ್ನು ವ್ಯಾಪಕವಾಗಿ ಹೆಚ್ಚಿಸುವ ಮೂಲಕ ದೇಶದ ಕೃಷಿ ರಂಗದ ಬೆಳೆವಾರು ಉತ್ಪಾದನಾ ವೆಚ್ಚವನ್ನು ಅಗಾಧವಾಗಿ ಹೆಚ್ಚಿಸುತ್ತಾ ಬರಲಾಯಿತು. ಮತ್ತೊಂದೆಡೆ, ಸಾಂಸ್ಥಿಕ ಸಾಲಗಳನ್ನು ಅಗತ್ಯಕ್ಕನುಸಾರವಾಗಿ ರೈತರಿಗೆ ದೊರೆಯುವಂತೆ ಮಾಡುವ ಬದಲು, ಅವುಗಳನ್ನು ದುರುದ್ದೇಶದಿಂದ ಕಡಿತ ಮಾಡುತ್ತಾ ಬರಲಾಯಿತು ಹಾಗೂ ಹೂಡಿಕೆಗಳ ಸಾಲಕ್ಕಾಗಿ ದುಬಾರಿ ಬಡ್ಡಿಯ ಖಾಸಗೀ ಸಾಹುಕಾರರ ಬಳಿ ಕೈ ಒಡ್ಡುವಂತೆ ಮಾಡಲಾಯಿತು. ಇನ್ನೊಂದೆಡೆ, ಅಗ್ಗದರದ ವಿದೇಶಿ ಕೃಷಿ ಉತ್ಪನ್ನಗಳನ್ನು ವ್ಯಾಪಕವಾಗಿ ಮತ್ತು ಅನಗತ್ಯವಾಗಿ ಆಮದು ಮಾಡುತ್ತಾ, ದೇಶೀಯ ನಮ್ಮ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳು ಸಿಗಲಾರದಂತಹ ಪರಿಸ್ಥಿತಿಯನ್ನು ನಿರಂತರವಾಗಿ ಮತ್ತು ಕೃತಕವಾಗಿ ನಿರ್ಮಿಸಿದುದೇ, ನಾವುಗಳು ದೊಡ್ಡ ಪ್ರಮಾಣದಲ್ಲಿ ಸಾಲ–ಬಾಧಿತರಾಗಲು ನೈಜ ಕಾರಣವಾಗಿದೆ.

ಅದೇ ರೀತಿ, ಕೃಷಿರಂಗದಲ್ಲಿ ಬೆಳೆಯುತ್ತಿರುವ ಆದುನೀಕರಣ ಮತ್ತು ವ್ಯಾಪಕವಾದ ಯಾಂತ್ರೀಕರಣವು, ಉಂಟುಮಾಡಿದ ತೀವ್ರ ರೀತಿಯ ಉದ್ಯೋಗ ನಷ್ಟದಿಂದಾಗಿ, ಅಗತ್ಯವಿರುವಷ್ಟು ಪರ್ಯಾಯ ಉದ್ಯೋಗಗಳನ್ನು ಕಾಣದೇ ಕೃಷಿ ಕೂಲಿಕಾರರು ಮತ್ತು ದಲಿತರು ಗಂಭೀರ ಆದಾಯದ ಕೊರತೆಯನ್ನು ಎದುರಿಸುವಂತಾಗಿದೆ.

ಇವುಗಳ ಜೊತೆ ಕರ್ನಾಟಕದಲ್ಲಿ ಕಳೆದ 5–6 ವರ್ಷಗಳಿಂದ ನಿರಂತರವಾಗಿ ಬೆಂಬಿಡದೇ ಕಾಡುತ್ತಿರುವ ಬರಗಾಲಗಳು ಮತ್ತು ಅತೀವೃಷ್ಟಿಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ದುರುದ್ದೇಶದಿಂದ ಉದಾಸೀನವಾಗಿರುವುದು ಈ ಎಲ್ಲರ ಸಾಲದ ಬಾಧೆ ತೀವ್ರಗೊಳ್ಳಲು ಮತ್ತೊಂದು ಕಾರಣವಾಗಿದೆ. ಇದರಿಂದಾಗಿ ರೈತರು ಆತ್ಮಹತ್ಯೆಗೆ ದಲಿತರು ಹಾಗೂ ಕೃಷಿ ಕೂಲಿಕಾರರು ಹಸಿವಿನ ಸಾವುಗಳಿಗೆ ಶರಣಾಗುವುದು ಮುಂದುವರೆದಿದೆ.

ಜನತೆಯ ತೀವ್ರ ರೀತಿಯ ಒತ್ತಾಯಕ್ಕೆ ಮಣಿದ ರಾಜ್ಯ ಸರಕಾರ ಸಹಕಾರಿ ಬ್ಯಾಂಕುಗಳ ಅಲ್ಪಾವಧಿ ಬೆಳೆಸಾಲದಲ್ಲಿ 50,000 ರೂಗಳ ಅಸಲು ಮತ್ತು ಬಡ್ಡಿ ಮನ್ನಾ ಘೋಷಿಸಿರುವುದು ಸ್ವಾಗತಾರ್ಹವಾದರೂ, ಅದು ಸಮರ್ಪಕವಾಗಿಲ್ಲ ಮತ್ತು ರೈತರು ಹಾಗೂ ಕೃಷಿ ಕೂಲಿಕಾರರು ಮತ್ತು ದಲಿತರ ಆತ್ಮಹತ್ಯೆಗಳನ್ನು ತಡೆಯುವಂತಹುದ್ದಾಗಿಲ್ಲ. ಸಹಕಾರಿ ಬ್ಯಾಂಕುಗಳ ಇನ್ನುಳಿದ 2578 ಕೋಟಿ ರೂಗಳನ್ನು ಮನ್ನಾ ಮಾಡಬೇಕಾಗಿದೆ.

ಅದೇ ರೀತಿ, ಕೇಂದ್ರ ಸರಕಾರ ಕಳೆದೊಂದು ದಶಕದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳೂ ಸೇರಿದಂತೆ ದೊಡ್ಡ ದೊಡ್ಡ ಕಂಪನಿಗಳಿಗೆ ಸುಮಾರು 25 ಲಕ್ಷ ಕೋಟಿ ರೂಪಾಯಿಗೂ ಆಧಿಕ ಮೊತ್ತದ ತೆರಿಗೆ ವಿನಾಯಿತಿ ಮತ್ತು ಸಾಲ ಮನ್ನಾ ಮಾಡುವಲ್ಲಿ ವಿಶೇಷ ಆಸಕ್ತಿ ವಹಿಸಿದೆ. ಆದರೇ, ಕೇಂದ್ರ ಸರಕಾರದ ಸ್ವಾಮ್ಯದ ಬ್ಯಾಂಕುಗಳಲ್ಲಿನ ಶೇ 80ರಷ್ಟಿರುವ ರೈತರ, ಕೂಲಿಕಾರರ, ದಲಿತರ ಸಾಲಮನ್ನಾ ಮಾಡಲಾಗದೆಂದು ಮತ್ತು ಸಾಲ ಮನ್ನಾ ಮಾಡುವ ರಾಜ್ಯ ಸರಕಾರಗಳಿಗೆ ಅಗತ್ಯ ನೆರವು ನೀಡುವುದಿಲ್ಲವೆಂದು ಬೆದರಿಸುತ್ತಿರುವ ಜನವಿರೋಧಿ ಕ್ರಮವನ್ನು ಈ ಸಮಾವೇಶ ಬಲವಾಗಿ ಖಂಡಿಸುತ್ತದೆ. ಬ್ಯಾಂಕುಗಳಲ್ಲಿನ ಸಾಲಗಳನ್ನು ವಾಸ್ತವಿಕವಾಗಿ ತೀರಿಸಲಾಗದಿರುವುದರಿಂದ ಬ್ಯಾಂಕುಗಳು ರೈತರ ಸಾಲವನ್ನು ಕೇವಲ ನವೀಕರಿಸುವ ತಂತ್ರದಲ್ಲಿ ತೊಡಗಿವೆ. ಕೃಷಿಗೆ ಮತ್ತು ಮನೆ ಬಳಕೆಗೆ ಅಗತ್ಯವಾದ ಸಾಲವನ್ನು, ದುಬಾರಿ ಬಡ್ಡಿದರದ ಖಾಸಗೀ ಸಾಲವನ್ನೇ ಆದರಿಸುವಂತಾಗಿದೆ. ಅಲ್ಲಿಯೂ ತಗೆದುಕೊಂಡ ಸಾಲವನ್ನು ತೀರಿಸಲಾಗದೆ ತೀವ್ರ ದಬ್ಬಾಳಿಕೆಯನ್ನು ಎದುರಿಸುವಂತಾಗಿದೆ. ಆದ್ದರಿಂದ ತಕ್ಷಣವೇ ಬಾಧಿತ ರೈತರು, ಕೃಷಿಕೂಲಿಕಾರರು ಮತ್ತು ದಲಿತರಿಗೆ ಸಂಬಂಧಿಸಿದ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಮತ್ತು ಖಾಸಗೀ ರಂಗದ ಎಲ್ಲಾ ರೀತಿಯ ಸಾಲಗಳನ್ನು ಮನ್ನಾ ಮಾಡಲು ಮತ್ತು ಅಗತ್ಯ ಹೊಸ ಸಾಲ ನೀಡುವಂತೆ ಬ್ಯಾಂಕುಗಳಿಗೆ ಸೂಚನೆ ನೀಡಲು ಅಗತ್ಯಕ್ರಮಗಳನ್ನು ಕೈಗೊಳ್ಳಲು ಈ ಸಮಾವೇಶ ಒತ್ತಾಯಿಸುತ್ತದೆ.

ಡಾ. ಎಂ.ಎಸ್ ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯಂತೆ ಬೆಂಬಲ ಬೆಲೆ ಖಾತರಿಪಡಿಸುವುದೊಂದೇ ಪರಿಹಾರವಾಗಿದೆ

ನಿಜ, ಸಾಲ ಮನ್ನಾವು ತಾತ್ಕಾಲಿಕ ಪರಿಹಾರವಾಗಿದೆಯೆಂಬುದನ್ನು ಸಮಾವೇಶ ಒಪ್ಪುತ್ತದೆ. ರೈತರು ಬೆಳೆದ ಬೆಳೆಗೆ ಲಾಭದಾಯಕ ಬೆಲೆ ದೊರೆಯುವಂತೆ ಕ್ರಮವಹಿಸುವುದೊಂದೇ ಶಾಶ್ವತ ಪರಿಹಾರವೆಂದು ತನ್ನ ಸಹಮತವನ್ನು ವ್ಯಕ್ತಪಡಿಸುತ್ತದೆ. ಆದ್ದರಿಂದ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕನಿಷ್ಠ ಉತ್ಪಾಧನಾ

ಪುಟ 10 ಕ್ಕೆ

ಬೃಹತ್ ಪ್ರತಿಭಟನೆ ನಡೆಸಲು ಕರೆ............

ಪುಟ 9 ರಿಂದ

ವೆಚ್ಚವನ್ನು ಸರಿದೂಗದ ಕಡಿಮೆ ಬೆಲೆಯನ್ನು ನಿಗದಿಸುವುದು ಮತ್ತು ಮಾರುಕಟ್ಟೆಯಲ್ಲಿ ಮಧ್ಯ ಪ್ರವೇಶಿಸಿ ಕೃಷಿ ಉತ್ಪನ್ನಗಳನ್ನು ಖರೀಧಿಸುವ ಪ್ರಕ್ರಿಯೆಯಲ್ಲಿನ ಉದಾಸೀನವನ್ನು ಕೈ ಬಿಟ್ಟು ಡಾ.ಎಂ. ಎಸ್.ಸ್ವಾಮಿನಾಥನ್ ರವರ ಕೃಷಿ ಆಯೋಗದ ಸಲಹೆಯಂತೆ ರೈತರ ಬೆಳೆಗೆ ಉತ್ಪಾದನಾ ವೆಚ್ಚದ ಶೇ 150ನ್ನು ಬೆಂಬಲ ಬೆಲೆಯಾಗಿ ನಿಗದಿಸಿ, ಅದು ರೈತರಿಗೆ ಖಾತರಿಯಾಗಿ ದೊರೆಯುವಂತೆ ಖರೀಧಿಸಲು ಅಗತ್ಯ ಕ್ರಮ ವಹಿಸಬೇಕಾಗಿದೆ. ಇದನ್ನು ಕಾನೂನಾಗಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕ್ರಮವಹಿಸಬೇಕು. ಇದರ ಜೊತೆ ಅಗ್ಗದರದ ವಿದೇಶಿ ಕೃಷಿ ಉತ್ಪನ್ನಗಳು ನಮ್ಮ ಮಾರುಕಟ್ಟೆ ಹಿಡಿಯುವ ಕುತಂತ್ರವನ್ನು ಸೋಲಿಸಲು ಮತ್ತು ದೇಶೀಯ ಕೃಷಿ ಉತ್ಪನ್ನಗಳ ಬೆಲೆ ಕುಸಿಯದಂತೆ ತಡೆಯಲು ವಿದೇಶಿ ಕೃಷಿ ಉತ್ಪನ್ನಗಳ ಮೇಲೆ ಗರಿಷ್ಠ ಅಗತ್ಯ ಸುಂಕವನ್ನು ಹೇರಬೇಕು.

ಕೃಷಿಕರ ಪರ ಬೆಳೆವಿಮೆ ನೀತಿ ಜಾರಿಗೊಳಿಸಿರಿ

ಕಳೆದ 2016–17ರ ಸಾಲಿನಲ್ಲಿ ರೈತರು ಮತ್ತು ಸರಕಾರಗಳಿಂದ ರಿಲಯನ್ಸ್, ಬಜಾಜ್, ಟಾಟಾ, ಐಸಿಐಸಿಐ ಮುಂತಾದ ಬಹುರಾಷ್ಟ್ರೀಯ ವಿಮಾ ಕಂಪೆನಿಗಳು ಸುಮಾರು 21,500 ಕೋಟಿ ರೂ ವಿಮೆ ಮೊತ್ತವನ್ನು ಸಂಗ್ರಹಿಸಿವೆ. ಆದರೇ ಕಳೆದ ಅವಧಿಯಲ್ಲಿ ವಿಮೆನೀಡಿರುವುದು ಕೇವಲ 714ಕೋಟಿ ರೂಗಳಾಗಿವೆ. ಅಂದರೇ, ದಕ್ಷಿಣ ಭಾರತವೇ ಕಳೆದ ಭಾರೀ ಭೀಕರ ಬರಗಾಲಕ್ಕೆ ತುತ್ತಾಗಿ–ತ್ತು. ಉತ್ತರದ ಭಾರತದ ಹಲವೆಡೆ ಪ್ರವಾಹ ಬಾದಿಸಿತ್ತು. ಕರ್ನಾಟಕವಂತೂ ತತ್ತರಿಸಿ ಹೋಗಿತ್ತು. ಆದಾಗಲೂ ಬೆಳೆ ವಿಮೆ ದೊರೆತುದು ಕೇವಲ ಶೇ 3.31% ಮಾತ್ರವಾಗಿದೆ. ನಿಯಮಾವಳಿಯಂತೆ ವಿಮೆ ಅರ್ಜಿಗಳೇನಿದ್ದರೂ, ಅದೇ ಅವದಿಯಲ್ಲಿ ಮಾತ್ರವೇ ಸಲ್ಲಿಸಲು ಅವಕಾಶವೆನ್ನಲಾಗಿರುವುದು ಈ ಕಾರ್ಪೋರೇಟ್ ಕಂಪೆನಿಗಳಿಗೆ ಸುಮಾರು 20ಸಾವಿರಕೋಟಿ ರೂ.ಗೂ ಅಧಿಕ ಮೊತ್ತದ ಲಾಭವನ್ನು ತಂದು ಕೊಟ್ಟಿರುವುದನ್ನು ಹೇಳುತ್ತಿದೆ. ಬರಗಾಲ, ಅತೀವೃಷ್ಟಿ ಮತ್ತು ಪ್ರವಾಹಗಳಿಂದ ರೈತರನ್ನು ಸಂರಕ್ಷಿಸಲಾಗುವುದೆಂಬ ಭಾರೀ ಪ್ರಚಾರದೊಂದಿಗೆ ಜಾರಿಗೆ ಬಂದ ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆಯ ಹುಸಿತನವನ್ನು ಇದು ಬಯಲುಗೊಳಿಸಿದೆ, ಅದೇ ರೀತಿ, ಕೇಂದ್ರ ಸರಕಾರ ತನ್ನ 2015–16 ರ ಬಜೆಟ್‌ನಲ್ಲಿ ನಿಗದಿಸಿದ 5,700 ಕೋಟಿ ರೂಗಳಿಗಿಂತ ಶೇ 400 ರಷ್ಟು ಅದಿಕ ಮೊತ್ತವನ್ನು 2016–17ರಲ್ಲಿ ನೀಡಿದೆ. ಆದರೇ 2015–16ಕ್ಕೆ ಹೋಲಿಸಿದರೇ ವಿಮೆ ವ್ಯಾಪ್ತಿಗೊಳಪಟ್ಟವರ ಸಂಖ್ಯೆ (407.45 ಲಕ್ಷ ದಿಂದ 562.96 ಲಕ್ಷಕ್ಕೆ ಏರಿ–ಕೆಯಾಗಿದೆ) ಕೇವಲ ಶೇ 38 ರಷ್ಟು ಹೆಚ್ಚಾಗಿರುವುದು ಅದರ ಹಗರಣದ ಒಳ ಗುಟ್ಟನ್ನು ಸಾರುತ್ತಿದೆ.

ಬೆಳೆ ವಿಮೆಯ ಮಾರ್ಗದರ್ಶಿ ಸೂತ್ರಗಳು ಬೆಳೆಗಾರರ ಪರವಾಗಿಲ್ಲದೇ ಬಹುರಾಷ್ಟ್ರೀಯ ವಿಮಾ ಕಂಪೆನಿಗಳ ಪರವಾಗಿರುವುದನ್ನು ಇದೆಲ್ಲವೂ ಸಾಬೀತು ಪಡಿಸಿದೆಯೆಂದು ಈ ಸಮಾವೇಶ ಬಲವಾಗಿ ಖಂಡಿಸುತ್ತದೆ. ಬೆಳೆ ವಿಮೆ ಮಾರ್ಗದರ್ಶಿ ಸೂತ್ರಗಳನ್ನು ತಕ್ಷಣವೇ ಬೆಳೆಗಾರರ ಪರವಾಗಿಸಲು ಅಗತ್ಯ ತಿದ್ದುಪಡಿಗೆ ಕ್ರಮವಹಿಸಬೇಕೆಂದು ಒತ್ತಾಯಿಸುತ್ತದೆ. ಇದರಲ್ಲಿನ ಭ್ರಷ್ಟಾಚಾರದ ಹಗರಣವನ್ನು ತನಿಖೆಗೊಳಪಡಿಸಲು ಮತ್ತು ಸಂಬಂಧಿತ ಖಾಸಗೀ ವಿಮಾ ಕಂಪೆನಿಗಳನ್ನು ಕಪ್ಪು ಪಟ್ಟಿಗೆ ಸೇರ್ಪಡೆ ಮಾಡಲು ಒತ್ತಾಯಿಸುತ್ತದೆ.

ರಾಜ್ಯ ಸರಕಾರವೂ, ಕಳೆದ ವರ್ಷ ಭೀಕರ ಬರಗಾಲಕ್ಕೆ ಮತ್ತು ಅತೀವೃಷ್ಠಿ ಹಾನಿಗೆ ತುತ್ತಾದ ರಾಜ್ಯದ ಎಲ್ಲಾ ಬೆಳೆಗಾರರಿಗೆ ಸೂಕ್ತ ಪರಿಹಾರ ಸಿಗುವಂತೆ ಅಗತ್ಯ ಮಧ್ಯ ಪ್ರವೇಶದಿರುವುದು ಖಂಡನೀಯ ಮತ್ತು ತಕ್ಷಣ ಮಧ್ಯ ಪ್ರವೇಶ ಮಾಡಬೇಕೆಂದು ಈ ಸಮಾವೇಶ ಒತ್ತಾಯಿಸುತ್ತದೆ.

ಹತ್ಯೆಗಾಗಿ ಜಾನುವಾರು ಮಾರಾಟ ನಿಷೇಧದ ನಿಯಮಾವಳಿ ವಾಪಾಸು ಪಡೆಯಿರಿ

ಕೇಂದ್ರ ಸರಕಾರ, ಈಚೆಗೆ ಪ್ರಕಟಿಸಿದ ಹತ್ಯೆಗಾಗಿ ಜಾನುವಾರು ಮಾರಾಟದ ನಿರ್ಬಂದದ ನಿಯಮಾವಳಿಗಳು, ಕೃಷಿಕರಿಗೆ ಮತ್ತು ಹೈನುಗಾರರಿಗೆ ಗಾಯದ ಮೇಲೆ ಬರೆ ಎಳೆದಂತಾಗಿವೆ. ಅದಾಗಲೇ ಕೃಷಿ ಬಿಕ್ಕಟ್ಟು ಮತ್ತು ಹೈನುಗಾರಿಕೆಯ ಮೇಲಿನ ದಾಳಿಯಿಂದ ರಾಜ್ಯದ ಕೋಟ್ಯಾಂತರ ರೈತರು, ಹೈನುಗಾರರು ತತ್ತರಿಸಿಹೋಗಿದ್ದಾರೆ. ಇದೀಗ ಈ ನಿಯಮಾವಳಿ ನಿರುಪಯುಕ್ತ ಜಾನುವಾರುಗಳನ್ನು ಮಾರಾಟ ಮಾಡದಂತೆ ತಡೆಯುವುದಲ್ಲದೇ, ಅಂತಹ ಜಾನುವಾರುಗಳನ್ನು ಅವುಗಳು ಸಾಯುವವರೆಗೆ ಸಾಕಲೇ ಬೇಕಾದ ಮತ್ತು ಅವುಗಳನ್ನು ಜತನ ಮಾಡುವ ಮತ್ತು ಸತ್ತ ನಂತರ ಹೂಳುವ ಆರ್ಥಿಕ ಹೊರೆಯನ್ನು ಅನುಭವಿಸುವಂತೆ ಒಂದೆಡೆ ಒತ್ತಡ ಹೇರುತ್ತದೆ. ಇನ್ನೊಂದೆಡೆ ಅದು ಅಂತಹ ನಿರುಪಯುಕ್ತ ದನಗಳ ಮಾರಾಟದಿಂದ ಬರುವ ಆದಾಯವು ದೊ–ರೆಯದಂತೆ ಮಾಡುತ್ತದೆ. ಅದೇ ರೀತಿ, ಈ ರೀತಿಯ ಹೊರೆಯಿಂದ ತಪ್ಪಿಸಿಕೊಳ್ಳಲು ಪಶುಪಾಲನೆಯಿಂದ ಹೊರ ನಡೆಯುವಂತೆ ಇದು ಒತ್ತಾಯಿಸುತ್ತದೆ. ಆ ಮೂಲಕ ಹೈನು ಉತ್ಪನ್ನಗಳ ದೇಶದ ಬಹುದೊಡ್ಡ ಮಾರುಕಟ್ಟೆಯನ್ನು ಬಹುರಾಷ್ಟ್ರೀಯ ಸಂಸ್ತೆಗಳ ವಶಕ್ಕೆ ನೀಡುವ ಹುನ್ನಾರವನ್ನು ಹೊಂದಿದೆ. ಇದು ಸಹಕಾರಿ ರಂಗದ ಮತ್ತು ಹೈನು ಉತ್ಪನ್ನಗಳಲ್ಲಿ ತೊಡಗಿದ ಕೋಟ್ಯಾಂತರ ಕುಟುಂಬಗಳ ಉದ್ಯೋಗದ ಮೇಲೆ ಗಧಾಪ್ರಹಾರ ನಡೆಸಲಿದೆ.

ಅದೇ ರೀತಿ, ಅಲ್ಪಸಂಖ್ಯಾತರ ಮತ್ತು ದಲಿತರ ಆಹಾರದ ಹಕ್ಕಿನ ಮತ್ತು ಮಾಂಸೋದ್ಯಮದ ಉದ್ಯೋಗದ ಹಕ್ಕಿನ ಮೇಲಿನ ದಾಳಿಯು ಆಗಿದೆ. ಒಟ್ಟಾರೇ ಇದು ದೊಡ್ಡದೊಂದು ದುಡಿಯುವ ಜನಸಮುದಾಯದ ವಿರೋಧಿಯಾದ ನಿಯಮಾವಳಿಯಾಗಿದ್ದು ಅದನ್ನು ತಕ್ಷಣವೇ ವಾಪಾಸು ಪಡೆಯುವಂತೆ ಈ ಸಮಾವೇಶ ಒತ್ತಯಿಸುತ್ತದೆ. ಜಾನುವಾರು ಸಂರಕ್ಷಣೆಯ ಹೆಸರಿನಲ್ಲಿ ಕೆಲ ಮತಾಂಧರು, ಅಲ್ಪಸಂಖ್ಯಾತರು ಮತ್ತು ದಲಿತರು ಹಾಗೂ ರೈತರು, ಹೈನುಗಾರರು ಈ ಸಂಬಂಧದ ಉದ್ದಿಮೆಯಲ್ಲಿ ತೊಡಗಿರುವ ಎಲ್ಲ ದುಡಿಯುವ ಜನತೆಯ ಮೇಲಿನ ದೈಹಿಕ ದಾಳಿಯ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲು, ಆಮೂಲಕ ದೇಶದ ಸಮಗ್ರತೆ ಐಕ್ಯತೆಗೆ ಭಂಗ ಉಂಟು ಮಾಡುವುದನ್ನು ತಡೆಯಲು ಈ ಸಮಾವೇಶ ಒತ್ತಾಯಿಸುತ್ತದೆ.

ರಾಜ್ಯದಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಆಗಷ್ಠ –21, 2017ರಂದು ಬೃಹತ್ ಪ್ರತಿಭಟನೆ ನಡೆಸಲು ಕರೆ

ಕೃಷಿ ರಂಗ ಹಾಗೂ ರೈತರು, ಕೂಲಿಕಾರರು ಮತ್ತು ದಲಿತರ ಮೇಲಿನ ಬಹುರಾಷ್ಟ್ರೀಯ ಸಂಸ್ಥೆಗಳ ಈ ದೊಡ್ಡ ದಾಳಿಯನ್ನು ಹಿಮ್ಮೆಟ್ಟಿಸಲು ಮತ್ತು ಅವುಗಳಿಂದ ಅವರನ್ನು ಸಂರಕ್ಷಿಸಲು, ಮುಖ್ಯವಾಗಿ ತಕ್ಷಣಕ್ಕೆ ಈ ನಾಲ್ಕು ಪ್ರಮುಖ ವಿಚಾರಗಳಿಗೆ ಸಂಬಂಧಿಸಿ, ಮೇಲೆ ಚರ್ಚಿಸಲಾದ ಹಕ್ಕೊತ್ತಾಯಗಳಿಗಾಗಿ, ಮುಂಬರುವ ದಿನಗಳಲ್ಲಿ ನಮ್ಮೆಲ್ಲಾ ಸುಮಾರು 20 ಸಂಘಗಳು ಒಟ್ಟಾಗಿ ರೈತರು, ಕೃಷಿ ಕಾರ್ಮಿಕರು ಮತ್ತು ದಲಿತ ಸಂಘಗಳ ಒಕ್ಕೂಟ ದ ವೇದಿಕೆಯ ಮೂಲಕ, ಜಂಟಿ ಅಂದೋಳನವನ್ನು ಸಂಘಟಿಸಲು ಈ ಸಮಾವೇಶ ನಿರ್ಧರಿಸುತ್ತದೆ.

ಅದರ ಆರಂಭಿಕ ಹಂತವಾಗಿ, ಆಗಸ್ಟ್ 21, 2017 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಒಂದು ಲಕ್ಷ ರೈತರು, ಕೃಷಿಕೂಲಿಕಾರರು ಮತ್ತು ದಲಿತರನ್ನು ಅಣಿ ನೆರಸುವ ಮೂಲಕ ಬೃಹತ್ ಪ್ರತಿಭಟನೆಯನ್ನು ನಡೆಸಿ ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಒತ್ತಾಯಿಸಲು ಈ ಸಮಾವೇಶ ನಿರ್ಧರಿಸುತ್ತದೆ. ರಾಜ್ಯದ ರೈತರು, ಕೃಷಿ ಕಾರ್ಮಿಕರು, ದಲಿತರು ಹಾಗೂ ಇತರೇ ಪ್ರಗತಿಪರರು ಪಾಲ್ಗೊಂಡು ರಾಜ್ಯದಾದ್ಯಂತ ಈ ಜಂಟಿ ಅಂದೋಳನವನ್ನು ಜಯಪ್ರದಗೊಳಿಸಲು ಕರೆ ನೀಡುತ್ತದೆ.

ಇದಕ್ಕಾಗಿ,

1. ತಕ್ಷಣಕ್ಕೆ ಇಲ್ಲಿ ಭಾಗಿಯಾದ ಎಲ್ಲಾ ಸಂಘಟನೆಗಳ ಜೊತೆ, ಎಲ್ಲಾ ಜಿಲ್ಲಾ ಮಟ್ಟದಲ್ಲಿ ಜಂಟಿ ಸಭೆಗಳನ್ನು ಆಯೋಜಿಸುವುದು ಮತ್ತು ಜಿಲ್ಲಾ ಮಟ್ಟದ ಜಂಟಿ ರೈತರು, ಕೃಷಿಕಾರ್ಮಿಕರ ಮತ್ತು ದಲಿತರ ಸಮಾವೇಶಗಳನ್ನು ಸಂಘಟಿಸುತ್ತದೆ.
2. ಅದೇ ರೀತಿ, ಆಗಸ್ಟ್ 21,2017ರ ಹೋರಾಟದ ಯಶಸ್ಸಿಗೆ ಎಲ್ಲೆಡೆ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ.

ಕೋಮುವಾದದ ಮೂಲಕ ಪ್ರಜಾಪ್ರಭುತ್ವದ ದಮನ.......

ಪುಟ 8 ರಿಂದ

ಆದರೆ ಅವರ ಸರ್ಕಾರ ದೇಶದ ರಕ್ಷಣೆ–ಯ ಜವಾಬ್ದಾರಿಯನ್ನು ಅಮೇರಿಕಾದೊಂದಿಗೆ ಹಂಚಿಕೊಂಡಿದೆ. ಪ್ಯಾಲೆಸ್ತೀನ್ ಸ್ವಾತಂತ್ರ್ಯದ ಪರವಾಗಿದ್ದ ಬಹುಕಾಲದ ಭಾರತದ ಆಲಿಪ್ತ ನೀತಿಗೆ ಎಳ್ಳುನೀರು ಬಿಟ್ಟು, ಪ್ರಧಾನಿ ಇಸ್ರೇಲಿನೊಂದಿಗೆ ಕೈಕುಲುಕಿದ್ದಾರೆ. ಭಾರತದ ಸ್ವತಂತ್ರ ವಿದೇಶ ನೀತಿಯನ್ನೇ ಮಣ್ಣುಪಾಲು ಮಾಡಲಾಗಿದೆ. ಮೋದಿ ಮತ್ತು ಟ್ರಂಪ್ ಇವರಿಬ್ಬರ ನೀತಿಗಳೂ ಒಂದೇನೇ. ಇಬ್ಬರೂ ಬಹುರಾಷ್ಟ್ರೀಯ ಕಂಪೆನಿಗಳ ಕಾರ್ಯನಿರ್ವಾಹಕ ನಿರ್ದೇಶಕರಂತೆ ಕೆಲಸ ಮಾಡುತ್ತಿದ್ದಾರೆ. ಜನರ ಸಮಸ್ಯೆಗಳಿಂದ ಅವರನ್ನು ದಿಕ್ಕುತಪ್ಪಿಸಲು ಬಂಡವಾಳಶಾಹಿಗೆ ಏನಾದರೂ ಮಾಡಬೇಕಾಗಿದೆ. ಅದಕ್ಕಾಗಿ ಅವರು ಧರ್ಮ, ಗೋವು, ದೇಶಭಕ್ತಿ ಹೆಸರಲ್ಲಿ ಕೋಮುವಾದವನ್ನು ಮಾಡುತ್ತಿದ್ದಾರೆ.

ಕೋಮು ಶಕ್ತಿಗಳನ್ನು ಎದುರಿಸುವ ಎಲ್ಲ ಶಕ್ತಿಗಳು ಒಂದಾಗಬೇಕಾಗಿದೆ. ರಾಷ್ಟ್ರ, ರಾಜ್ಯ ಉಳಿಸಬೇಕು. ರಾಜಕೀಯ ಲೆಕ್ಕಾಚಾರಕ್ಕಾಗಿ ನಾವು ಕಾರ್ಯಕ್ರಮ ಮಾಡುವುದಲ್ಲ. ದೇಶ, ರಾಜ್ಯ ಉಳಿದರೆ ನಾವೆಲ್ಲಾ ಉಳಿಯುತ್ತೇವೆ. ಜನ ಇಲ್ಲದೆ ದೇಶ, ರಾಜ್ಯ ಇಲ್ಲ. ದೇಶದ ಸ್ವಾತಂತ್ರ್ಯದ ಹೊಸ್ತಿಲಲ್ಲಿ ಕೋಮುವಾದದ ವಾಸನೆ ಗ್ರಹಿಸಿದ ಪ್ರಧಾನಿ ನೆಹರೂ ಹೇಳಿದ್ದನ್ನು ನೆನಪಿಸೋಣ. "ಭಾರತ ಉಳಿದರೆ ಯಾರು ಬದುಕುವರು? ಭಾರತ ಉಳಿದರೆ ಯಾರು ಸಾಯುವರು?" ಎಂಬುದಾಗಿ ಜಿ.ವಿ.ಶ್ರೀರಾಮರೆಡ್ಡಿ ಮಾತು ಮುಗಿಸಿದರು.

"ಗೋರಕ್ಷಕರು ಯಾವತ್ತಾದರೂ ದನ ಸಾಕಿದ್ದಾರಾ?" – ಭೋಜೆಗೌಡ

ಜನತಾದಳ (ಎಸ್)ಪಕ್ಷದ ರಾಜ್ಯ ಕಾರ್ಯದರ್ಶಿಯಾದ ಭೋಜೆಗೌಡ ಅವರು ಮಾತನಾಡಿ, ಇವತ್ತು ನಾವು ಚಿಂತನೆ ಮಾಡದಿದ್ದರೆ ಮುಂದಿನ ಪೀಳಿಗೆಗೆ ದುರ್ದಿನಗಳನ್ನು ಹಸ್ತಾಂತರಿಸಿದಂತೆ ಎಂದು ಕಳವಳ ವ್ಯಕ್ತಪಡಿಸಿದರು.

ಗೋಮಾರಾಟ ನಿಯಂತ್ರಣ ನಿಯಮಗಳನ್ನು ಸಂಸತ್ತಿನಲ್ಲಾಗಲೀ ಶಾಸನಸಭೆಗಳಲ್ಲಾಗಲೀ ಚರ್ಚಿಸದೆ ಜಾರಿಗೆ ತರಲಾಗಿದೆ. ಗೋರಕ್ಷಕರೆನ್ನುವವರು ಯಾರಾದರೂ ದನ ಸಾಕಿದ್ದಾರೆಯೇ? ರೈತ ಕುಟುಂಬಗಳು ಹೈನುಗಾರಿಕೆ ಮಾಡುವವರ ಕಷ್ಟ ಅವರಿಗೆ ಗೊತ್ತಿದೆಯೇ? ಇವತ್ತು ದೇಶದಲ್ಲಿ ಅಶಾಂತಿ, ಗಲಭೆ, ಹೆಚ್ಚಲು ಈ ಮಸೂದೆಯು ಒಂದು ಕಾರಣ ಎಂದು ಭೋಜೆಗೌಡ ತಿಳಿಸಿದರು.

ಬಂಟ್ವಾಳ ಗಲಭೆಗಳಲ್ಲಿ ಸತ್ತಿರುವ ಒಬ್ಬ ಯುವಕನಿಗಾಗಿ ಉಮ್ಮಳಿಸಿ ದು:ಖಿಸುತ್ತಿರುವ ಸಚಿವ ಸದಾನಂದ ಗೌಡರಿಗೆ ಇದಕ್ಕೂ ಮುಂಚೆ ಬಲಿಯಾಗಿರುವ ಯುವಕರ ಹೆತ್ತವರಿಗಾಗಿ ಯಾಕೆ ದು:ಖ ಉಮ್ಮಳಿಸಲಿಲ್ಲ? ಗಲಭೆಗಳ ಮಧ್ಯೆ ಒಬ್ಬ ಹೆಣ್ಣು ಮಗಳಾಗಿದ್ದು ಅರ್ಭಟಿಸಿ ಪ್ರಚೋದಿಸುವ ಸಂಸದೆ ಶೋಭಾ ಕರಂದ್ಲಾಜೆ ಮಾತು ಆಡುವುದನ್ನು ನಿಲ್ಲಿಸಲಿ ಎಂದು ಭೋಜೇಗೌಡ ಆಗ್ರಹಿಸಿದರು.

"ಕೋಮುವಾದಿಗಳು ಆತ್ಮಹತ್ಯೆಯ ಹಾದಿಗಿಳಿದಿದ್ದಾರೆ" – ಸಿದ್ದನಗೌಡ

ಸಿಪಿಐ ಕೇಂದ್ರ ಸಮಿತಿ ಸದಸ್ಯ ಡಾ.ಸಿದ್ಧನಗೌಡ ಪಾಟೀಲ್ ಮಾತನಾಡಿ, ರಾಜಕೀಯ ಕಾರಣಕ್ಕಾಗಿ ಗಲಭೆ ನಡೆಸಲಾಗುತ್ತಿದೆ ಎಂಬುದು ಹಾಗೂ ಅದರ ಪರಿಣಾಮ ಏನು ಎಂಬುದು ನಡೆಸುತ್ತಿರುವವರಿಗೂ ಗೊತ್ತಿದೆ. ರಸ್ತೆಯಲ್ಲಿ ಎದುರಾಗುವ ವ್ಯಕ್ತಿ ಯಾರೋ ಏನೋ ಎಂಬ ಅನುಮಾನದಿಂದ ನಡೆದಾಡುವ ಪರಿಸ್ಥಿತಿ ಎದುರು ನೋಡಬೇಕಾಗಿದೆ ಎಂದರು.

ಪ್ರಧಾನಿ ಮೋದಿ ಅವರು ಜನರ ಬಡತನ, ಹಸಿವು, ನಿರುದ್ಯೋಗ ನೋಡಿ ಆಡಳಿತ ಮಾಡುತ್ತಿಲ್ಲ. ಪಾಕಿಸ್ತಾನ ಸೇರಿಸಿ ಹಿಂದೂಸ್ತಾನ ಆಡಳಿತ ಮಾಡುತ್ತಿದ್ದಾರೆ. ಗೋರಕ್ಷಣೆ ತೋರಿಸಿ ಮನುಷ್ಯರನ್ನು ದಮನಿಸುವ ಆಡಳಿತ ಮಾಡುತ್ತಿದ್ದಾರೆ. ನಮಗೆ ಇದು ಬೇಕಾಗಿಲ್ಲ. ನಾವು ಮತಾಚರಣೆಯನ್ನು ಗೌರವಿಸುತ್ತೇವೆ. ಆದರೆ ಮತಾಂಧತೆಯನ್ನು ದಿಕ್ಕರಿಸುತ್ತೇವೆ ಎಂದು ಅವರು ನುಡಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಹೋರಾಟದಿಂದ ಹೊರಗುಳಿದಿದ್ದ ಕರಿಟೋಪಿಯವರು, ಸ್ವಾತಂತ್ರ್ಯದ ಬಳಿಕ ರಾಜಕೀಯ ಒಳಹೊಕ್ಕು 1975ರ ತುರ್ತುಪರಿಸ್ಥಿತಿ ಬಳಿಕ ಕೇಂದ್ರ ಸರಕಾರ ಸೇರಿಕೊಂಡು, ಇವತ್ತು ಆಡಳಿತದ ಮುಂಚೂಣಿಗೆ ಬಂದಿದ್ದಾರೆ. ಹಿಟ್ಲರನಂತೆ ಸರ್ವಾಧಿಕಾರಿಯಾದರೆ ಅವನಿಗಾದ ಗತಿಯೇ ಅವರಿಗೂ ಬರಲಿದೆ. ಕೋಮುವಾದಿಗಳು ಇವತ್ತು ಆತ್ಮಹತ್ಯೆಯ ಹಾದಿಗಿಳಿದಿದ್ದಾರೆ ಎಂದವರು ಲೇವಡಿ ಮಾಡಿದರು.

ಸ್ವತಂತ್ರ ಭಾರತದ ಮುನ್ನಡೆಗೆ ದ.ಕ.ಜಿಲ್ಲೆ ಈ ಹಿಂದೆ ಚಾಲನೆ ಕೊಟ್ಟಿದೆ. ಇವತ್ತು ದ.ಕ.ಜಿಲ್ಲೆಯ ಜನತೆ ಸೌಹಾರ್ದಕ್ಕೆ ಚಾಲನೆ ಕೊಡಬೇಕೆಂದು ಡಾ.ಸಿದ್ಧನಗೌಡ ಪಾಟೀಲ ಕರೆ ನೀಡಿದರು.

ಕೋಮು ಸಂಘರ್ಷಗಳಲ್ಲಿ ಸಾಯುವವರು ಹಿಂದುಳಿದವರು ಮತ್ತು ದಲಿತರು : ದೇವದಾಸ್

ದಲಿತ ಸಂಘರ್ಷ ಸಮಿತಿಯ ಎಂ.ದೇವದಾಸ್ ಅವರು ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಭಂಗ ತರುವ ಪ್ರಯತ್ನವನ್ನು ಮತಾಂಧ ಶಕ್ತಿಗಳು ಮಾಡುತ್ತಿವೆ ಎಂದು ಎಚ್ಚರಿಸಿದರು.

ಬಾಬ್ರಿ ಮಸೀದಿ ಕೆಡವುವ ಸಂದರ್ಭದಲ್ಲಿ ಇಟ್ಟಿಗೆಯನ್ನು ಸಂಕೇತ ಮಾಡಿ ಮತೀಯ ಕ್ರೋಡೀಕರಣ ಮಾಡಿದ್ದರು. ಈಗ ತಮ್ಮ ಗುಂಪಿನ ಜಮಾವಣೆಗಾಗಿ ಗೋವನ್ನು ಸಂಕೇತವಾಗಿ ಬಳಸುತ್ತಿದ್ದಾರೆ.

ಇವತ್ತು ದಕ್ಷಿಣ ಕನ್ನಡದಲ್ಲಿ ನಡೆದಿರುವ ಕೋಮು ಸಂಘರ್ಷಗಳಲ್ಲಿ ಸಾಯುವವರು ಹಿಂದುಳಿದವರು ಮತ್ತು ದಲಿತರು. ಬ್ರಾಹ್ಮಣರು, ಮೇಲುಜಾತಿಯವರ ಮಕ್ಕಳಿಗೆ ಯಾವ ಬಾಧೆಯೂ ಆಗಿಲ್ಲ. 1992 ರಲ್ಲಿ ಬಾಬ್ರಿ ಮಸೀದಿ ಉರುಳಿಸಿದಾಗ, ಅದನ್ನು ವಿರೋಧಿಸಿ ದ.ಕ.ಜಿಲ್ಲೆಯಲ್ಲಿ ಮಾನವ ಸರಪಳಿ ಮಾಡಿದ್ದೆವು. ಈ ಬಾರಿಯೂ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಕೋಮುವಾದ ವಿರೋಧಿಸಿ ಅಣಿನೆರೆಸುವ ಅವಶ್ಯಕತೆ ಇದೆ ಎಂದವರು ಹೇಳಿದರು.

ಗೋಮಾರಾಟ ನಿಯಮಾವಳಿ ಒಕ್ಕೂಟ ತತ್ವಕ್ಕೇ ವಿರುದ್ಧ: ಪುಣಚ್ಚ

ಕರ್ನಾಟಕ ರಾಜ್ಯ ರೈತ ಸಂಘ (ಹಸಿರುಸೇನೆ) ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ ಮಾತನಾಡಿ, ಶಾಸನಸಭೆ ಸಂಸತ್ತಿನಲ್ಲಿ ಚರ್ಚಿಸದೇನೇ ಗೋಮಾರಾಟ ನಿಯಮಾವಳಿ ಸೇರಿ ಅನೇಕ ಕಾಯ್ದೆಗಳನ್ನು ಕೇಂದ್ರ ಸರಕಾರ ಜ್ಯಾರಿ ಮಾಡುತ್ತಿರುವುದು ಭಾರತ ರಾಷ್ಟ್ರದ ಒಕ್ಕೂಟ ತತ್ವಕ್ಕೇ ವಿರುದ್ಧವಾದುದು ಎಂದು ತಿಳಿಸಿದರು.

ಈಗ ಮಾಡಿರುವ ಗೋಮಾರಾಟ ಕಾನೂನು ಕೂಡಾ ಅಸಂಬದ್ಧ ಕಾನೂನಾಗಿದೆ. ರೈತರು ಗೋವನ್ನು ಮಾರುವಂತಿಲ್ಲ. ಗೋಮಾಂಸ, ಚರ್ಮದ ಕಾರ್ಖಾನೆಗಳು ಗೋವನ್ನು ಖರೀದಿಸಬಹುದಂತೆ. ಮಾರಾಟವಿಲ್ಲದೆ ಖರೀದಿ ಅಸಂಬದ್ಧ ಅಲ್ಲವೇ ಎಂದವರು ಪ್ರಶ್ನಿಸಿದರು.

ಸಿಪಿಐ(ಎಂ)ನ ವಸಂತ ಆಚಾರಿ, ಸಿಪಿಐನ ವಿ.ಕುಕ್ಯಾನ್, ಜನತಾದಳದ ಮಹಮ್ಮದ್ ಕುಂಞ ಅಧ್ಯಕ್ಷ ಮಂಡಳಿಯಾಗಿ ಕಾರ್ಯ ನಿರ್ವಹಿಸಿದರು. ಮುಂದಿನ ದಿನಗಳಲ್ಲಿ ಸೌಹಾರ್ದಕ್ಕಾಗಿ ಬೃಹತ್ ಪಾದಯಾತ್ರೆಯೊಂದನ್ನು ಮಂಗಳೂರಿನಿಂದ ಬಂಟ್ವಾಳಕ್ಕೆ ಹಮ್ಮಿಕೊಳ್ಳುವ ನಿರ್ಣಯವನ್ನು ಸಮಾವೇಶ ಕೈಗೊಂಡಿತು.

ಸಿಪಿಐ(ಎಂ)ನ ಯಾದವ ಶೆಟ್ಟಿ ಸ್ವಾಗತಿಸಿ ಪ್ರಸ್ತಾವನೆಗೈದರು. ಸಿಪಿಐನ ಶೇಖರ್ ಬಿ. ಧನ್ಯವಾದವಿತ್ತರು.

ಚೀನಾ ಪ್ರವಾಸ : ಸ್ಫೂರ್ತಿಯುತ ಅನುಭವ

ಚೀನಾ ಕಮ್ಯುನಿಸ್ಟ್ ಪಕ್ಷ (ಸಿಪಿಸಿ) ಮತ್ತು ಸಿಪಿಐ(ಎಂ) ಪಕ್ಷಗಳ ನಡುವಿನ ಉಭಯತ್ರ ಸಂವಾದದ ಭಾಗವಾಗಿ ಇದೇ ಮೇ ತಿಂಗಳಲ್ಲಿ ಸಿಪಿಐ(ಎಂ) ನಿಯೋಗವೊಂದು ಚೀನಾಕ್ಕೆ ಭೇಟಿ ನೀಡಿತ್ತು. ಬಡತನ ನಿವಾರಣೆಗೆ ಚೀನಾ ಸರ್ಕಾರ ಈ ವರೆಗೆ ತೆಗೆದುಕೊಂಡಿರುವ ಕ್ರಮಗಳು, 2020ರ ಹೊತ್ತಿಗೆ ಚೀನಾದಲ್ಲಿ ಪೂರ್ಣ ಬಡತನ ನಿವಾರಣೆ ಬಗ್ಗೆ ಮುಂದಿನ ಸಿಪಿಸಿ ಮಹಾಧಿವೇಶನ ಅಂಗೀಕರಿಸಲಿರುವ ಕಾರ್ಯಕ್ರಮದ ಬಗ್ಗೆ ಚರ್ಚೆ ನಿಯೋಗದ ಭೇಟಿಯ ಉದ್ದೇಶವಾಗಿತ್ತು. ನಿಯೋಗದ ಭಾಗವಾಗಿದ್ದ ಕರ್ನಾಟಕ ಸಿಪಿಐ(ಎಂ) ಸೆಕ್ರೆಟಾರಿಯಟ್ ಸದಸ್ಯ ಕಾ. ವಸಂತ ಆಚಾರಿ ಅವರಿಂದ ಈ ಭೇಟಿ ಬಗ್ಗೆ ಲೇಖನದ ಸರಣಿಯ ಮೊದಲ ಕಂತು. ಲೇಖನ ಸರಣಿ ಮುಂದಿನ ಸಂಚಿಕೆಗಳಲ್ಲಿ ಧಾರಾವಾಹಿಯಾಗಿ ಮುಂದುವರಿಯುವುದು.

ವಸಂತ ಆಚಾರಿ

ಚೀನಾ ಕಮ್ಯೂನಿಸ್ಟ್ ಪಕ್ಷದ ಆಹ್ವಾನದ ಮೇರೆಗೆ ಸಿಪಿಐ(ಎಂ) ಪಕ್ಷದಿಂದ 13 ಮಂದಿ ಪ್ರತಿನಿಧಿಗಳು ದಿನಾಂಕ 16–5–2017 ರಿಂದ 26–5–2017ರ ತನಕ 10 ದಿನಗಳ ಚೀನಾ ಭೇಟಿಗಾಗಿ ತೆರಳಿದ್ದರು. ನನ್ನನ್ನು ಕರ್ನಾಟಕದ ಏಕೈಕ ಪ್ರತಿನಿಧಿಯಾಗಿ ಪಕ್ಷದ ರಾಜ್ಯ ಸಮಿತಿ ಆಯ್ಕೆ ಮಾಡಿತ್ತು. ವಿದೇಶ ಪ್ರವಾಸದ ಕನಸು ಕೂಡಾ ಕಾಣದ ನಾನು ವಿದೇಶ ಪ್ರವಾಸಕ್ಕಾಗಿ ತುರ್ತಾಗಿ ಪಾಸ್‌ಪೋರ್ಟ್ ಮಾಡಬೇಕಾಗಿತ್ತು. ಅದೂ ಕೂಡಾ ದಿನಾಂಕ 30–4–2017ರೊಳಗೆ ಪಕ್ಷದ ಕೇಂದ್ರ ಸಮಿತಿಗೆ ಮುಟ್ಟಬೇಕಿತ್ತು. ಮಂಗಳೂರಿನ ಸಂಗಾತಿಗಳು ಹಾಗೂ ಜಿಲ್ಲೆಯ ಪೋಲೀಸ್ ಕಮೀಷನರ್‌ರವರ ಸಹಕಾರದಿಂದಾಗಿ ಪಾಸ್‌ಪೋರ್ಟ್‌ನ ಹಿಂದುಗಡೆ ವಿವಿಧ ಓಡಾಟ ನಡೆಸಿ ಕೊನೆಗೂ ಪಾಸ್‌ಪೋರ್ಟ್ ಲಭ್ಯವಾಯಿತು. ವಿದೇಶ ಪ್ರವಾಸ ಹಾಗೂ ವಿಮಾನದಲ್ಲಿ ಪ್ರಯಾಣ ಕೂಡಾ ಪ್ರಥಮ ಅನುಭವ. ಸಾಮಾನ್ಯ ಜನರ ಮಧ್ಯೆ ಕಳೆದ 37 ವರ್ಷಗಳಿಂದ ದುಡಿಯುತ್ತಿರುವ ನನಗೆ ಈ ಎರಡು ವಿಚಾರಗಳ ಬಗ್ಗೆ ನಿರಾಸಕ್ತಿ ಇತ್ತು. ಕೊನೆಗೂ ಕೇಂದ್ರ, ರಾಜ್ಯ, ಜಿಲ್ಲೆಯ ಪಕ್ಷದ ನಾಯಕರ ಒತ್ತಾಸೆ ಹಾಗೂ ಹಿತೈಷಿಗಳ ಸಹಕಾರದಿಂದ ಚೀನಾ ಪ್ರವಾಸ ಮಾಡಲು ಸಾಧ್ಯವಾಯಿತು.

2017ರ ಮೇ 15 ರಂದು ಪಕ್ಷದ ಕೇಂದ್ರ ಸಮಿತಿಯ ಕಚೇರಿಯ ಮೀಟಿಂಗ್ ಹಾಲ್‌ನಲ್ಲಿ ಚೀನಾಕ್ಕೆ ಹೋಗುವ ಸಿಪಿಐ(ಎಂ)ನ ಪ್ರತಿನಿಧಿಗಳ ಸಭೆ ನಡೆಯಿತು. ಪಕ್ಷದ ಅಂತಾರಾಷ್ಟ್ರೀಯ ವ್ಯವಹಾರದ ಜವಾಬ್ದಾರಿ ಹೊತ್ತಿರುವ ಪಿ.ಬಿ.ಸದಸ್ಯರಾದ ಕಾ|ಎಂ.ಎ.ಬೇಬಿ, ಕೇಂದ್ರ ಸಮಿತಿ ಸದಸ್ಯರೂ, ಹಾಗೂ ಅಂತಾರಾಷ್ಟ್ರೀಯ ವ್ಯವಹಾರ ನೋಡಿಕೊಳ್ಳುತ್ತಿರುವ ಕಾ|ಹರಿಸಿಂಗ್ ಕಾಂಗ್ ಹಾಗೂ ಕೇಂದ್ರ ಕಾರ್ಯದರ್ಶಿ ಮಂಡಲಿ ಸದಸ್ಯರಾದ ಕಾ|ನಿಲೋತ್ಪಲ್ ಬಸುರವರು ನಮ್ಮ ಪ್ರಯಾಣದ ಕುರಿತು, ವಿಸಾ, ಪಾಸ್‌ಪೋರ್ಟ್‌ನ ಅವಶ್ಯಕತೆಯ ಬಗ್ಗೆ ಗಂಭೀರತೆ, ಅಲ್ಲಿ ನಡೆದುಕೊಳ್ಳಬೇಕಾದ ರೀತಿ, ಅಲ್ಲಿನ ಆಹಾರ ಪದ್ಧತಿ, ಅಲ್ಲಿ ನೀಡುವ ಪಥ್ಯದ ವಿಷಯಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡಿದರು. ಇದು ನಮ್ಮ ಚೀನಾ ಪ್ರವಾಸಕ್ಕೆ ದಿಕ್ಸೂಚಿಯಾಯಿತು. ಈ ಸಭೆಯಲ್ಲಿ ಭಾಗವಹಿಸುವ ಬೇರೆ ಪ್ರತಿನಿಧಿಗಳ ಪರಿಚಯವೂ ಅಲ್ಲಿ ನನಗೆ ಆಯಿತು.

ಕಾ|ಬೇಬಿ ಸುಜಾತ ಸಿಪಿಐ(ಎಂ)ನ ಮಾಜಿ ಸಂಸತ್ ಸದಸ್ಯರು, ಅವರು ನಮ್ಮ ತಂಡದ ನಾಯಕಿಯಾಗಿದ್ದು ಕೇರಳದ ಪಕ್ಷದ ಮುಂದಾಳು ಆಗಿದ್ದಾರೆ, ಪಶ್ಚಿಮ ಬಂಗಾಳದ ರಾಜ್ಯ ಸಮಿತಿ ಸದಸ್ಯರೂ ಗಣಶಕ್ತಿಯ ಸಂಪಾದಕರೂ ಆಗಿರುವ ಕಾ|ದತ್ತ ಅವೀಕ್ ಅವರು ಸಂಚಾಲಕರೂ ಆಗಿರುತ್ತಾರೆ ಎಂದು ಕಾ|ಎಂ.ಎ.ಬೇಬಿಯವರು ಆ ಸಭೆಯಲ್ಲಿ ಘೋಷಿಸಿದರು. ಉಳಿದ 11 ಮಂದಿ ಪ್ರತಿನಿಧಿಗಳಲ್ಲಿ ಪಶ್ಚಿಮ ಬಂಗಾಳದ ರಾಯ್ ಚೌಧರಿ ಅಬಾಸ್, ಪಶ್ಚಿಮ ಬಂಗಾಳದ ಎಸ್‌ಎಫ್‌ಐ ನಾಯಕಿ ಕೇಂದ್ರ ಪದಾಧಿಕಾರಿಯಾಗಿರುವ ಕಾ|ರಾಯ್‌ಮಧುಜಾಸೇನ್, ಕೇರಳ ರಾಜ್ಯದಿಂದ ಪುತೀಯ ಪುರಾಯಿಲ್ ಮುಸ್ತಾಫ ವಾಲಕ್ಕಾಡ್, ಕಣ್ಣೂರು ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರಾದ ಕಾ|ಪುರಾಯಿಲ್ ದಿವ್ಯಾ ಪುತೀಯ, ಕೇರಳ ಎಸ್‌ಎಫ್‌ಐನ ನಾಯಕಿ ಕೇಂದ್ರ ಪದಾಧಿಕಾರಿ ಖತಿಜಾ ಸುಹೇಲ ಕಣ್ಣೂರು, ಕೈರಳಿ ಟಿವಿ ಚಾನೆಲ್‌ನ ಆಡಳಿತ ನಿರ್ದೇಶಕರು, ಕಾ|ಪೆಲಿಜೋನ್ ಬ್ರಿಟ್ಟಾಸ್ ಅಲ್ಲೈಲಾ ಕುಜ್ಜೈಲ್, ತ್ರಿಪುರಾ ರಾಜ್ಯದ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕಾ|ಅಮಲ್ ಚಕ್ರವರ್ತಿ, ತೆಲಂಗಾಣದ ರಾಜ್ಯ ಕಾರ್ಯದರ್ಶಿ ಮಂಡಲಿ ಸದಸ್ಯ ಸುದರ್ಶನ್ ರಾವ್ ಪೊತಿನೇನಿ, ಚತ್ತಿಸ್‌ಗಢ ರಾಜ್ಯ ಸಮಿತಿ ಸದಸ್ಯ ಕೋಬ್ರಾ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ|ದಾಸ್ ಸಪೂರನ್, ಎಸ್‌ಎಫ್‌ಐ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಹಿಮಾಚಲ ಪ್ರದೇಶದ ಕಾ|ವಿಕ್ರಂ ಸಿಂಗ್ ಮತ್ತು ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಲಿ ಸದಸ್ಯನಾಗಿ ನಾನು.

ದಿನಾಂಕ 15–5–2017 ರಂದು ರಾತ್ರಿ 10.30ಕ್ಕೆ ನಾವು ದೆಹಲಿಯ ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಲಪಿದೆವು. 2017 ಮೇ 16 ರಂದು ಬೆಳಗ್ಗಿನ ಜಾವ 2–50ಕ್ಕೆ ಚೀನಾದ ವಿಮಾನ ಸಿಎ 948 ನಮ್ಮನ್ನು ಚೀನಾದತ್ತ ಕೊಂಡೊಯ್ದು 11–25ಕ್ಕೆ ಚೀನಾದ ರಾಜಧಾನಿ ಬೀಜಿಂಗ್‌ಗೆ ತಲಪಿಸಿತು. ವಿಮಾನ ನಿಲುಗಡೆಯಾಗುವ ಕೆಲವೇ ಕ್ಷಣಗಳಲ್ಲಿ ಬೀಜಿಂಗ್ ತಲುಪುವ ಸೂಚನೆಯನ್ನು ವಿಮಾನದಲ್ಲಿ ನೀಡುತ್ತಿದ್ದರು. ನಾನು ವಿಮಾನದಿಂದ ಕೆಳಗೆ ಇಣುಕಿ ನೋಡಿದಾಗ ಬೀಜಿಂಗ್‌ನ ಸೌಂದರ್ಯದ ಮೇಲ್ಮುಖದ ಚಿತ್ರ ಕಣ್ಣಿಗೆ ಕಾಣುತ್ತಿತ್ತು. ಚೀನಾ ಎಂದರೆ ಎಷ್ಟೊಂದು ಅದ್ಭುತ ಎಂದು ಅವಾಗಲೇ ನನಗೆ ಅನಿಸಲು ಪ್ರಾರಂಭವಾಯಿತು. ವಿಮಾನ ನಿಲ್ದಾಣದ ಹೊರಗಡೆ ನಮಗಾಗಿ ಸಿಪಿಸಿ (ಚೀನಾ ಕಮ್ಯೂನಿಸ್ಟ್ ಪಕ್ಷದ)ಯ ಕೇಂದ್ರ ಸಮಿತಿಯ ಅಂತಾರಾಷ್ಟ್ರೀಯ ಇಲಾಖೆಯ ಜವಾಬ್ದಾರಿ ಇರುವ ಸಂಗಾತಿ ಲೂ ವೆನ್ ಹಿ ರವರು ಕಾಯುತ್ತಿದ್ದರು. ಅವರು ನಮ್ಮನ್ನು ಆತ್ಮೀಯವಾಗಿ ಬರಮಾಡಿಕೊಂಡರು. ನಂತರ ಫ್ಯೂಜೈನ್‌ನ FAO ವಾಂಗ್ ಡೆನ್ ಪೆಂಗ್ ಹಾಗೂ ಲಿನ್ ಕ್ಸಿಯೋ ಜಿಂಗ್ ರವರು ನಮ್ಮೊಂದಿಗೆ ಸೇರಿಕೊಂಡರು. ಅಲ್ಲಿಯೇ ಹೊರಗಡೆ ಇರುವ ಪ್ಲೈಪೋರ್ಟ್ ಗಾರ್ಡನ್ ಹೊಟೇಲಿನಲ್ಲಿ ಬೆಳಿಗ್ಗಿನ ಟಿಫಿನ್ ವ್ಯವಸ್ಥೆ ಮಾಡಿ ಮಿನಿ ಬಸ್ ಮುಖಾಂತರ ಡೊಮೆಸ್ಟಿಕ್ ವಿಮಾನ ನಿಲ್ದಾಣಕ್ಕೆ ಕರೆದುಕೊಂಡು ಹೋದರು. ವಿಮಾನ ನಿಲ್ದಾಣದ ಚೆಕ್ಕಿಂಗ್ ವ್ಯವಸ್ಥೆ ಅದ್ಭುತ. ಕ್ರಮಬದ್ಧವಾದ ಚೆಕ್ಕಿಂಗ್ ವ್ಯವಸ್ಥೆಯ ನಂತರ ಮಧ್ಯಾಹ್ನ 4–25ಕ್ಕೆ ಸಿಎ 1807 ಚೀನಾದ ವಿಮಾನದ ಮುಖಾಂತರ ಬೀಜಿಂಗ್‌ನಿಂದ Fuzhou ಸಿಟಿಗೆ ನಮ್ಮನ್ನು ಕರೆದುಕೊಂಡು ಹೋದರು. 3 ಗಂಟೆಗಳ ಸತತ ಪ್ರಯಾಣದ ನಂತರ ರಾತ್ರಿ 7–15ಕ್ಕೆ Fuzhou ಸಿಟಿಗೆ ತಲುಪಿದೆವು. ಅಲ್ಲಿ ಮಿನಿ ಬಸ್ ಮುಖಾಂತರ ಹೊಟೇಲ್ ಶಾಂಘ್ರಿಲಾಗೆ ತಲಪಿದೆವು. ನಂತರದ ಎರಡು ದಿನಗಳ ರಾತ್ರಿಯನ್ನು ಈ ಹೊಟೇಲಿನಲ್ಲಿ ಕಳೆದೆವು. ಪ್ರತಿಯೊಬ್ಬ ಸಂಗಾತಿಗೂ ಪ್ರತ್ಯೇಕವಾದ ರೂಮು ವ್ಯವಸ್ಥೆಯನ್ನು ಮಾಡಲಾಗಿತ್ತು. 2017ರ ಮೇ 16, 17, 18, 19 ಮತ್ತು 20ರ ತನಕ ಪ್ಯೂಜಿಯನ್ ಪ್ರೊವಿನ್ಸಿಯಲ್ ಫಾರಿನ್ ಅಫೇರ್ಸ್ ವ್ಯಾಪ್ತಿಯಲ್ಲಿ ನಮಗೆ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಯೋಜನಾಬದ್ಧವಾಗಿ ಹಮ್ಮಿಕೊಳ್ಳಲಾಗಿತ್ತು. ಮೇ 16 ರಂದು ದಿನಪೂರ್ತಿ ಪ್ರಯಾಣದ ಆಯಾಸ ಇದ್ದುದರಿಂದ ಬೇರೆ ಯಾವುದೇ ಕಾರ್ಯಕ್ರಮ ನಿಗದಿತವಾಗಿರಲಿಲ್ಲ.

2017ರ ಮೇ 17 ರಂದು ಬೆಳಿಗ್ಗೆ ಪ್ಯೂಜಿಯನ್ ಪ್ರೊವಿನ್ಸಿಯಲ್ ಫಾರಿನ್ ಅಫೇರ್ಸ್‌ಗೆ ಕರೆದುಕೊಂಡು ಹೋಗಿ ಅಲ್ಲಿನ ಸಂಗಾತಿಗಳ ಪರಿಚಯವನ್ನು ಮಾಡಿಕೊಟ್ಟರು. ಅಲ್ಲಿ ನಮಗೆ ಬೆಳಿಗ್ಗೆ 9 ರಿಂದ 11.45ರ ತನಕ ಸೈದ್ಧಾಂತಿಕ ವಿಷಯದ ಮೇಲೆ



ಪಾಠದ ವ್ಯವಸ್ಥೆ ಮಾಡಲಾಗಿತ್ತು. ಪ್ರೊಫೇಸರ್ ಚೆಂಗ್ ಚಾಂಗ್‌ರವರು ಚೀನಾದಲ್ಲಿ ಪಾರ್ಟಿ ಶಿಸ್ತನ್ನು ಕಟ್ಟುನಿಟ್ಟಿನಲ್ಲಿ ಜ್ಯಾರಿ ಮಾಡುವ ಸಂಬಂಧಿಸಿ ಪಾಠವನ್ನು ನಡೆಸಿಕೊಟ್ಟರು. ಸಿಪಿಸಿಯ ಕೆಳಹಂತದ ಪಾರ್ಟಿ ಬ್ರಾಂಚಸ್‌ನಿಂದ ಹಿಡಿದು ಮೇಲು ಹಂತದ ನಾಯಕತ್ವದ ತನಕ ಪಾರ್ಟಿ ಸದಸ್ಯರಲ್ಲಿ ಇರಬೇಕಾದ ಶಿಸ್ತಿನ ಬಗ್ಗೆ, ಪಾರ್ಟಿ ಬ್ರಾಂಚಸ್‌ಗಳು, ಸ್ಥಳೀಯ ಸಂಸ್ಥೆಗಳಲ್ಲಿ ಪಾರ್ಟಿಯ ಸಂಗಾತಿಗಳು ನಿರ್ವಹಿಸುತ್ತಿರುವ ಪಾತ್ರಗಳ ಬಗ್ಗೆ, ಚೀನಾದ ಮಾನವ ಕಲ್ಯಾಣದ ಬಗ್ಗೆ ಕಮ್ಯೂನಿಸ್ಟ್ ಪಾರ್ಟಿ ಆದ್ಯತೆ ಶಿಕ್ಷಣ, ಆರೋಗ್ಯ, ಉದ್ಯೋಗ, ನೈರ್ಮಲ್ಯ, ವಸತಿ, ಕೃಷಿರಂಗ, ಕ್ರೀಡಾರಂಗ ಹಾಗೂ ಇನ್ನಿತರ ರಂಗಗಳಲ್ಲಿ ಪಕ್ಷದ ಸದಸ್ಯರು ನಿರ್ವಹಿಸುತ್ತಿರುವ ಮತ್ತು ನಿರ್ವಹಿಸಬೇಕಾದ ಪಾತ್ರಗಳ ಬಗ್ಗೆ ಅವರು ವಿವರಿಸಿದರು. ಗುರಿ ಮತ್ತು ಯಶಸ್ಸಿನ ಸಮೀಕ್ಷೆಗಳು, ಕ್ರಮಿಸಿದ ದಾರಿಯ ಬಗ್ಗೆ ಪಾರ್ಟಿಯ ಒಳಗಡೆ ನಡೆಸುವ ವಿಮರ್ಶಾ ಕ್ರಮ ನಿಯಮಗಳ ಬಗ್ಗೆ ಈ ಮಧ್ಯೆ ನಡೆದಿರುವ ನ್ಯೂನತೆಗಳು ಮತ್ತು ಮೇಲಿನಿಂದ ಕೆಳಗಿನ ತನಕ ನಾಯಕತ್ವದೊಳಗಡೆ ಇರುವ ಕೆಲವು ಭ್ರಷ್ಟಾಚಾರದ ಆರೋಪಗಳ ಸಂಬಂಧಿಸಿ ಹಾಗೂ ಭ್ರಷ್ಟಾಚಾರ ನಿರ್ಮೂಲನೆ ಮಾಡುವಲ್ಲಿ ಪಕ್ಷವು ತೆಗೆದುಕೊಂಡ ಕಠಿಣ ಕ್ರಮಗಳ ಬಗ್ಗೆ ಅಂಕಿಸಂಖ್ಯೆ ಸಮೇತ ನಮಗೆ ವಿವರಿಸಿದರು. ಚೀನಾದ ಮಹಾಜನತೆ ಅದಕ್ಕಾಗಿ ಪಕ್ಷಕ್ಕೆ ಸದಾ ಸ್ಫೂರ್ತಿಯನ್ನು ಕೊಡುತ್ತಿರುವ ಬಗ್ಗೆಯೂ ಶ್ಲಾಘನೆ ವ್ಯಕ್ತಪಡಿಸಿದರು. ನಾವುಗಳು ಪ್ರಾಧ್ಯಾಪಕರಲ್ಲಿ ಕೆಲವಾರು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದೆವು. ಈ ಪಾಠವನ್ನು ಕಂಡಾಗ ಚೀನಾದ ಕ್ರಾಂತಿ ಹಾಗೂ ನಂತರದ ಅವಧಿಯಲ್ಲಿ ಸಮಾಜವಾದದ ಯಶಸ್ಸಿಗಾಗಿ ಕ್ರಮಿಸಿದ ಬೆಳವಣಿಗೆಯ ಬಗ್ಗೆ ಪಾರ್ಟಿ ತೆಗೆದುಕೊಳ್ಳುತ್ತಿರುವ ಕ್ರಮಗಳ ಬಗ್ಗೆ ನಮಗೆ ಖುಷಿಯನ್ನು ಕೊಟ್ಟಿತು. ಅಮೇರಿಕನ್ ಸಾಮ್ರಾಜ್ಯಶಾಹಿ ಎಷ್ಟೇ ಪಿತೂರಿ ನಡೆಸಿದರೂ ಚೀನಾದ ಸಮಾಜವಾದ ಯಶಸ್ವಿಯಾಗುತ್ತದೆ ಎಂಬ ಭರವಸೆ ಮೂಡಿಸಿತು. ಊಟೋಪಚಾರದ ತರುವಾಯ ಸಂಜೆ 4–30ಕ್ಕೆ ಮಿನಿ ಬಸ್‌ನಲ್ಲಿ ಜುನ್‌ಮೆನ್ ಕಮ್ಯೂನಿಟಿಗೆ ವಿಸಿಟ್‌ಗಾಗಿ ನಮ್ಮನ್ನು ಕರೆದುಕೊಂಡು ಹೋದರು.



(ಮುಂದುವರಿಯುವುದು.)

ಕಡಿಮೆ ಪ್ರಯಾಣ ದರ ನಿಗದಿಪಡಿಸಿ ಸರಕಾರಿ ಬಸ್ ಸಂಚಾರಕ್ಕೆ ವ್ಯವಸ್ಥೆ ಮಾಡಲು ಸಿಐಟಿಯು ಆಗ್ರಹ


11–07–2017 ರಂದು ಉಡುಪಿಯಲ್ಲಿ ಸೇರಿದ ಸಿಐಟಿಯು ಉಡುಪಿ ಜಿಲ್ಲಾ ಸಮಿತಿ ಸಭೆಯು ಖಾಸಗಿ ಮತ್ತು ಸರಕಾರಿ ಬಸ್ಸುಗಳ ನಡುವಿನ ವಿವಾದಕ್ಕೆ ತೆರೆ ಎಳೆದು ಕಡಿಮೆ ದರದಲ್ಲಿ ಸರಕಾರಿ ಬಸ್ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಜಿಲ್ಲಾಡಳಿತವನ್ನು ಆಗ್ರಹಿಸಿದೆ. ಅದೇ ಸಂದರ್ಭದಲ್ಲಿ ಖಾಸಗಿ ಬಸ್ ನೌಕರರ ಉದ್ಯೋಗ ಭದ್ರತೆಯನ್ನೂ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಸಿಐಟಿಯು ಒತ್ತಾಯಿಸುತ್ತದೆ.

ಖಾಸಗಿ ಬಸ್ ಮಾಲಕರು ನರ್ಮ್ ಬಸ್‌ಗಳ ಚಾಲನೆ ವಿರುದ್ದ ತಡೆಯಾಜ್ಞೆ ತಂದಿರುತ್ತಾರೆ. ಆದಷ್ಟು ಬೇಗನೆ ಸೌಹಾರ್ದಯುತವಾಗಿ ಇದನ್ನು ಬಗೆಹರಿಸಬೇಕು ಎಂದು ಸಿಐಟಿಯು ಆಗ್ರಹಿಸುತ್ತದೆ. ಅಗತ್ಯ ಬಿದ್ದಲ್ಲಿ ಜಿಲ್ಲೆಯ ಎಲ್ಲಾ ರಸ್ತೆಗಳನ್ನು ರಾಷ್ಟ್ರೀಕರಣಗೊಳಿಸಿ ಸಾರ್ವಜನಿಕರ ಮತ್ತು ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಬೇಕೆಂದು ಸಿಐಟಿಯು ಒತ್ತಾಯಿಸುತ್ತದೆ. ಸಮಸ್ಯೆ ಬಗೆಹರಿಯದೆ ಹೋದಲ್ಲಿ ಜಿಲ್ಲಾದ್ಯಾಂತ ಕಾರ್ಮಿಕರ ಪ್ರತಿಭಟನೆ ನಡೆಸಲಾಗುವುದು.

ಕೆ. ಶಂಕರ್

ಮಾತೆಂದರೆ ಇದು

"ನಾನು ನನ್ನ ವಾದವನ್ನು ಕೊನೆಗೊಳಿಸುತ್ತೇನೆ. ಆದರೆ ಆರೋಪಿಯನ್ನು ಬಿಡುಗಡೆ ಮಾಡಿ ಎಂದು ವಕೀಲರು ಸಾಮಾನ್ಯವಾಗಿ ಕೇಳುವ ಹಾಗೆ ಕೊನೆಗೊಳಿಸುವುದಿಲ್ಲ. ಈಗಾಗಲೇ ಪೈನ್ಸ್ ದ್ವೀಪದ ಅವಮಾನಕರ ಜೈಲುಗಳಲ್ಲಿ ನನ್ನ ಸಂಗಾತಿಗಳು ನರಳುತ್ತಿರುವಾಗ ನಾನು ನನಗಾಗಿ ಸ್ವಾತಂತ್ರ್ಯವನ್ನು ಕೇಳುವುದಿಲ್ಲ. ಅವರ ಕಷ್ಟಗಳನ್ನು ಹಂಚಿಕೊಳ್ಳಲು ನನ್ನನ್ನೂ ಅಲ್ಲಿಗೆ ಕಳುಹಿಸಿ. ಅಧ್ಯಕ್ಷನೊಬ್ಬ ಕ್ರಿಮಿನಲ್ ಮತ್ತು ಕಳ್ಳನಾಗಿರುವ ಗಣರಾಜ್ಯದಲ್ಲಿ ಪ್ರಾಮಾಣಿಕ ಜನ ಸಾಯಬೇಕು ಅಥವಾ ಜೈಲಿನಲ್ಲಿರಬೇಕು ಎಂಬ ವಿಚಾರ ಅರ್ಥವಾಗುವಂತಹುದೇ."



– ಫಿಡೆಲ್ ಕ್ಯಾಸ್ಟ್ರೋ,

(ಅಕ್ಟೋಬರ್ 6, 1953ರಂದು ಕೋರ್ಟಿನಲ್ಲಿ ತಮ್ಮ ವಾದ ತಾವೇ ಮಂಡಿಸುತ್ತಾ ಮಾಡಿದ ಪ್ರಸಿದ್ಧ "ಇತಿಹಾಸ ನನ್ನನ್ನು ದೋಷಮುಕ್ತಗೊಳಿಸುತ್ತದೆ" ಎಂಬ ಭಾಷಣದಿಂದ)

ಕಾರ್ಪೊರೇಟ್ ಸುಸ್ತಿಸಾಲಗಳು: ರಾಷ್ಟ್ರೀಯ ಚರ್ಚೆಯಿಂದ ಹೊರಗಿಡುವ ಹುನ್ನಾರ

ಜೂನ್ 14 ರಂದು ಕೇಂದ್ರ ಸಂಪುಟ ಮತ್ತೊಂದು ಕರಾಳ ಮಸೂದೆಯನ್ನು ಸಂಸತ್ತಿನ ಮುಂದೆ ತರಲು ನಿರ್ಧರಿಸಿದೆ. **'ಹಣಕಾಸು ಇತ್ಯರ್ಥ ಮತ್ತು ಠೇವಣಿ ವಿಮಾ ಮಸೂದೆ 2016' ಅಥವ ಸಂಕ್ಷಿಪ್ತವಾಗಿ ಎಫ್‌ಆರ್‌ಡಿಐ ಮಸೂದೆ** ಎಂಬುದು ಇದರ ಹೆಸರು. ಇದು ರಾತ್ರಿ ಬೆಳಗಾಗುವಷ್ಟರಲ್ಲಿ ಒಂದು ಬ್ಯಾಂಕು ಅಥವ ವಿಮಾ ಕಂಪನಿಯನ್ನು ಮುಚ್ಚಿ ಬಿಡುವ ಕಾನೂನು ತರುವ ಉದ್ದೇಶದ ಮಸೂದೆ. ಇದು ಲಕ್ಷಾಂತರ ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳ ನೌಕರರನ್ನು ಬೀದಿಗೆಸೆಯಲು ಮಾತ್ರವಲ್ಲ, ಕೋಟ್ಯಂತರ ಠೇವಣಿದಾರರನ್ನೂ ಮುಳುಗಿಸಿ ಬಿಡಲು ಅವಕಾಶ ಕಲ್ಪಿಸುವ ಮಸೂದೆ ಎಂದು **ಬ್ಯಾಂಕ್ ನೌಕರರ ಒಕ್ಕೂಟ (ಬಿಇಎಫ್‌ಐ)** ಜೂನ್ 29ರಂದು ನೀಡಿರುವ ಹೇಳಿಕೆಯಲ್ಲಿ ಬಲವಾಗಿ ಖಂಡಿಸಿದೆ.

ಈ ಮಸೂದೆಯ ಪ್ರಕಾರ ಒಂದು 'ರೆಸೊಲ್ಯುಶನ್ ಕಾರ್ಪೊರೇಶನ್' ಅಂದರೆ ಇತ್ಯರ್ಥ ನಿಗಮವನ್ನು ರಚಿಸಲಾಗುವುದು. ಇದರ ಆಡಳಿತ ಮಂಡಳಿಯಲ್ಲಿ ಕೇವಲ ಸರಕಾರದ ಪ್ರತಿನಿಧಿಗಳು ಇರುತ್ತಾರೆ. ಈ ಮಂಡಳಿಗೆ ಅಪಾರ ಅಧಿಕಾರಗಳನ್ನು ಕೊಡಲಾಗಿದೆ. ಅದು ಸುಸ್ಥಿತಿಯಲ್ಲಿಲ್ಲ ಎಂದು ಭಾವಿಸುವ ಯಾವುದೇ ಬ್ಯಾಂಕ್ ಅಥವ ವಿಮಾಕಂಪನಿಯನ್ನು ಅಥವ ಇತರ ಹಣಕಾಸು ಸಂಸ್ಥೆಗಳನ್ನು ವಿಲೀನಗೊಳಿಸುವ, ಮುಚ್ಚುವ, ಸ್ವಾಧೀನ ಪಡಿಸಿಕೊಳ್ಳುವ ಅಥವ ಇತರ ಖಾಸಗಿ ಅಥವ ಸಾರ್ವಜನಿಕ ಕಂಪನಿ/ಸಂಸ್ಥೆಗಳಿಗೆ ವಹಿಸುವ ಅಧಿಕಾರವನ್ನು ಹೊಂದಿದೆ. ಹಣಕಾಸು ಸಂಸ್ಥೆ ಎಂದರೆ ಸ್ಟೇಟ್ ಬ್ಯಾಂಕ್ ಸೇರಿದಂತೆ ರಾಷ್ಟ್ರೀಕೃತ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಪೇಮೆಂಟ್ ಬ್ಯಾಂಕುಗಳು, ಎಲ್‌ಐಸಿ ಕೂಡ ಸೇರಿದಂತೆ ಸಾರ್ವಜನಿಕ ವಲಯದ ವಿಮಾಕಂಪನಿಗಳು ಕೂಡ ಸೇರಿರುತ್ತವೆ.

ಹೀಗೆ ಮಾಡಿದಾಗ ಸಂಬಂಧಪಟ್ಟ ಕಂಪನಿಗಳ ನೌಕರರ ಸೇವೆಯನ್ನು ನಿಲ್ಲಿಸುವ, ಅಂದರೆಅವರನ್ನು ಕೆಲಸದಿಂದ ತೆಗೆದು ಹಾಕುವ, ವರ್ಗಾಯಿಸುವ ಅಥವ ಅವರ ಸಂಬಳ–ಸಾರಿಗೆಯಲ್ಲಿ ಕಡಿತ ತರುವ ಅಧಿಕಾರವನ್ನೂ ಈ ನಿಗಮಕ್ಕೆ ಕೊಡಲಾಗುತ್ತದೆ.

1961ರಲ್ಲಿ ಬ್ಯಾಂಕುಗಳಲ್ಲಿ ಅಥವ ಇತರ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಉಳಿತಾಯಗಳಿಗೆ ವಿಮಾ ರಕ್ಷಣೆ ನೀಡಲು ಡಿಪಾಸಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ ಎಂಬ ಸಂಸ್ಥೆಯನ್ನು ರಚಿಸಲಾಗಿತ್ತು. ಮೋದಿ ಸಂಪುಟ ಮಂಜೂರು ಮಾಡಿರುವ ಈ ಹೊಸ ಮಸೂದೆ ಆ ಸಂಸ್ಥೆಯನ್ನು ಮುಚ್ಚುವ ನಿರ್ಧಾರ ಮಾಡಿದೆ ಮತ್ತು ಅದರ ಬದಲು ಹೊಸ 'ಇತ್ಯರ್ಥ ನಿಗಮ'ವೇ ಠೇಣಿಗಳಿಗೆ ವಿಮಾರಕ್ಷಣೆ ಕೊಡುತ್ತದೆ ಎಂದು ಹೇಳಲಾಗಿದೆ. ಆದರೆ ಇದು 1 ಲಕ್ಷ ರೂ.ಗಿಂತ ಹೆಚ್ಚಿನ ಮೊತ್ತದ ವಿಮೆಯನ್ನು ಕೊಡುವುದಿಲ್ಲ, ಅದನ್ನು ಕೂಡ ಕಂತುಗಳಲ್ಲಿ, ಯಾವುದೇ ಸಮಯ ಮಿತಿಯಿಲ್ಲದೆ ತನಗೆ ಅನುಕೂಲವಾದಾಗ ಕೊಡುವ ಅಧಿಕಾರವನ್ನು ಅದು ಹೊಂದಿರುತ್ತದೆ.

ಈಗ ಹೆಚ್ಚಿನ ರಾಷ್ಟ್ರೀಕೃತ ಬ್ಯಾಂಕುಗಳು 'ಎನ್‌ಪಿಎ' ಅಂದರೆ ಕಾರ್ಯನಿರ್ವಹಿಸದ ಆಸ್ತಿಗಳು ಎಂದು ಹೆಸರಿಸಿರುವ ವಾಪಾಸು ಬಾರದ ಕೆಟ್ಟ ಸಾಲಗಳ ಹೊರೆಯಿಂದ ನರಳುತ್ತಿದ್ದು, ಈ ಮಸೂದೆ ಹೇಳುವ ಅಪಾಯದ ಸ್ಥಿತಿಯಲ್ಲಿವೆ ಎಂಬದು ಈಗ ಸರ್ವ ವಿದಿತ. ಯಾವುದೇ ಉತ್ಪಾದಕ ಕಂಪನಿಯಲ್ಲಿ 'ಕಸರು', ಅಥವ ಹಾಳಾದ ಅಂಶಗಳು ಸ್ವಲ್ಪಮಟ್ಟಿಗೆ ಇರುತ್ತವೆ. ಅದೇ ರೀತಿಯಲ್ಲಿ ಬ್ಯಾಂಕುಗಳಲ್ಲಿಯೂ ನೀಡಿದ ಸಾಲಗಳು ಹಿಂದಕ್ಕೆ ಬರದ್ದು ಸ್ವಲ್ಪ ಮಟ್ಟಿಗೆ ಇದ್ದೇ ಇರುತ್ತದೆ.

ನಿಜ, ಈಗ ರಾಷ್ಟ್ರೀಕೃತ ಬ್ಯಾಂಕುಗಳ ಕೆಟ್ಟ ಸಾಲಗಳ ಹೊರೆ ಅಪಾಯಕಾರಿ ಮಟ್ಟಕ್ಕೆ ಏರಿದೆ. ಆದರೆ ಇದಕ್ಕೆ ಆ ಬ್ಯಾಂಕುಗಳ ನೌಕರರ ಕಾರ್ಯದಕ್ಷತೆ ಕಾರಣವಾಗಿಲ್ಲ, ಬದಲಿಗೆ ಕೆಲವು ದೊಡ್ಡ ಕಾರ್ಪೊರೇಟ್‌ಗಳು, ಕೆಲವು ರಾಜಕಾರಣಿಗಳು ಮತ್ತು ಬ್ಯಾಂಕಿನ ಉನ್ನತ ಅಧಿಕಾರಿಗಳ ಶಾಮೀಲು ಕಾರಣವಾಗಿದೆ ಎಂಬುದು ಕೂಡ ಈಗ ಎಲ್ಲರಿಗೂ ತಿಳಿದಿರುವ ಸಂಗತಿ. ಸಾರ್ವಜನಿಕ ವಲಯದ ಬ್ಯಾಂಕುಗಳ ಒಟ್ಟು ಎನ್‌ಪಿಎಗಳಲ್ಲಿ 5 ಕೋಟಿ ರೂ.ಗಳಿಗಿಂತ ಹೆಚ್ಚಿನ ಸಾಲ ಪಡೆದ ಕಾರ್ಪೊರೇಟ್‌ಗಳ ಪಾಲು 88.4% ಎಂಬ ಸಂಗತಿಯತ್ತ ಬಿಇಎಫ್‌ಐ ಗಮನ ಸೆಳೆದಿದೆ. ಇದರಲ್ಲಿ 25%ದಷ್ಟು ಕೇವಲ 12 ಅತಿ ದೊಡ್ಡ ಕಾಪೊರೇಟ್ ಗುಂಪುಗಳದ್ದು ಎಂಬುದೂ ಗಮನಾರ್ಹ.

ಈ ಎನ್‌ಪಿಎ ಹೊರೆ ಪ್ರಸಕ್ತ ಸರಕಾರದ ಅಡಿಯಲ್ಲಿ ಭಾರೀ ವೇಗದಿಂದ ಹೆಚ್ಚಿದೆ ಎಂಬುದೂ ಎಲ್ಲರೂ ಕಾಣುತ್ತಿರುವ ಸಂಗತಿ. ಆದರೆ, ಬಿಇಎಫ್‌ಐ ಟೀಕಿಸಿರುವಂತೆ, ಈ ಸರಕಾರಕ್ಕೆ ಸುಸ್ತಿದಾರ ಕಾರ್ಪೊರೇಟ್‌ಗಳಿಂದ ವಸೂಲಿ ಮಾಡುವ ರಾಜಕೀಯ ಇಚ್ಛಾಶಕ್ತಿ ಇಲ್ಲ. ಬದಲಿಗೆ ಸಾಲ ಪುನರ್ರಚನೆ, ಆಸ್ತಿ ಪುನರ್ರಚನೆ ಇತ್ಯಾದಿಯಿಂದ ಸಾಲಮನ್ನಾದ ವರೆಗೂ ವಿವಿಧ ರೀತಿಗಳಲ್ಲಿ ಅವಕ್ಕೆ ಪೋಷಣೆ ನೀಡುವುದರಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಿದೆ, ಈ ಮೂಲಕ ಸಾರ್ವಜನಿಕ ವಲಯದ ಬ್ಯಾಂಕುಗಳ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡಿಸಿ ಕೊನೆಗೆ ಅವನ್ನು ಈ ಹೊಸ ಮಸೂದೆಯ ಮೂಲಕ ಮುಚ್ಚಿ ಬಿಡುವುದು ಅಥವ ಖಾಸಗಿ ಕುಳಗಳಿಗೆ ಕೊಡ ಬಯಸುತ್ತದೆ.

ಈ ಮಸೂದೆಯ ಕರಾಳ ಸ್ವರೂಪ ಜನರ ಠೇವಣಿಗಳ ಭದ್ರತೆ ಮತ್ತು ನೌಕರರ ಸೇವಾಭದ್ರತೆಗೆ ಧಕ್ಕೆ ತರುವುದಂತೂ ಖಂಡಿತಾ ಇದೆ. ಇದು ಮೇಲ್ನೋಟಕ್ಕೇ ಸ್ಪಷ್ಟ. ಆದರೆ ಇನ್ನೂ ಹೆಚ್ಚು ಅಪಾಯಕಾರಿ ಸಂಗತಿಯೆಂದರೆ ಈ ಮೂಲಕ ಸಾರ್ವಜನಿಕ ವಲಯದ ಬ್ಯಾಂಕುಗಳ ಅಸ್ತಿತ್ವದ ಪ್ರಶ್ನೆಯನ್ನು ಸಾರ್ವಜನಿಕ ಚರ್ಚೆಯ ವ್ಯಾಪ್ತಿಯಿಂದ ಹೊರತೆಗೆದು ಅಧಿಕಾರಶಾಹಿ ನಿರ್ದೇಶನಗಳಿಗೆ ಒಳಪಡಿಸಲಾಗುತ್ತದೆ. ಇದನ್ನು ಶಾಸನವಾಗಿಸುವ ಪ್ರಕ್ರಿಯೆಯನ್ನು ರಾಷ್ಟ್ರಪತಿ ಚುನಾವಣೆಗಳ ನಂತರ ತ್ವರಿತಗೊಳಿಸಬಹುದು ಎಂಬ ಸಂದೇಹವನ್ನು ಬಿಇಎಫ್‌ಐ ವ್ಯಕ್ತಪಡಿಸಿದೆ.

ಇದು ರಾಷ್ಟ್ರ–ವಿರೋಧಿ ಮಸೂದೆ ಎಂಬ ಬಗ್ಗೆಯಾವುದೇ ಸಂದೇಹವಿಲ್ಲ ಎಂದಿರುವ ಬಿಇಎಫ್‌ಐ ಇದರ ವಿರುದ್ಧ ಬ್ಯಾಂಕ್ ನೌಕರರೆಲ್ಲ ಬಲವಾದ ಐಕ್ಯತೆಯೊಂದಿಗೆ ಬಂಡೆಗಲ್ಲಿನಂತೆ ಒಂದಾಗಿ ದೃಢತೆಯಿಂದ, ಧೈರ್ಯವಾಗಿ ಎದ್ದು ನಿಲ್ಲಬೇಕು ಎಂದು ಕರೆ ನೀಡಿದೆ.

ಜೂನ್ 28ರಂದು ಮುಂಬೈಯಲ್ಲಿ ನಡೆದ ಯುಎಫ್‌ಬಿಯು(ಬ್ಯಾಂಕ್ ನೌಕರರ ಐಕ್ಯ ವೇದಿಕೆ) ಕೂಡ ಇದನ್ನು ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳ ವಿಲೀನ ಮತ್ತು ಖಾಸಗೀಕರಣದ ಇತರ ಪ್ರಯತ್ನಗಳನ್ನು ಗಂಭೀರವಾಗಿ ಪರಿಗಣಿಸಿ ಆಗಸ್ಟ್ 22ರಂದು ಅಖಿಲ ಭಾರತ ಮುಷ್ಕರ ನಡೆಸಲು ನಿರ್ಧರಿಸಿದೆ. ಇದರ ನಂತರ ಸಪ್ಟಂಬರ್ 15ರಂದು ದಿಲ್ಲಿಯಲ್ಲಿ ಒಂದು ಬೃಹತ್ ಧರಣಿ ನಡೆಸಲು ಮತ್ತು ಅಕ್ಟೋಬರ್/ನವಂಬರ್‌ನಲ್ಲಿ ಎರಡು ದಿನಗಳ ಮುಷ್ಕರ ನಡೆಸಲು ನಿರ್ಧರಿಸಿದೆ.

ಇಂತಹ ಒಂದು ಕರಾಳ ಕಾನೂನು ತರುವ ಪ್ರಯತ್ನವನ್ನು ಪ್ರತಿರೋಧಿಸಲು ತಮ್ಮ ದನಿಯನ್ನು ಎತ್ತಬೇಕು ಎಂದು ದೇಶದ ಎಲ್ಲ ಪ್ರಜಾಪ್ರಭುತ್ವವಾದಿಗಳಿಗೆ ಮತ್ತು ಜನತೆಗೆ ಬಿಇಎಫ್‌ಐ ಮನವಿ ಮಾಡಿದೆ.



[redacted]

ಅಚ್ಛೇ ದಿನ್ ಅಂದರೆ 'ಫೇಕ್'ನ ದಿನಗಳು!

ಪಶ್ಚಿಮ ಬಂಗಾಲದ ಬದುರಿಯ/ಬಸಿರ್ಹಾಟ್ ಮೂರು ದಿನಗಳು ಹೊತ್ತಿ ಉರಿಯುವಂತೆ ಮಾಡಿದ ಫೇಸ್‌ಬುಕ್‌ನ ಒಂದು ಅಪಮಾನಕರ ಕಾರ್ಟೂನ್ ದೇಶದ ಒಳಿತಿನ ಬಗ್ಗೆ ಪ್ರಾಮಾಣಿಕ ಕಾಳಜಿಯಿರುವವರು ಸಾಮಾಜಿಕ ಮಾಧ್ಯಮವನ್ನು ಹೆಚ್ಚು ಎಚ್ಚರಿಕೆಯಿಂದ ಬಳಸುವಂತೆ ಮಾಡಬೇಕಿತ್ತು. ಆದರೆ, ತದ್ವಿರುದ್ಧವಾಗಿ, ಅದರಿಂದ ಹುಸಿ(ಫೇಕ್) ಫೋಟೋಗಳ ಸರಣಿಯೇ ಆರಂಭವಾಗಿರುವುದು ಬಹುಶಃ ಅಚ್ಛೇದಿನ್‌ಗಳು ನಿರ್ಮಿಸುತ್ತಿರುವ 'ನವಭಾರತ'ಕ್ಕೆ ಅನುಗುಣವಾಗಿಯೇ ಇದೆ. ಏಕೆಂದರೆ ಈ ಎಲ್ಲ ಫೇಕ್‌ಗಳನ್ನು ಹಾಕಿರುವುದು ಕೇಂದ್ರದಲ್ಲಿ ಆಳುತ್ತಿರುವ ಪಕ್ಷದ ಮುಖಂಡರೇ. ಇವರು ಯಾರೂ 17 ವರ್ಷದ ಬಾಲಕ ಶೌಬಿಕ್‌ನ ಫೇಸ್‌ಬುಕ್ ಕಾರ್ಟೂನನ್ನು (ಇದು ತಾನು ಹಾಕಿದ್ದಲ್ಲ ಎಂದು ಆತ ಪೋಲೀಸರಿಗೆ ಹೇಳಿರುವುದಾಗಿ ವರದಿಯಾಗಿದೆ) ಚಕಾರವೆತ್ತದಿರುವುದೂ ಆಶ್ಚರ್ಯದ ಸಂಗತಿಯೇನಲ್ಲ.

ಬದಲಿಗೆ, ಹಲ್ಲೆಗೊಳಗಾದ ಒಬ್ಬ ಹೆಂಗಸು ಮತ್ತು ಗಂಡಸಿನ ಫೊ–ಟೋ ಹಾಕಿ ಇದು ಶೌಬಿಕ್‌ನ ತಂದೆ–ತಾಯಿಗಾದ ಪರಿಸ್ಥಿತಿ ಎಂದು ಗೀತಾಎಸ್‌ಕಪೂರ್ ಹೆಸರಿನ ಟ್ವೀಟ್ ಸಾರಿತು. ಅದನ್ನು ಬಹಳ ಮಂದಿ ರಿಟ್ವೀಟ್ ಮಾಡಿದರು. ಶೌಬಿಕ್‌ನ ತಾಯಿ ಆತ ಮಗುವಾಗಿದ್ದಾಗಲೇ ತೀರಿಕೊಂಡಿದ್ದಳಂತೆ. ವಾಸ್ತವವಾಗಿ ಆಕೆ(?) ಹಾಕಿದ್ದ ಫೋಟೋ ಬಾಂಗ್ಲಾದೇಶದ್ದು ಎಂದು ಕಂಡು ಬಂದಿದೆ.


ಶೌಬಿಕ್‌ನ ಫೇಸ್‌ಬುಕ್ ಚಿತ್ರದಿಂದ **'ಉದ್ರೇಕಗೊಂಡ ಮುಸ್ಲಿಂ ಜನಜಂಗುಳಿಯಿಂದ ಶೌಬಿಕ್‌ನ ಕುಟುಂಬವನ್ನು ಕಾಪಾಡಿದ್ದು ಅಮಿರುಲ್ ಎಂಬ ಸ್ಥಳೀಯ ಮುದುಕ, ಫೈರ್‌ಬ್ರಿಗೇಡಿಗೆ ಫೋನ್ ಮಾಡಿದ್ದು ಮಕ್ಸೂದ್ ಎಂಬ ಹುಡುಗ, ಅವರನ್ನು ಸುರಕ್ಷಿತ ಆಶ್ರಯತಾಣಕ್ಕೆ ಒಯ್ದದ್ದು ರಫಿಕುಲ್, ದ್ವೇಷ ಹರಡುವವರೇ ಇದನ್ನು ಗಮನಿಸಿ'** ಎಂಬ ಎಂಬ ದೀಪಾ ಖದರ್ ಎಂಬವರ ಟ್ವೀಟ್‌ನ್ನು ಇವರೆಲ್ಲ ಗಮನಿಸಲೇ ಇಲ್ಲ, ಸಹಜ ತಾನೇ?

ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ ಇನ್ನೊಂದು ಹುಸಿ ಫೋಟೋವನ್ನು ಹಾಕಿದ್ದು ಹಿರಿಯ ಬಿಜೆಪಿ ನಾಯಕರಾದ ವಿಜೇತಾ ಮಲಿಕ್. ಅವರು 'ಬದುರಿಯಾದಲ್ಲಿ ಹಿಂದು ಮಹಿಳೆಯರ ಮೇಲೆ ಹಲ್ಲೆ ನಡೆಯುತ್ತಿದೆ' ಎಂದು ಹಾಕಿದ ಫೋಟೋ ನಿಜವಾಗಿ ಭೋಜ್ಪುರಿ ಸಿನೆಮಾವೊಂದರ ದೃಶ್ಯ! ಈ ಫೇಕ್ ಚಿತ್ರದ ಆಧಾರದಲ್ಲೇ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗೀಯ ಕೂಡ 'ಹಿಂದೂ ಸೋದರಿಯರು, ಪುತ್ರಿಯರು ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ' ಎಂದು ಟ್ವಿಟ್ ಮಾಡಿದ್ದಾರಂತೆ!

ಅಚ್ಛೇ ದಿನ್ ಮಂದಿಯ ಈ ಫೇಕ್ ಚಳುವಳಿಯನ್ನು ಒಂದು ತಮಾಷೆಯ ಮಟ್ಟಕ್ಕೇರಿಸಿದ್ದು ರಾಷ್ಟ್ರದ ರಾಜಧಾನಿಯಲ್ಲಿ ಜಂತರ್ ಮಂತರ್‌ನಲ್ಲಿ 'ಬಂಗಾಲ ಉಳಿಸಿ' ಪ್ರತಿಭಟನೆಗೆ ಫೇಸ್‌ಬುಕ್ ಕರೆ ನೀಡಿದ ಬಿಜೆಪಿಯ ಒಬ್ಬ ರಾಷ್ಟ್ರೀಯ ವಕ್ತಾರೆ ನೂಪುರ್ ಶರ್ಮ. ಇದರಲ್ಲಿ ಆಕೆ ಬದುರಿಯಾದ ಹಿಂಸಾಚಾರವನ್ನು ತೋರಿಸಲು ಹಾಕಿದ ಚಿತ್ರ 15 ವರ್ಷಗಳ ಹಿಂದಿನದ್ದು, ಅಷ್ಟೇ ಅಲ್ಲ, ಅವರ ಮಾದರಿ ರಾಜ್ಯ ಗುಜರಾತಿನದ್ದು. ಹೌದು, ಈಗಿನ ಪ್ರಧಾನಿ ಅಲ್ಲಿನ ಮುಖ್ಯಮಂತ್ರಿಗಳಾಗಿದ್ದಾಗ ನಡೆದ 2002ರ ಭೀಕರ ಹತ್ಯಾಕಾಂಡದ್ದು! **'ಮೋದಿಯವರ ಸಾಧನೆಗಳ ಕೀರ್ತಿಯನ್ನು ಮಮತಾರವರಿಗೆ ಕೊಟ್ಟಿದ್ದಾರೆ'** ಎಂದೊಬ್ಬರು ಇದಕ್ಕೆ ಟಿಪ್ಪಣಿ ಮಾಡಿದ್ದಾರೆ.


ಬದುರಿಯ ಹಿಂಸಾಚಾರದ ಕುರಿತ ಒಂದು ಗಂಭೀರ ವ್ಯಂಗ್ಯಚಿತ್ರವನ್ನೇ ಶುದ್ಧ ಕೋಮುವಾದಿ ವ್ಯಂಗ್ಯಚಿತ್ರವಾಗಿ ಫೇಕ್ ಮಾಡಿದ್ದನ್ನು ಪ್ರತೀಕ್ ಸಿನ್ಹ ಬಯಲಿಗೆಳೆದಿದ್ದಾರೆ. (ಈ ಕೆಳಗಿನ ಚಿತ್ರ ನೋಡಿ)





ಹಗರಣಗಳ ಬೆನ್ನಟ್ಟಿರುವ ಸಿಬಿಐ: ನಿಜವಾಗಿಯೂ ಭ್ರಷ್ಟಾಚಾರದ ವಿರುದ್ಧ ಹೋರಾಟವೇ?

ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್ ಮತ್ತು ಅವರ ಕುಟುಂಬದವರ ಹಗರಣಗಳ ಸಾಲು–ಸಾಲು, ಅದನ್ನು ಹೊರಗೆಳೆಯಲೆಂದು ಸಿಬಿಐ ಸರಣಿ ದಾಳಿಗಳು ದೇಶದ ಗಮನ ಸೆಳೆದಿದೆ. ಅವರ ಕಾಮಿಡಿಯನ್ ಇಮೇಜಿನಿಂದಾಗಿ ಹಲವರಿಗೆ ಮನರಂಜನೆಯ ಸುದ್ದಿಗಳೂ ಆಗಿವೆ. ಆದರೆ ನಿಜವಾಗಿಯೂ ಇದು ಮೋದಿ ಸರಕಾರದ ಭ್ರಷ್ಟಾಚಾರ–ವಿರೋಧಿ ಸಮರದ ಭಾಗವೇ ಎಂಬ ಬಗ್ಗೆ ಹಲವರಿಗೆ ಸಂದೇಹಗಳಿವೆ.



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಈ ಸಂದೇಹ ಬಂದಿರುವುದು ಬಿಹಾರದ ಬಿಜೆಪಿ ಘಟಕ ಅಲ್ಲಿಯ ಜೆಡಿ(ಯು) ನೇತೃತ್ವದ ಸಮ್ಮಿಶ್ರ ಸರಕಾರಕ್ಕೆ ಹೊರಗಿನಿಂದ ಬೆಂಬಲ ನೀಡುವುದಾಗಿ ಹೇಳಿರುವ ಸುದ್ದಿಯಿಂದ ಮಾತ್ರವೇ ಅಲ್ಲ. ಸಿಬಿಐ ಕೇವಲ ಬಿಜೆಪಿಯೇತರ ರಾಜ್ಯಗಳಲ್ಲಿ ಮಾತ್ರ ಸಕ್ರಿಯವಾಗಿರುವುದೇಕೆ ಎಂಬ ಪ್ರಶ್ನೆಯಿಂದಾಗಿ ಕೂಡ.

ಉದಾಹರಣೆಗೆ, ಕಳೆದ ವರ್ಷ ಭಾರೀ ಸುದ್ದಿ ಮಾಡಿದ್ದ ಮಧ್ಯಪ್ರದೇಶದ ಮುಖ್ಯಮಂತ್ರಿಗಳನ್ನು ಸುತ್ತಿಕೊಂಡ 'ವ್ಯಾಪಂ' ಹಗರಣದ ಸದ್ಯದ ಕತೆ ಏನು? ಬಾಬಾ ರಾಂದೇವ್ ಕಂಪನಿಗೆ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಭಾರೀ ಡಿಸ್ಕೌಂಟಿನಲ್ಲಿ ಭೂಸ್ವಾಧೀನ ಮಾಡಿಕೊಟ್ಟ ಆಪಾದನೆ ಇತ್ತೀಚೆಗೆ ಬಂದಿದೆ. ಅದರ ತನಿಖೆ ನಡೆಯುತ್ತದೆಯೇ? ಅಷ್ಟೇ ಏಕೆ, ಇತ್ತೀಚೆಗೆ ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್‌ಗಳ ಅಸೀಮಿತ ಅನಾಮಧೇಯ ವಂತಿಗೆಗೆ ಅವಕಾಶ ಕಲ್ಪಿಸುವ ಚುನಾವಣಾ ಬಾಂಡ್ ಚುನಾವಣಾ ಆಯೋಗವೇ ಒಂದು ಪ್ರತಿಗಾಮಿ ಹೆಜ್ಜೆಯೆಂದಿರುವಾಗ ಸಿಬಿಐ ದಾಳಿಗಳು ಭ್ರಷ್ಟಾಚಾರ–ವಿರೋಧಿ ಸಮರದ ಭಾಗ ಎಂದು ನಂಬಲು ಸಾಧ್ಯವೇ?

ವಾಸ್ತವವಾಗಿ ಇದು ಅಧಿಕಾರ ಕಸಿದುಕೊಳ್ಳುವ ಹೊಸದೊಂದು 'ಮೋದಿ ಅಧಿಕಾರ ಮಾದರಿ' ಎಂದೊಬ್ಬ ವಿಶ್ಲೇಷಕರು ಹೇಳಿದ್ದಾರೆ. ಇದು ಯೋಚಿಸಬೇಕಾದ ಸಂಗತಿ.

ಜಿಎಸ್‌ಟಿ: ಮೋದಿಯವರ ಒಂದು ಅಪಾಯಕಾರಿ ಹೋಲಿಕೆ



ಜುಲೈ 1 ರಂದು ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಸರಕು ಮತ್ತು ಸೇವೆಗಳ ತೆರಿಗೆಯನ್ನು ಉದ್ಘಾಟಿಸುತ್ತ ನರೇಂದ್ರ ಮೋದಿಯವರು ಮಧ್ಯರಾತ್ರಿ ಭಾಷಣ ಕೊಡುತ್ತ ಜವಹರಲಾಲ್ ನೆಹರೂರವರ ಅನುಕರಣೆ ಮಾಡಲು ಪಟ್ಟ ಪ್ರಯತ್ನವನ್ನು ಬಹುಶಃ ಒಂದು ವಿಲಕ್ಷಣ ತಮಾಷೆ ಎಂದು ತಳ್ಳಿ ಬಿಡಬಹುದಾಗಿತ್ತು. ಅವರು ಒಂದು ಯಃಕಶ್ಚಿತ್ ತೆರಿಗೆ ಸುಧಾರಣೆಯನ್ನು ಭಾರತದ ಸ್ವಾತಂತ್ರ್ಯ ಗಳಿಕೆಯಂತಹ ಮಹಾನ್ ಘಟನೆಯೊಂದಿಗೆ ಹೋಲಿಸಿದ್ದು ಅಥವ ಅದೇ ಮಟ್ಟದಲ್ಲಿಟ್ಟು ಮಾತನಾಡಿದ್ದು ತಾನೇ ತೆರಿಗೆ ಸುಧಾರಣೆಯ ಕರ್ತೃ ಎಂದು ಹೆಮ್ಮೆ ಪಡುವ ಒಬ್ಬ ವ್ಯಕ್ತಿಯ ಸ್ವಪ್ರತಿಷ್ಠೆಯ ನಿರುಪದ್ರವಿ ಪ್ರದರ್ಶನವಷ್ಟೇ ಎಂದೂ ಬದಿಗೆ ತಳ್ಳಬಹುದಾಗಿತ್ತು. ಆದರೆ ಅವರು ಈ ಸಂದರ್ಭದಲ್ಲಿ ಮಾಡಿದ ಭಾಷಣದಲ್ಲಿ ಕೊಟ್ಟಿರುವ ಹೋಲಿಕೆ ಅತ್ಯಂತ ಅಪಾಯಕಾರಿ, ಅದಕ್ಕೆ ಸವಾಲು ಹಾಕದಿರಲು ಸಾಧ್ಯವಿಲ್ಲ, ಏಕೆಂದರೆ ಅದು ನಮ್ಮ ಭವಿಷ್ಯವನ್ನು ಬಾಧಿಸುವ ಒಂದು ಮಾನಸಿಕ ನಿಲುವನ್ನು ಪ್ರತಿನಿಧಿಸುತ್ತದೆ.

ಮೋದಿಯವರು ಜವಹರಲಾಲ್ ನೆಹರೂರವರ ಹೆಸರನ್ನು ಪ್ರಸ್ತಾಪಿಸಿದ್ದು ಒಂದು ಸಲ ಮಾತ್ರ. ಮತ್ತೆ-ಮತ್ತೆ ಅವರು ನೆನಪಿಸಿಕೊಂಡ ವ್ಯಕ್ತಿಯೆಂದರೆ ವಲ್ಲಭಭಾಯಿ ಪಟೇಲ್. ಈ ಹಿಂದೆ ಪಟೇಲರು ಮಾಡಿದ ಭಾರತೀಯ ಸಂಘದೊಡನೆ ದೇಶೀ ರಾಜರುಗಳ ಸಂಸ್ಥಾನಗಳ ಸಮಗ್ರೀಕರಣ ಭಾರತವನ್ನು ಒಂದುಗೂಡಿಸುವಲ್ಲಿ ಯಾವ ಪಾತ್ರವನ್ನು ವಹಿಸಿತೋ ಅದೇ ಪಾತ್ರವನ್ನು ಜಿಎಸ್‌ಟಿ ವಹಿಸುತ್ತಿದೆ ಎಂಬುದೇ ಅವರು ತಮ್ಮ ಭಾಷಣದಲ್ಲಿ ಹೇಳಲು ಶ್ರಮಪಟ್ಟಿರುವ ಅಂಶ.

ಭಾರತೀಯ ಸಂಘ ದೊಡನೆ ದೇಶೀ ರಾಜರುಗಳ ಸಂಸ್ಥಾನಗಳ ಸಮಗ್ರೀಕರಣ ಭಾರತದ ಪ್ರಜಾಪ್ರಭುತ್ವ ಕ್ರಾಂತಿಯ ಭಾಗವಾಗಿತ್ತು. ದೇಶದ ಜನತೆ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದತ್ತ ಜಾಗೃತ ರಾಗಬೇಕಾದರೆ ಅವರು ದೇಶೀ ರಾಜರುಗಳ ಪಾಳೆಯಗಾರೀ ಶೋಷಣೆಯನ್ನು ಕಿತ್ತೆಸೆಯ ಬೇಕಾಗಿತ್ತು. 'ಬ್ರಿಟಿಶ್ ಭಾರತ'ದಲ್ಲಿ ವಸಾಹತುಶಾಹಿ-ವಿರೋಧಿ ಹೋರಾಟ ನಡೆಯುತ್ತಿರುವಾಗಲೇ, ಸಂಸ್ಥಾನಗಳಲ್ಲಿ ದೇಶೀ ಆಳರಸರ ಆ ಶೋಷಣೆಯ ವಿರುದ್ಧ ಜನ ಮಹಾನ್ ಬಂಡಾಯ ನಡೆಸಿದ್ದರು. ಆದ್ದರಿಂದ ಸಮಗ್ರೀಕರಣ ಎಂಬುದನ್ನು ನಡೆಸದಿದ್ದರೆ ಕೆಲವು ಭಾರತೀಯರು ಮೂಲಭೂತ ಹಕ್ಕುಗಳನ್ನು ಅನುಭವಿಸುತ್ತ, ಸಾರ್ವತ್ರಿಕ ವಯಸ್ಕ ಮತದಾನದ ಮೂಲಕ ತಮ್ಮ ಪ್ರತಿನಿಧಿಗಳನ್ನು ಆರಿಸುತ್ತಿರುವಾಗ, ಪಕ್ಕದಲ್ಲೇ ಇನ್ನು ಕೆಲವು ಭಾರತೀಯರು ಹೆಚ್ಚಿನ ದೇಶೀ ಸಂಸ್ಥಾನಗಳಲ್ಲಿದ್ದ ಮಧ್ಯಯುಗೀನ ಬರ್ಬರತೆಯ ಅಡಿಯಲ್ಲಿ ನರಳುತ್ತಲೇ ಇರುವಂತಹ ಒಂದು ಅಸಂಬದ್ಧ ಪರಿಸ್ಥಿತಿ ಇರುತ್ತಿತ್ತು.

ಆಗ, ಎಲ್ಲ ಭಾರತೀಯರು ಸಮಾನರು ಎಂದು ಸಂವಿಧಾನದ ಘೋಷಣೆಗೆ ಒಂದು ನಿರ್ಬಂಧ ಉಂಟಾಗುತ್ತಿತ್ತು. ಅದೆಂದರೆ ಬ್ರಿಟಿಶರು ಕಿತ್ತುಕೊಳ್ಳಬಯಸದ ಕೆಲವು ಪ್ರದೇಶಗಳಲ್ಲಿ ಹುಟ್ಟಿದ, ಮತ್ತು ಒಂದು ಪಾಳೆಯಗಾರಿ ವ್ಯವಸ್ಥೆಯ ಭೀಕರ ಅಸಮಾನತೆಯ ಅಡಿಯಲ್ಲಿ ನರಳುತ್ತಲೇ ಇರಬೇಕಾದ ನಿರ್ಬಂಧ.


ನಿಜ, ಅದೊಂದು ವಿಡಂಬನೆಯಾಗುತ್ತಿತ್ತು. ಅದಕ್ಕಿಂತ ಮಹತ್ವದ್ದೆಂದರೆ, ದೇಶೀ ಸಂಸ್ಥಾನಗಳನ್ನು ಭಾರತೀಯ ಸಂಘದೊಡನೆ ಸಮಗ್ರೀಕರಿಸದಿದ್ದಿದ್ದರೆ ಆ ಸಂಸ್ಥಾನಗಳು ಮೂಲಭೂತವಾಗಿ ಯಾವ ಅಸಮಾನತೆಯ ಮೇಲೆ ನಿಂತಿದ್ದವೋ, ಅದು ಭಾರತೀಯ ಸಂವಿಧಾನದ ಅಡಿಯಲ್ಲಿ ಕೊಡಮಾಡಿದ ಸಮಾನತೆಯನ್ನೂ ಕೊರೆದು ಹಾಕುತ್ತಿತ್ತು. ಅಂದರೆ ಪ್ರಜಾಪ್ರಭುತ್ವ ಕ್ರಾಂತಿ ದೇಶೀ ಸಂಸ್ಥಾನಗಳಲ್ಲಿ ಇರುತ್ತಿರಲಿಲ್ಲ ಮಾತ್ರವಲ್ಲ, ಇಡೀ ದೇಶದಲ್ಲಿ ಎಲ್ಲ ಭಾರತೀಯರಿಗೂ ಪ್ರಜಾಪ್ರಭುತ್ವ ಬುಡಮೇಲಾಗುತ್ತಿತ್ತು. ಆದ್ದರಿಂದ ಸ್ವತಂತ್ರ ಭಾರತದ ಗೃಹಮಂತ್ರಿಯಾಗಿ ಪಟೇಲರ ಕಾರ್ಯಾಚರಣೆಗಳು ಪ್ರಜಾಪ್ರಭುತ್ವ ಕ್ರಾಂತಿಯ ಅಜೆಂಡಾಕ್ಕೆ ಅನುಗುಣವಾಗಿಯೇ ಇದ್ದವು.

ಈಗ, ಸರಕು ಮತ್ತು ಸೇವೆಗಳ ತೆರಿಗೆ ಎಂಬುದು ಒಂದು ತೆರಿಗೆ ವ್ಯವಸ್ಥೆಯ ಬದಲು ಇನ್ನೊಂದು ತೆರಿಗೆ ವ್ಯವಸ್ಥೆಯನ್ನು ತರುವುದಷ್ಟೇ. ಅದು ಒಂದು ಪ್ರಜಾಪ್ರಭುತ್ವ ಸಂವಿಧಾನವನ್ನು ಆಧರಿಸಿದ ಭಾರತದೊಳಗೆ ಈ ಹಿಂದೆ ಇದ್ದ ಇತರ ತೆರಿಗೆಗಳ ಬದಲು ಒಂದು ತೆರಿಗೆಯನ್ನು ಆರಂಭಿಸುವಂತದ್ದು ಮಾತ್ರ. ಭಾರತದ ಪ್ರಜಾಪ್ರಭುತ್ವ ಕ್ರಾಂತಿಯನ್ನು ಮುಂದೊಯ್ಯುವಂತದ್ದು ಇದರಲ್ಲಿ ಏನೇನೂ ಇಲ್ಲ. ಇದರ ಪ್ರತಿಪಾದಕರು ಕೂಡ ಇದರ 'ದಕ್ಷತೆ', 'ಸರಳತೆ', 'ಅಭಿವೃದ್ಧಿಗೆ ಕೊಡುಗೆ' ಇತ್ಯಾದಿ ಪದಪುಂಜಗಳಲ್ಲೇ ಅದರ ಪ್ರಯೋಜನಗಳನ್ನು ಚರ್ಚಿಸುತ್ತಾರೆಯೇ ಹೊರತು ಎಂದೂ ಅದು ಪ್ರಜಾಪ್ರಭುತ್ವ ಅಂಶವನ್ನು ಹೊಂದಿದೆ ಎಂದೇನೂ ಹೇಳಿಲ್ಲ.

ನಿಜ ಹೇಳಬೇಕೆಂದರೆ, ಇದನ್ನು ವಿರೋಧಿಸುವವರು (ನಾನು ಇದರಲ್ಲಿ ಸೇರಿದ್ದೇನೆ, ಅಮರ್ತ್ಯ ಸೆನ್‌ರಂತಹ ಗಣ್ಯರೂ ನನ್ನ ಜತೆಗಿದ್ದಾರೆ, ಆದರೆ ಇದನ್ನು ಬಹಳ ಚೆನ್ನಾಗಿ ಅಭಿವ್ಯಕ್ತಿಸಿರುವವರು ಅಶೋಕ ಮಿತ್ರರವರು) ಜಿಎಸ್‌ಟಿ ಒಂದು ಅತ್ಯಂತ ಪ್ರಜಾಪ್ರಭುತ್ವ-ವಿರೋಧಿ ಕ್ರಮ ಎಂದೇ ಬಹಳ ಕಾಲದಿಂದ ವಾದಿಸುತ್ತಿದ್ದಾರೆ.

ಮೋದಿಯವರು ನೆಹರೂರವರ ಅನುಕರಣೆ ಮಾಡುವ ಪ್ರಯತ್ನದಲ್ಲಿ ತಮ್ಮ ಜಿಎಸ್‌ಟಿ ಮಧ್ಯರಾತ್ರಿ ಭಾಷಣದಲ್ಲಿ ಅವರ ಹೆಸರನ್ನು ಪ್ರಸ್ತಾಪಿಸಿದ್ದು ಒಂದು ಸಲ ಮಾತ್ರ. ಮತ್ತೆ-ಮತ್ತೆ ಅವರು ನೆನಪಿಸಿಕೊಂಡ ವ್ಯಕ್ತಿಯೆಂದರೆ ವಲ್ಲಭಭಾಯಿ ಪಟೇಲ್. ಪಟೇಲರು ಮಾಡಿದ ಭಾರತೀಯ ಸಂಘದೊಡನೆ ದೇಶೀ ರಾಜರುಗಳ ಸಂಸ್ಥಾನಗಳ ಸಮಗ್ರೀಕರಣ ಭಾರತವನ್ನು ಒಂದುಗೂಡಿಸುವಲ್ಲಿ ಯಾವ ಪಾತ್ರವನ್ನು ವಹಿಸಿತೋ ಅದೇ ಪಾತ್ರವನ್ನು ಜಿಎಸ್‌ಟಿ ವಹಿಸುತ್ತಿದೆ ಎಂಬುದೇ ಅವರು ತಮ್ಮ ಭಾಷಣದಲ್ಲಿ ಹೇಳಲು ಶ್ರಮಪಟ್ಟಿರುವ ಅಂಶ. ಆದರೆ ಮೋದಿಯವರ ಈ ಹೋಲಿಕೆ ಸಂಪೂರ್ಣ ತಪ್ಪು. ದೇಶದ ಪ್ರಜಾಸತ್ತಾತ್ಮಕ ಕ್ರಾಂತಿಯ ಕಿಂಚಿತ್ತೂ ತಿಳುವಳಿಕೆ ಇಲ್ಲದ ಒಬ್ಬ ವ್ಯಕ್ತಿ ಮಾತ್ರವೇ ಇಂತಹ ತಪ್ಪು ಮಾಡಲು ಸಾಧ್ಯ. ಇದರ ಹಿಂದಿರುವ ಕೇಂದ್ರೀಕರಣ ಮತ್ತು ಏಕರೂಪತೆಯ ಮೋದಿ ಮತ್ತು ಹಿಂದುತ್ವ ಗೀಳು ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಒಂದು ತೀವ್ರ ಬೆದರಿಕೆಯನ್ನು ಒಡ್ಡಿದೆ ಎನ್ನುತ್ತಾರೆ

ಪ್ರೊ.ಪ್ರಭಾತ್ ಪಟ್ನಾಯಕ್



ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು

ಅದು ರಾಜ್ಯ ಸರಕಾರಗಳ ಸಂವಿಧಾನಿಕ ಹಕ್ಕುಗಳನ್ನು ಕಿತ್ತುಕೊಂಡು ಅಧಿಕಾರಗಳನ್ನು ಕೇಂದ್ರ ಸರಕಾರದಲ್ಲಿ ಕೇಂದ್ರೀಕರಿಸುತ್ತದೆ. ಆ ಮೂಲಕ ಅದು ನಮ್ಮ ಪ್ರಜಾಪ್ರಭುತ್ವದ ಅನಿವಾರ್ಯ ಭಾಗವಾದ ದೇಶದ ಒಕ್ಕೂಟ ರಚನೆಯ ಮೇಲೆ ಒಂದು ದೊಡ್ಡ ಪ್ರಹಾರವನ್ನು ಮಾಡಿದೆ. ಸಂವಿಧಾನವು ರಾಜ್ಯ ಸರಕಾರಗಳ ವ್ಯಾಪ್ತಿಗೆ ಮಾರಾಟ ತೆರಿಗೆಯನ್ನು ಕೊಟ್ಟಿತ್ತು. ಅದನ್ನು ಎಲ್ಲಿ, ಯಾವ ದರಗಳಲ್ಲಿ ವಿಧಿಸಬೇಕು ಎಂಬುದನ್ನು ಆಯ್ದುಕೊಳ್ಳುವ ಪೂರ್ಣ ಸ್ವಾತಂತ್ರ್ಯ ಅವುಗಳಿಗಿತ್ತು. ಅದರ ಬದಲು ಈಗ ಜಿಎಸ್‌ಟಿ ನಮ್ಮ ಮುಂದಿದೆ. ಇದರ ದರಗಳನ್ನು ಜಿಎಸ್‌ಟಿ ಮಂಡಳಿ ಮಾತ್ರವೇ ನಿರ್ಧರಿಸಬಹುದು. ಈ ಮಂಡಳಿಯಲ್ಲಿ ಕೇಂದ್ರ ಸರಕಾರದೊಂದಿಗೆ ಎಲ್ಲ ರಾಜ್ಯ ಸರಕಾರಗಳು ಇವೆ, ಮತ್ತು ಪ್ರತಿಯೊಂದು ರಾಜ್ಯಕ್ಕೆ ಒಂದೇ ಒಂದು ಮತ ಇರುವುದು.

ಆದರೆ ವಿರೋಧಿಗಳು ಹೇಳುವುದನ್ನು ಮರೆತು ಬಿಡೋಣ. ಅದು ಒಕ್ಕೂಟ ತತ್ವಕ್ಕೆ ವಿರುದ್ಧವಾದ್ದರಿಂದ ಪ್ರಜಾಪ್ರಭುತ್ವ-ವಿರೋಧಿ ಎಂಬುದನ್ನು ಬದಿಗಿಡೋಣ. ಇಲ್ಲಿ ಮುಖ್ಯ ಅಂಶವೆಂದರೆ ಅದನ್ನು ಖಂಡಿತವಾಗಿಯೂ ಒಂದು ಪ್ರಜಾಪ್ರಭುತ್ವ ಕ್ರಮವಾಗಿ, ಭಾರತದ ಪ್ರಜಾಪ್ರಭುತ್ವ ಕ್ರಾಂತಿಯನ್ನು ಮುಂದೊಯ್ಯುವ ಒಂದು ಕ್ರಮವಾಗಿ ತಂದಿಲ್ಲ. ಆದ್ದರಿಂದ ಅದನ್ನು ಭಾರತೀಯ ಸಂಘದೊಳಗೆ ದೇಶೀ ರಾಜರುಗಳ ಸಂಸ್ಥಾನಗಳ ಸಮಗ್ರೀಕರಣಕ್ಕೆ ಸಮಾನವಾದ ಕ್ರಮ ಎಂದು ಕಾಣಲು ಸಾಧ್ಯವಿಲ್ಲ. ಅದರಿಂದಾಗಿ ಮೋದಿಯವರ ಹೋಲಿಕೆ ಸಂಪೂರ್ಣ ತಪ್ಪು. ದೇಶದ ಪ್ರಜಾಸತ್ತಾತ್ಮಕ ಕ್ರಾಂತಿಯ ಕಿಂಚಿತ್ತೂ ತಿಳುವಳಿಕೆ ಇಲ್ಲದ ಒಬ್ಬ ವ್ಯಕ್ತಿ ಮಾತ್ರವೇ ಇಂತಹ ತಪ್ಪು ಮಾಡಲು ಸಾಧ್ಯ.

ಆದರೆ ಇಂತಹ ಹೋಲಿಕೆ ತಪ್ಪು ಮಾತ್ರವೇ ಅಲ್ಲ, ಅದಕ್ಕಿಂತಲೂ ಕೆಟ್ಟದ್ದು. ಮೋದಿಯವರು ಈ ಮೂಲಕ ಕೇಂದ್ರೀಕರಣವೇ ದೇಶದ ಐಕ್ಯತೆ ಎಂದು ಸಮೀಕರಿಸಿದ್ದಾರೆ. ಅದನ್ನು ಸ್ಪಷ್ಟವಾಗಿಯೂ ಹೇಳಿದ್ದಾರೆ. ರಾಜರುಗಳ ಸಂಸ್ಥಾನಗಳಿಗೆ ಅವರ ವಿರೋಧ ಮತ್ತು ಈ ರಾಜ್ಯಗಳನ್ನು ಭಾರತೀಯ ಸಂಘದೊಂದಿಗೆ ಸಮಗ್ರೀಕರಿಸಿದ್ದಕ್ಕೆ ಪಟೇಲರಿಗೆ ಅವರ ಚಪ್ಪಾಳೆ ಬಹುಸಂಖ್ಯೆಯಲ್ಲಿ ಇಂತಹ ಸಂಸ್ಥಾನಗಳಿರುವುದು ಒಂದು 'ಗೊಂದಲಮಯತೆ'ಯ ಪರಿಸ್ಥಿತಿಯನ್ನು ತೋರಿಸುತ್ತದೆ ಎಂಬ ಕಾರಣಕ್ಕಾಗಿಯಷ್ಟೇ. ಪಟೇಲರ ಕ್ರಮಕ್ಕೆ ಅವರ ಚಪ್ಪಾಳೆ ಅದು ಭಾರತದ ಪ್ರಜಾಪ್ರಭುತ್ವ ಕ್ರಾಂತಿಯನ್ನು ಮುಂದೊಯ್ಯಿತು ಎಂಬುದಕ್ಕಲ್ಲ, ಬದಲಾಗಿ ಬಾಹುಳ್ಯದ ಒಂದು ಸ್ಥಿತಿಯನ್ನು ಕೊನೆಗೊಳಿಸಿತು ಎಂಬುದಕ್ಕಾಗಿ- ಜಿಎಸ್‌ಟಿ ಕೂಡ ಇದೇ ರೀತಿಯಲ್ಲಿ ಬಾಹುಳ್ಯವನ್ನು ಕೊನೆಗೊಳಿಸುತ್ತದೆ ಎಂದು ಅವರು ನಂಬಿದ್ದಾರೆ.

ಅವರ ಈ ಕಣ್ನೋಟದ ಪ್ರಕಾರ, ಕೇಂದ್ರೀಕೃತ ಏಕರೂಪತೆ ಅಪೇಕ್ಷಣೀಯ, ಒಂದು ಒಕ್ಕೂಟ ರಚನೆಯ ಅನಿವಾರ್ಯ ಲಕ್ಷಣವಾದ ಬಾಹುಳ್ಯ ಅತ್ಯಂತ ಅನಪೇಕ್ಷಣೀಯ, 'ರಾಷ್ಟ್ರ'ದ ಐಕ್ಯತೆ ಇಂತಹ ಕೇಂದ್ರೀಕೃತ ಏಕರೂಪತೆಯ ಆಧಾರದಲ್ಲಿ ಮಾತ್ರವೇ ಸಾಧ್ಯ !

ಇದು ಅತ್ಯಂತ ಆಕ್ಷೇಪಾರ್ಹ ಕಣ್ನೋಟ. ಏಕರೂಪತೆಯನ್ನು ಮತ್ತು ಕೇಂದ್ರೀಕರಣವನ್ನು ಹೀಗೆ ಆರಾಧಿಸುವವರು ವಿಕೇಂದ್ರೀಕರಣವನ್ನು ಕೂಡ ವಿರೋಧಿಸಬೇಕು. ತೆರಿಗೆ ದರಗಳಲ್ಲಿ ಬಹುವಿಧಗಳಿವೆ, ಏಕರೂಪತೆ ಇಲ್ಲ ಎಂದು ಕಣ್ಣು ಕೆಂಪಗೆ ಮಾಡಿಕೊಳ್ಳುವುದಾದರೆ ಪಂಚಾಯತುಗಳಿಗೆ ಅಧಿಕಾರಗಳ ವರ್ಗಾವಣೆಯನ್ನು ಕೂಡ ವಿರೋಧಿಸಬೇಕು. ವಿಧ-ವಿಧ ದರಗಳ ಮಾರಾಟ ತೆರಿಗೆಗಳನ್ನು ವಿಧಿಸುವ ರಾಜ್ಯ ಸರಕಾರಗಳನ್ನು 'ಶಿಸ್ತಿ'ಗೆ ಒಳಪಡಿಸಿ ದರಗಳನ್ನು ನಿಗದಿ ಮಾಡುವ ಅವುಗಳ ಅಧಿಕಾರವನ್ನು ಬಿಟ್ಟು ಕೊಡುವಂತೆ ಮಾಡಬೇಕು ಎಂದಾದರೆ, ಆ ತರ್ಕ ಪಂಚಾಯತುಗಳಿಗೂ ಅನ್ವಯವಾಗಬೇಕಿತ್ತು. ಆದರೆ ಪಂಚಾಯತುಗಳು ವಿಧಿಸುವ ತೆರಿಗೆಗಳು ಅವರ ಗಮನವನ್ನು ಸೆಳೆಯುವುದಿಲ್ಲ, ಏಕೆಂದರೆ ಅವು ಕಾರ್ಪೊರೇಟ್-ಹಣಕಾಸು ಕುಳಗಳ ಕೂಟವನ್ನು ತಟ್ಟುವುದಿಲ್ಲ. ಅಂದರೆ ಪಂಚಾಯತುಗಳ ತೆರಿಗೆ ವಿಧಿಸುವ ಅಧಿಕಾರಗಳಿಂದ ಉಂಟಾಗಿರುವ 'ಗೊಂದಲಮಯತೆ'ಯಿಂದ ಅವರಿಗೆ ಇದುವರೆಗೆ ಏನೂ ಅನಿಸದಿದ್ದರೆ, ಅದು ಯಾವುದೇ ರೀತಿಯ ತತ್ವಬದ್ಧತೆಯಿಂದಾಗಿ ಇಲ್ಲ, ಬದಲಾಗಿ ಕಾರ್ಪೊರೇಟ್-ಹಣಕಾಸು ಕೂಟದ ಹಿತಾಸಕ್ತಿಗಳ ಬಗ್ಗೆ ಅವರ ಕಾಳಜಿಯಿಂದಾಗಿಯೇ ಎಂಬುದು ಸ್ಪಷ್ಟ.

ಬೇರೆ ಮಾತುಗಳಲ್ಲಿ ಹೇಳುವುದಾದಲ್ಲಿ, ಮೋದಿಯವರ ಕಣ್ನೋಟದ ಪ್ರಕಾರ, ಕೇಂದ್ರೀಕರಣ ಯಾವಾಗಲೂ ಒಳ್ಳೆಯದೇ, ಅದು ಕಾರ್ಪೊರೇಟ್-ಹಣಕಾಸು ಕುಳಗಳ ಕೂಟಕ್ಕೆ ಹಿತಕಾರಿಯಾಗಿದ್ದರಂತೂ, ವಿಶೇಷವಾಗಿ ಒಳ್ಳೆಯದು.

ಮೋದಿಯವರ ಹೋಲಿಕೆ ಅಪಾಯಕಾರಿ ಲಕ್ಷಣಗಳನ್ನು ಹೊಂದಿದೆ. ಏಕೆಂದರೆ ಅವರ ವ್ಯಾಖ್ಯಾನ ಕ್ಷೇತ್ರದಲ್ಲಿ ಪ್ರಜಾಪ್ರಭುತ್ವಕ್ಕೆ ಮತ್ತು ಪ್ರಜಾಪ್ರಭುತ್ವ ಕ್ರಾಂತಿಗೆ ಯಾವುದೇ ಸ್ಥಾನವಿಲ್ಲ. ಇದಕ್ಕೆ ಅವರು ಈ ಪ್ರಶ್ನೆಗಳನ್ನು ದೇಶೀ ರಾಜರುಗಳ ಸಂಸ್ಥಾನಗಳನ್ನು ಭಾರತೀಯ ಸಂಘದೊಳಗೆ ಸಮಗ್ರೀಕರಿಸಿದ ಪಟೇಲರ ಕ್ರಮದ ಬಗ್ಗೆ ಭಾರೀ ಅಭಿಮಾನದಿಂದ ಹೇಳುವಾಗ ಪರಿಗಣಿಸಿಯೂ ಇಲ್ಲ ಎಂಬುದೇ ಸಾಕ್ಷಿ.

ಇಲ್ಲಿ ಒಂದು ಆಸಕ್ತಿದಾಯಕ ಅಂಶ ಎಂದರೆ, ಜಗತ್ತಿನ ಅತ್ಯಂತ 'ಸಾಚಾ' ಬಂಡವಾಳಶಾಹಿ ದೇಶವಾದ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ, ಕಾರ್ಪೊರೇಟ್ ಹಿತಗಳನ್ನು ಪ್ರಭುತ್ವದ ಧೋರಣೆಗಳಲ್ಲಿ ಬಹಳ ಭಯ-ಭಕ್ತಿಯಿಂದ ಒಳಗೊಳ್ಳುವ ದೇಶದಲ್ಲಿ ಕೂಡ ಒಕ್ಕೂಟ ತತ್ವಕ್ಕೆ ಬದ್ಧತೆ ಎಷ್ಟೊಂದು ಬಲಿಷ್ಠವಾಗಿದೆಯೆಂದರೆ, ಅಲ್ಲಿ ಎಂದೂ ಕೂಡ ಒಂದು ಏಕರೂಪದ ಸರಕು ಮತ್ತು ಸೇವೆಗಳ ತೆರಿಗೆ ವ್ಯವಸ್ಥೆಯನ್ನು ತರಬೇಕು ಎಂಬ ಮಾತು ಕೂಡ ಬಂದಿಲ್ಲ. ಒಕ್ಕೂಟ ತತ್ವ ಎಂಬುದು ಅದರ ಸ್ಥಾಪನೆಯ ನೀತಿಗಳಲ್ಲಿ ಒಂದಾಗಿದ್ದು, ಅದರಿಂದಾಗಿಯೇ ಅದು ವಿವಿಧ ರಾಜ್ಯಗಳಲ್ಲಿ ವಿಧಿಸುವ ಬಹುವಿಧ, ಬಹು-ದರಗಳ ತೆರಿಗೆಗಳ 'ಗೊಂದಲಮಯತೆ'ಯೊಂದಿಗೇ ದಶಕಗಳ ಕಾಲ ಬಾಳಿ ಬದುಕಿದೆ. ಇದರಿಂದಾಗಿ ಆ ದೇಶದ ಅಭಿವೃದ್ಧಿ ದರ ಅಥವ ಅದರ ಐಕ್ಯತೆ ಕುಂಠಿತವಾಗಿದೆ ಎಂಬ ಸೂಚನೆ ಕೂಡ ಎಂದೂ ಬಂದಿಲ್ಲ. ತದ್ವಿರುದ್ಧವಾಗಿ, ಈ ಏಕರೂಪತೆ ಇಲ್ಲದ್ದರಿಂದಾಗಿಯೇ, ವಿವಿಧ ರಾಜ್ಯಗಳು ತಮಗೆ ಸರಿಕಂಡಂತೆ ತೆರಿಗೆ ವಿಧಿಸಬಹುದಾದ್ದರಿಂದಲೇ, ಅವು ಒಂದು ಒಕ್ಕೂಟದ ಭಾಗವಾಗಿರಲು ಮುಕ್ತವಾಗಿ ಒಪ್ಪಿಕೊಳ್ಳಲು ಸಾಧ್ಯವಾಗಿದೆ, ಇದರಿಂದ ಅದರ ಐಕ್ಯತೆ ಬಲಿಷ್ಠಗೊಂಡಿದೆ ಎಂಬ ಗಟ್ಟಿಯಾದ ನಂಬಿಕೆ ಅವರಲ್ಲಿ ಇದೆ.

ಹಿಂದುತ್ವ ಮಂದಿ ಬಹಳವಾಗಿ ಪ್ರೀತಿಸುವ ಸರ್ವಾಧಿಕಾರಶಾಹಿ ಮತ್ತು ಏಕರೂಪತೆ ಜಿಎಸ್‌ಟಿ ತೆರಿಗೆ ಪ್ರಸ್ತಾವದಲ್ಲಿ ಪ್ರತಿಫಲನಗೊಂಡಿದೆ. ಇದನ್ನು, ಬೇರೆ ಯಾರೂ ಅಲ್ಲ, ಸ್ವತಃ ಮೋದಿಯವರೇ ತಮ್ಮ ಹೋಲಿಕೆಯ ಮೂಲಕ ವ್ಯಕ್ತಪಡಿಸಿದ್ದಾರೆ. ವಿಡಂಬನೆಯೆಂದರೆ ರಾಜ್ಯಗಳ ಅಧಿಕಾರಗಳನ್ನು ಮೊಟಕು ಮಾಡುವ ಮೂಲಕ ಜಿಎಸ್‌ಟಿ 'ಗೊಂದಲಮಯತೆ'ಯನ್ನು ಮೀರಿನಿಂತಿದೆ ಎಂದು ಬೀಗುವ ಮೋದಿಯವರ ಭಾಷಣವೇ ಜಿಎಸ್‌ಟಿಯ ಟೀಕಾಕಾರರು ಬಹಳ ದಿನಗಳಿಂದ ಎತ್ತುತ್ತಿರುವ ಅಂಶವನ್ನು ಸಾಬೀತು ಮಾಡಿದೆ. ಈ ಟೀಕಾಕಾರರು ಒಂದು ಪ್ರಜಾಪ್ರಭುತ್ವದಲ್ಲಿ ಇಂತಹ 'ಗೊಂದಲಮಯತೆ' ಅನಿವಾರ್ಯವಾಗಿದೆ, ಏಕೆಂದರೆ ವಿಭಿನ್ನ ತತ್ವ ಸಿದ್ಧಾಂತಗಳ ವಿವಿಧ ರಾಜಕೀಯ ಪಕ್ಷಗಳು ನಡೆಸುವ ವಿವಿಧ ರಾಜ್ಯ ಸರಕಾರಗಳು ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಹೇಗೆ ನಡೆಸಬೇಕು ಎಂಬ ಬಗ್ಗೆ ತಮ್ಮ ವಿಭಿನ್ನ ಪರಿಕಲ್ಪನೆಗಳನ್ನು ಜಾರಿಗೆ ತರಲು ಅವಕಾಶವನ್ನು ಕೊಡುತ್ತದೆ. ಇಂತಹ ಅವಕಾಶವನ್ನು ಕಲ್ಪಿಸುವುದು ಮೋದಿಯವರಿಗೆ 'ಅಸಹ್ಯ'ವೆನಿಸುವಂತಹ 'ಗೊಂದಲಮಯತೆ'ಯನ್ನು ತರುತ್ತದೆ. ಆದರೆ ಇದು ಪ್ರಜಾಪ್ರಭುತ್ವದ ಅಭಿನ್ನ ಅಂಗ.

ಹಿಂದುತ್ವ ಶಕ್ತಿಗಳು ಹೊಂದಿರುವ ಮತ್ತು ಜುಲೈ 1ರಂದು ಸೆಂಟ್ರಲ್ ಹಾಲ್‌ನಲ್ಲಿ ಮೋದಿಯವರು ಜಿಎಸ್‌ಟಿ ಎಂಬುದು ದೇಶೀ ರಾಜರುಗಳ ಸಂಸ್ಥಾನಗಳ ಸಮಗ್ರೀಕರಣದ ಸಾಧನೆಗೆ ಸಮನಾದುದು ಎಂಬ ದಾರಿ ತಪ್ಪಿಸುವ ಹೋಲಿಕೆಯ ಮೂಲಕ ವ್ಯಕ್ತಪಡಿಸಿರುವ ಕೇಂದ್ರೀಕರಣ ಮತ್ತು ಏಕರೂಪತೆಯ ಗೀಳು ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಒಂದು ತೀವ್ರ ಬೆದರಿಕೆಯನ್ನು ಒಡ್ಡಿದೆ.

ಈಗ ಕೃಷಿಯಲ್ಲಿ ಸ್ವಯಂಪೂರ್ಣತೆ ಮತ್ತು ಸಮೃದ್ಧಿಗೆ ಕೇರಳದ ಜನತಾ ಪರ್ಯಾಯ ಮಾದರಿ

ದೇಶದ ಇತರೆರೆಗಳಲ್ಲಿ ಸರಕಾರಗಳು ರೈತ–ವಿರೋಧಿ ಧೋರಣೆಗಳನ್ನು ತಳೆದು ಒಂದು ವಯಾಪಕವಾದ ರೈತ ಹೋರಾಟ ಭುಗಿಲೆದ್ದಿರುವಾಗ ಕೇರಳದಲ್ಲಿ ಒಂದು ಭಿನ್ನ ಪರಿಸ್ತಿತಿ ಏರ್ಪಟ್ಟಿದೆ. ಎಲ್‌ಡಿಎಫ್ ಸರಕಾರ ಕಳೆದ ಒಂದು ವರ್ಷದಲ್ಲಿ ಕೃಷಿಯಲ್ಲಿ ಸ್ವಯಂಪೂರ್ಣತೆ ಸಾಧಿಸಲು ಮತ್ತು ಕೃಷಿಯಲ್ಲಿ ತೊಡಗಿರುವ ರೈತರು ಮತ್ತು ಕೃಷಿ ಕಾರ್ಮಿಕರ ಸಮೃದ್ಧಿಗೆ ವಿವಿಧ ಮಟ್ಟಗಳಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಇದರಲ್ಲಿ ಈ ಹಿಂದೆ ಕೇರಳ ಮಾದರಿಯೆಂದು ಹೆಸರು ತಂದು ಕೊಟ್ಟ ಸಾಕ್ಷರತಾ ಆಂದೋಲನ ಮತ್ತು ಜನತಾ ಯೋಜನೆಯಂತೆ ಜನಸಾಮಾನ್ಯರನ್ನು ಒಳಗೊಳ್ಳುವ ಪ್ರಯತ್ನಗಳು ಈ ಕ್ರಮಗಳನ್ನು ವಿಶಿಷ್ಟಗೊಳಿಸಿವೆ.

ಕೇರಳ ತನ್ನ ಎಲ್ಲ ಜನರ ಬಳಕೆಗೆ ಬೇಕಾಗುವಷ್ಟು ಆಹಾರಧಾನ್ಯಗಳು ಮತ್ತು ತರಕಾರಿಗಳಿಗೂ ಬೇರೆ ರಾಜ್ಯಗಳನ್ನೇ ಹೆಚ್ಚಾಗಿ ಅವಲಂಬಿಸಬೇಕಾಗಿದೆ. ಆದ್ದರಿಂದ ಸ್ವಯಂಪೂರ್ಣತೆ ಸಾಧಿಸಲು ಸಾಗುವಳಿ ಪ್ರದೇಶವನ್ನು ಹೆಚ್ಚಿಸುವುದು ಮೊದಲ ಆದ್ಯತೆ–ಮುಖ್ಯವಾಗಿ ರಾಜ್ಯದ ಮುಖ್ಯ ಆಹಾರಧಾನ್ಯವಾದ ಭತ್ತದ ಉತ್ಪಾದನೆಗೆ. ಹಿಂದಿನ ಎಲ್‌ಡಿಎಫ್ ಸರಕಾರ ಇದಕ್ಕಾಗಿ 'ಭತ್ತ ಮತ್ತು ತರಿಜಮೀನು ಸಂರಕ್ಷಣಾ ಕಾಯ್ದೆ'ಯನ್ನು ಜಾರಿ ಮಾಡಿತ್ತು. ಆದರೆ ನಂತರ ಬಂದ ಯುಡಿಎಫ್ ಸರಕಾರ ಅದನ್ನು ಅಭಿವೃದ್ಧಿಯ ಹೆಸರಲ್ಲಿ ವಿಕೃತಗೊಳಿಸಿ ಭತ್ತದ ಸಾಗುವಳಿ ಪ್ರದೇಶ ಕುಂಠಿತಗೊಳ್ಳುವಂತೆ ಮಾಡಿತ್ತು. ಆದ್ದರಿಂದ ಈ ಎಲ್‌ಡಿಎಫ್ ಸರಕಾರ ಮೊದಲಿಗೆ ಇದನ್ನು ಸರಿಪಡಿಸಿ 4.27 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ತರಿಭೂಮಿ ಸಂರಕ್ಷಣೆಯನ್ನು ಜಾರಿ ಮಾಡಿದೆ, ಈ ಕಾಯ್ದೆಯ ಅಡಿಯಲ್ಲಿ ಒಂದು ಭೂಮಾಹಿತಿ ಆಗರವನ್ನು ರಚಿಸಿ ಕೃಷಿ ಭೂಮಿಯ ಅತಿಕ್ರಮಣ ಇನ್ನು ಮುಂದೆ ಅಭಿವೃದ್ಧಿ ಹೆಸರಲ್ಲಿ, ರಿಯಲ್ ಎಸ್ಟೇಟ್‌ಗಳು ಇತ್ಯಾದಿಗೆ ನಡೆಯದಂತೆ ಮಾಡಿದೆ. 2017 ರನ್ನು 'ಭತ್ತದ ವರ್ಷ'ವಾಗಿ ಆಚರಿಸಲಾಗುತ್ತಿದ್ದು, 'ನಮ್ಮ ಭತ್ತ ನಮ್ಮ ಆಹಾರ' ಎಂಬ ಘೋಷಣೆಯೊಂದಿಗೆ ಜನ ಇದರಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಭತ್ತದ ಸಾಗುವಳಿಯನ್ನು 2 ಲಕ್ಷ ಹೆಕ್ಟೇರುಗಳಿಂದ 3ಲಕ್ಷ ಹೆಕ್ಟೇರುಗಳಿಗೆ ಏರಿಸುವ ಯೋಜನೆ ಹಾಕಿಕೊಳ್ಳಲಾಗಿದೆ.

'ಹರಿತ ಕೇರಳಂ' ಮಿಶನ್ ಅನ್ನು ಆರಂಭಿಸಿ ಕೆರೆ, ಸರೋವರ, ನದಿ ಮತ್ತು ತೊರೆಗಳಂತಹ ಜಲಾಶಯಗಳಿಂದ ಕೊಳೆ ನಿವಾರಣೆಯ ಮೂಲಕವೂ ಸಾಗುವಳಿ ಜಮೀನನ್ನು ವಿಸ್ತರಿಸುವ ಪ್ರಯತ್ನ ಕೈಗೊಳ್ಳಲಾಗಿದೆ. ಬುಡಕಟ್ಟು ಪ್ರದೇಶಗಳಲ್ಲಿ ಕೃಷಿಯ ಬೆಳವಣಿಗೆಗೆ 20 ಕೋಟಿ ರೂ.ಗಳ ವಿಶೇಷ ಯೋಜನೆಯನ್ನು ರೂಪಿಸಲಾಗಿದೆ, ನಗರ ಪ್ರದೇಶಗಳಲ್ಲೂ ಕೃಷಿಗೆ ಪ್ರೋತ್ಸಾಹ ನೀಡಲು ಶಾಲಾ, ಕಾಲೇಜುಗಳು ಮತ್ತು ಇತರ ಸಂಸ್ಥೆಗಳ ನೆರವನ್ನು ಪಡೆಯಲಾಗುತ್ತಿದೆ.

ಎರಡನೆಯದಾಗಿ, ಕೃಷಿ ಉತ್ಪನ್ನಗಳ ಪರಿಣಾಮಕಾರಿ ಮಾರಾಟಕ್ಕೆ ಓಣಂ, ವಿಶು, ಕ್ರಿಸ್‌ಮಸ್, ರಂಝಾನ್ ಮುಂತಾದ ಹಬ್ಬಗಳ ಸಮಯದಲ್ಲಿ ಪ್ರತಿ ಪಂಚಾಯತಿನಲ್ಲಿ ವಿಶೇಷ ಸಂತೆಗಳು ಮತ್ತು ಮಾರುಕಟ್ಟೆಗಳನ್ನು ಕಲ್ಪಿಸಲಾಗಿದೆ, ಸಾವಯವ ತರಕಾರಿಗಳು ಜನರಿಗೆ ಲಭ್ಯವಾಗುವಂತೆ ಮುತುವರ್ಜಿ ವಹಿಸಲಾಗಿದೆ.

ಕೃಷಿಯಲ್ಲಿ ತೊಡಗಿರುವವರಿಗೆ ಸ್ಥಿರ ಆದಾಯ ಸಿಗುವಂತೆ ಮಾಡಿ ಅದನ್ನು ಫಲದಾಯಕಗೊಳಿಸುವುದು ಈ ನಿಟ್ಟಿನಲ್ಲಿ ಮಾಡಬೇಕಾಗಿದ್ದ ಮತ್ತೊಂದು ಪ್ರಮುಖ ಕೆಲಸ. ಇದಕ್ಕಾಗಿ ರೈತರ ಪೆನ್ಶನ್ ಮೊತ್ತವನ್ನು 1100ರೂ.ಗೆ ಏರಿಸಲಾಗಿದೆ, ಕೃಷಿಯಲ್ಲಿ ತೊಡಗಿರುವವರಿಗೆ ಕನಿಷ್ಟ ಕೂಲಿ ಮತ್ತು ವಿಮಾ ಸೌಕರ್ಯ ಸಿಗುವಂತಹ ಯೋಜನೆಗಳನ್ನು ರೂಪಿಸಲಾಗುತ್ತಿದೆ. ನೈಸರ್ಗಿಕ ಅನಾಹುತಗಳಿಗೆ ತುತ್ತಾಗಿರುವ ಪ್ರದೇಶಗಳಲ್ಲಿ ಸಾಲ ಮನ್ನಾ, ತುರ್ತು ಹಣಕಾಸು ನೆರವು ನಿಧಿ ಮತ್ತು ಬೆಳೆ ವಿಮಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆ. ಭೂಹೀನ ಕೃಷಿಕರಲ್ಲಿ ಈಗಾಗಲೇ 20,000ಕ್ಕೂ ಹೆಚ್ಚು ಮಂದಿಗೆ ಜಮೀನು ಕ್ರಯಪತ್ರಗಳನ್ನು ನೀಡಲಾಗಿದೆ. ಜೀವನಾಧಾರ ಕಲ್ಪಿಸುವುಕ್ಕೆ ಒತ್ತಿನೊಂದಿಗೆ ಒಂದು ಸಾರ್ವತ್ರಿಕ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಎಲ್‌ಡಿಎಫ್ ಸರಕಾರ ಗಮನ ಹರಿಸಿರುವ ಮತ್ತೊಂದು ಕ್ಷೇತ್ರವೆಂದರೆ ಕೃಷಿ ವಲಯದ ಮೌಲ್ಯವರ್ಧಿತ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು ರೈತರ ಸಹಕಾರಿಗಳು, ಕೃಷಿ ಉದ್ದಿಮೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಮಾಡುವುದು. ಕೃಷಿ ಉತ್ಪನ್ನ ಪಾರ್ಕ್‌ಗಳನ್ನು, 20 ಹೊಸ ಕೃಷಿ ಸೇವಾಕೇಂದ್ರಗಳನ್ನು ತೆರೆಯಲಾಗಿದೆ, ಕೃಷಿ ಉತ್ಪನ್ನಗಳು ಪೋಲಾಗದಂತೆ ತಡೆಯಲು ಉತ್ಪಾದನಾ ಸೌಲಭ್ಯಗಳೊಂದಿಗೆ, ದಾಸ್ತಾನು ಸೌಲಭ್ಯಗಳನ್ನು ವೈನಾಡ್, ಕಣ್ಣೂರ ಮತ್ತು ಅಲಪುಳದಲ್ಲಿ ನಿರ್ಮಿಸಲಾಗಿದೆ.

ಭತ್ತವಲ್ಲದೆ ತೆಂಗು, ಮಸಾಲೆ ವಸ್ತುಗಳು ,ಹಲಸು ಮತ್ತು ರಬ್ಬರ್ ಕೇರಳದ ಮುಖ್ಯ ಕೃಷಿ ಉತ್ಪನ್ನಗಳು. ರಾಜ್ಯದಾದ್ಯಂತ 'ಕೇರಗ್ರಾಮ್'ಗಳ ಸರಣಿಯನ್ನು ರಚಿಸಿ 500 ಎಕ್ರೆ ಪ್ರದೇಶದಲ್ಲಿ ತೆಂಗು ಸಾಗುವಳಿಯ ಬೆಳವಣಿಗೆಯನ್ನು ರೂಪಿಸಲಾಗಿದೆ. ಕೊಟ್ಟಾಯಂ ಮತ್ತು ಪಟ್ಟಣಂತ್ತಿತ್ತದಲ್ಲಿ ರಬ್ಬರ್ ಪಾರ್ಕ್‌ಗಳು, ಇಡುಕ್ಕಿ ಮತ್ತು ವೈನಾಡಿನಲ್ಲಿ ಮಸಾಲೆ ಪಾರ್ಕ್‌ಗಳು ಮತ್ತು ತ್ರಿಶೂರಿನಲ್ಲಿ ಹಲಸು ಪಾರ್ಕ್ ರಚಿಸಲಾಗಿದೆ.

ಬೇಸಾಯವಿಲ್ಲದ ಅವಧಿಗಳಲ್ಲಿ ಉದ್ಯೋಗಹೀನತೆ, ಅದರಿಂದಾಗಿ ಆದಾಯಹೀನತೆ ಭಾರತದಲ್ಲಿ ಕೃಷಿಯಲ್ಲಿ ತೊಡಗಿರುವವರ ಒಂದು ದೊಡ್ಡ ಸಮಸ್ಯೆ. ಮನರೇಗದ ಮೂಲಕ ಈ ಸಮಸ್ಯೆಗೂ ಪರಿಹಾರ ಕಂಡುಕೊಳ್ಳುವ ಪ್ರಯತ್ನವನ್ನು ಕೇಂದ್ರಸರಕಾರ ಈ ಯೋಜನೆಗೆ ಮಾಡಿರುವ ಕಡಿತದ ನಡುವೆಯೂ ಮಾಡಲಾಗುತ್ತಿದೆ.

ಕೃಷಿ ಮತ್ತು ನಾಗರಿಕ ಪೂರೈಕೆ ಇಲಾಖೆಗಳು, ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳು, ಪರಿಶಿಷ್ಟ ಜಾತಿಗಳು/ ಬುಡಕಟ್ಟುಗಳು, ವಸತಿ, ಮೀನುಗಾರಿಕೆ ಮತ್ತು ಕೈಗಾರಿಕಾ ಇಲಾಖೆಗಳು ಇವೆಲ್ಲದರ ಜತೆಗೆ ಜನರ ಭಾಗವಹಿಸುವಿಕೆಯ ಮೂಲಕ ಒಂದು ನಿಜವಾದ ಅರ್ಥದ ಜನತಾ ಪರ್ಯಾಯದತ್ತ ಕೆರಳದ ಎಲ್‌ಡಿಎಫ್ ಸರಕಾರ ಹೆಜ್ಜೆಯಿಟ್ಟಿದೆ.

ರಾಜ್ಯಗಳ ಸುತ್ತ

ಉಪರಾಜ್ಯಪಾಲರ ಪ್ರಜಾಪ್ರಭುತ್ವ–ವಿರೋಧಿ ಕಾರ್ಯವೈಖರಿಯ ವಿರುದ್ಧ ಪುದುಚೇರಿ ಬಂದ್

ದಿಲ್ಲಿ ಚುನಾವಣೆಗಳಲ್ಲಿ ಬಿಜೆಪಿ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಭಾರೀ ಪರಾಭವವನ್ನು ಉಂಡ ನಂತರ ಪುದುಚೇರಿಗೆ ಉಪರಾಜ್ಯಪಾಲರಾಗಿ ನೇಮಕಗೊಂಡಿರುವ ಕಿರಣ್ ಬೇಡಿ ಕೇಂದ್ರ ಆಳುವ ಪಕ್ಷದ ಏಜೆಂಟರಂತೆ ವರ್ತಿಸುತ್ತಿರುವುದು, ಅದಕ್ಕಾಗಿ ಪ್ರಜಾಪ್ರಭುತ್ವ ನೀತಿ–ನಿಯಮಗಳನ್ನು ಎಗ್ಗಿಲ್ಲದೆ ಉಲ್ಲಂಘಿಸುತ್ತಿರುವುದು ಕಳೆದ ಕೆಲವು ತಿಂಗಳುಗಳಿಂದ ರಾಜ್ಯದಲ್ಲಿ ಅಸಮಾಧಾನವನ್ನು ಹುಟ್ಟಿಸಿದ್ದು ಅದು ಜುಲೈ 8ರಂದು ತಾರಕಕ್ಕೆ ಏರಿದೆ. ಅಂದು ರಾಜ್ಯಪಾಲರ ಪ್ರಜಾಪ್ರಭುತ್ವ–ವಿರೋಧಿ ವರ್ತನೆಯ ವಿರುದ್ಧ ರಾಜ್ಯವ್ಯಾಪಿ ಯಶಸ್ವಿ ಬಂದ್ ನಡೆದಿದೆ.

ಈ ಬಂದ್‌ಗೆ ತಕ್ಷಣದ ಕಾರಣ 'ಸಹಕಾರಿ ಒಕ್ಕೂಟ ತತ್ವ' ಎಂಬ ಹೊಸ ಪದಪುಂಜ ಸೃಷ್ಟಿಸಿರುವ ಹೆಗ್ಗಳಿಕೆ ಪ್ರದರ್ಶಿಸುವ ಕೇಂದ್ರ ಸರಕಾರ ಏಕಪಕ್ಷೀಯವಾಗಿ ಮೂವರನ್ನು ರಾಜ್ಯವಿಧಾನ ಸಭೆಗೆ ನಾಮಕರಣ ಸದಸ್ಯರಾಗಿ ಸೂಚಿಸಿದ ರೀತಿ ಮತ್ತು ಅವರಿಗೆ ವಿಧಾನಸಭಾ ಅಧ್ಯಕ್ಷರಿಂದ ಪ್ರತಿಜ್ಞಾವಿಧಿಯ ಬದಲು ರಾಜ್ಯಪಾಲರೇ ಸರಕಾರಕ್ಕೆ ತಿಳಿಸದೆ ರಾಜಭವನದಲ್ಲಿ ಪ್ರತಿಜ್ಞಾವಿಧಿ ನೇರವೇರಿಸಿದ್ದು. ಈ ಮೂವರೂ ಬಿಜೆಪಿ ಮುಖಂಡರು ಎಂದು ಬೇರೆ ಹೇಳಬೇಕಾಗಿಲ್ಲ. ಅವರಲ್ಲಿ ಬಿಜೆಪಿಯ ರಾಜ್ಯ ಮುಖ್ಯಸ್ಥರು ಮತ್ತು ಖಜಾಂಚಿ ಕೂಡ ಸೇರಿದ್ದಾರೆ ಎಂಬುದು ಗಮನಾರ್ಹ. ಬಹುಶಃ ಈ ಕಾರಣಕ್ಕಾಗಿಯೇ ಗುಟ್ಟಾಗಿ ಅವರನ್ನು ನಾಮಕರಣ ಸದಸ್ಯರಾಗಿ ನೇಮಿಸಲಾಗಿದೆ.

ಈ ಪ್ರಜಾಪ್ರಭುತ್ವ–ವಿರೋಧಿ, ರಾಜ್ಯದ ಜನರಿಗೆ ಅಪಮಾನ ಮಾಡಿರುವ ನಾಮಕರಣವನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿ ರಾಸ್ತಾರೋಕೋಗೆ ನೇತೃತ್ವ ನೀಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಆರ್. ರಾಜ್ಯಂಗಂ, ಸಿಪಿಐ ಕಾರ್ಯದರ್ಶಿ ಆರ್.ವಿಶ್ವನಾಥನ್ ಮತ್ತು ಡಿಎಂಕೆ ಮುಖಂಡ ಆರ್.ಶಿವಂ ಮತ್ತಿತರ ಮುಖಂಡರನ್ನು ಬಂಧಿಸಲಾಯಿತು. ಉಪರಾಜ್ಯಪಾಲರ 'ರಾಜನಿವಾಸ'ವನ್ನು ಸುತ್ತುವರಿಯಲು ಪ್ರಯತ್ನಿಸಿದ ಸುಮಾರು 300 ಪ್ರತಿಪಕ್ಷಗಳ ಕಾರ್ಯಕರ್ತರನ್ನೂ ಬಂಧಿಸಲಾಯಿತು.

ಗಲಭೆ–ಪೀಡಿತ ಬಸಿರ್ಹಾಟ್‌ನಲ್ಲಿ ಹಿಂದೂ ನೆರೆಕರೆಯವರಿಗೆ ನೆರವಾಗಲು ಮುಸ್ಲಿಮರಿಂದ ಹಣ ಸಂಗ್ರಹ

ಇದು ಜುಲೈ 9ರ 'ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಪ್ರಕಟವಾಗಿರುವ ಒಂದು ವರದಿಯ ಶಿರೋನಾಮೆ.



ಬಹುಶಃ ಈ ಸುದ್ದಿಯ ಸ್ಫೂರ್ತಿಯಿಂದ ರಚಿಸಿದ ಇ.ಪಿ.ಉನ್ನಿ ವ್ಯಂಗ್ಯಚಿತ್ರ

ಕಳೆದ ವಾರ ಪ್ರಜಾಪ್ರಭುತ್ವವಾದಿಗಳಲ್ಲಿ ತಲ್ಲಣ ಉಂಟು ಮಾಡಿದ ಪಶ್ಚಿಮ ಬಂಗಾಲದ ಉತ್ತರ 24 ಪರಗಣ ಜಿಲ್ಲೆಯ ಕೋಮು ಗಲಭೆಗಳಿಂದ ಗ್ರಸ್ತವಾದ ಪ್ರದೇಶದಿಂದ ರವಿಕ್ ಭಟ್ಟಾಚಾರ್ಯ ಎಂಬ ಪತ್ರಕರ್ತ ಕಳಿಸಿರುವ ವರದಿ ಇದು.

ಬಾಂಗ್ಲಾದೇಶ್‌ನ ಗಡಿ ಸಮೀಪವಿರುವ ಈ ಪ್ರದೇಶ ಕಳೆದ ವಾರ ಭಾರೀ ಗಲಭೆಗಳನ್ನು ಕಂಡಿತ್ತು. ಅದರಲ್ಲಿ ಸುಮಾರು ನೂರು ಅಂಗಡಿಗಳು, ಮನೆಗಳ ಮೇಲೆ ದುಷ್ಪರಿಣಾಮ ಉಂಟಾಗಿತ್ತು. ಈಗ ಅಲ್ಲಿ ಮುಸ್ಲಿಮರು ತಮ್ಮ ಅಂಗಡಿ ಮುಗ್ಗಟ್ಟುಗಳನ್ನು ಕಳಕೊಂಡ ತಮ್ಮ ಹಿಂದೂ ಗೆಳೆಯರು ಮತ್ತೆ ತಮ್ಮ ವ್ಯಾಪಾರ ಆರಂಭಿಸುವಂತೆ ನೆರವಾಗಲು ಹಣ ಸಂಗ್ರಹ ಮಾಡುತ್ತಿದ್ದಾರೆ ಎಂದು ಈ ವರದಿ ಹೇಳುತ್ತದೆ.

"ಬಾಬ್ರಿ ಮಸೀದಿ ಧ್ವಂಸವಾದಾಗಲೂ ನಮ್ಮ ಪಟ್ಟಣ ಶಾಂತವಾಗಿತ್ತು. ಕಳೆದ ಮಂಗಳವಾರದಿಂದ ಏನಾಗುತ್ತಿದೆಯೋ ಅದು ಸರಿಯಾದ್ದಲ್ಲ. ಇದಕ್ಕೆ ಕೆಲವು ಹೊರಗಿನವರು ಮತ್ತು ಕೆಲವು ನಮ್ಮದೇ ಹುಡುಗರನ್ನು ದೂಷಿಸಬೇಕಾಗಿದೆ. ನಾವೀಗ ನಮ್ಮ ಹಿಂದೂ ನೆರೆಕರೆಯವರಿಗಾಗಿ ಹಣ ಸಂಗ್ರಹಿಸುತ್ತಿದ್ದೇವೆ" ಎಂದು ತನ್ನ ಗೆಳೆಯ ಅಜಿತ್‌ಪಾಲ್‌ನ ಜೊತೆಗೆ ಆತನ ಧ್ವಂಸಗೊಂಡ ಅಂಗಡಿಯೆದುರು ನಿಂತು ಮಹ್ಮದ್ ನೂರ್ ಇಸ್ಲಾಂ ಗಾಜಿ ಹೇಳುತ್ತಾನೆ–ಈತನೂ ಒಬ್ಬ ಸಣ್ಣ ವ್ಯಾಪಾರಿ.

"ಇದು ಕೇವಲ ಟೊಳ್ಳು ಭರವಸೆಯಲ್ಲ. ನಾವು ಎಷ್ಟು ಬೇಕೋ, ಅಷ್ಟು ,2ಲಕ್ಷವೋ, ಅಥವ 5ಲಕ್ಷವೋ ಸಂಗ್ರಹಿಸಿ ಕೊಡುತ್ತೇವೆ ಎಂದು ನಮ್ಮ ಹಿಂದೂ ಅಂಗಡಿಗಾರರಿಗೆ ಹೇಳಿದ್ದೇವೆ" ಎಂದು ಇನ್ನೊಬ್ಬ ಹಿರಿಯ ಎರ್ಷಾದ್ ಅಲಿ ಹೇಳುತ್ತಾನೆ.

ಈತನ ಗೆಳೆಯ ಬಿನಯ್ ಪಾಲ್ ಹೇಳುತ್ತಾನೆ–"ಎಲ್ಲರೂ ಮನೆ ಬಿಟ್ಟು ಓಡಿ ಹೋಗಿ ಜೀವ ಉಳಿಸಿಕೋ ಎಂದರು. ನೂರಾರು ಜನ ನನ್ನ ಮನೆ ಮುಂದೆ ಧಾವಿಸಿ ಬರುತ್ತಿದ್ದರು. ನಾನು ಎರ್ಷಾದ್‌ನನ್ನು ಕರೆದೆ. ಮನೆಯಲ್ಲೇ ಇರು ಎಂದ, ಓಡಿಬಂದು ನನ್ನ ಕುಟುಂಬವನ್ನು ಕಾಪಾಡಿದ". ನಿಜ. ನೆಲಮಹಡಿಯಲ್ಲಿದ್ದ ಅವನ ಔಷಧಿ ಅಂಗಡಿ ಧ್ವಂಸಗೊಂಡಿತು.

"ಒಂದಿಲ್ಲೊಂದು ರೀತಿಯಲ್ಲಿ ನಮ್ಮೆಲ್ಲರ ನಡುವೆ ಕೊಂಡಿಗಳಿವೆ. ಮತ್ತೆ ಅವರೆಲ್ಲ ವ್ಯಾಪಾರ ಶುರುಮಾಡುವಂತೆ ಸಾಧ್ಯವಾದ ಸಹಾಯವನ್ನೆಲ್ಲ ಮಾಡುತ್ತೇವೆ, ಮನೆ ರಿಪೇರಿಗೂ ನೆರವಾಗುತ್ತೇವೆ" ಎಂದು ಎರ್ಷಾದ್ ಹೇಳುತ್ತಾನೆ.

ಈ ಬಾರಿಯ ಗಲಭೆಯಲ್ಲಿ ನಷ್ಟ ಅನುಭವಿಸಿದವರು ಹೆಚ್ಚಾಗಿ ಹಿಂದೂಗಳೇ. ಆದರೂ ಮುಸ್ಲಿಮರಿಗೂ ಹಾನಿ ತಟ್ಟದೇ ಇರಲಿಲ್ಲ. ಹಾಜಿ ಮಹಮ್ಮದ್ ಅಲಿ ಗಾಜಿಯ ಔಷಧಿ ಅಂಗಡಿಗೂ ಬೆಂಕಿ ಹಾಕಿದರು. ಜಿಎಸ್‌ಟಿಗೆಂದು ಸಿದ್ಧಪಡಿಸಿಟ್ಟಿದ್ದ ಪೇಪರ್‌ಗಳು, ನಗದು ಎಲ್ಲವೂ ಸುಟ್ಟು ಹೋದವು.

"ಸದ್ಯ ಶಾಂತಿಯಿದೆ. ಅದರೆ ನಾವು ಹಿಂದು–ಮುಸ್ಲಿಂ ಜಂಟಿ ಗುಂಪುಗಳನ್ನು ರಚಿಸಿಕೊಂಡಿದ್ದೇವೆ. ರಾತ್ರಿ ಸುತ್ತಮುತ್ತ ಕಾವಲಿರುತ್ತೇವೆ, ಧಾರ್ಮಿಕ ಸ್ಥಳಗಳಲ್ಲೂ ಕಾವಲಿರುತ್ತೇವೆ, ಹೊರಗಿನರು ಯಾರನ್ನೂ ಬರಲು ಬಿಡುವುದಿಲ್ಲ. ಎರಡೂ ಸಮುದಾಯಗಳ ಹೊರಗಿನವರೇ ಗಲಭೆ ನಡೆಸಿದ್ದು" ಎನ್ನುತ್ತಾನೆ ಬಸಿಹರ್ಹಟ್‌ನ ವಾರ್ಡ್ ನಂ.14ರ ಕೌನ್ಸಿಲರ್ ಬಾಬು ಗಾಜಿ.

ಪೋಲಿಸರ ನಿಷ್ಕ್ರಿಯತೆಯನ್ನು ದೂಷಿಸುವಲ್ಲಿಯೂ ಹಿಂದುಗಳು ಮತ್ತು ಮುಸ್ಲಿಮರು ಒಂದಾಗಿದ್ದಾರೆ. "ನೂರಾರು ಮಂದಿ ಗಲಾಟೆ ಮಾಡುತ್ತ ಬರುತ್ತಿದ್ದಾಗ ಪೋಲಿಸರನ್ನು ಕರೆದೆವು. ಅವರು ಬರಲೇ ಇಲ್ಲ. ನಮ್ಮ ಹೆಂಗಸರೇ ನೂರಾರು ಸಂಖ್ಯೆಯಲ್ಲಿ ಒಟ್ಟಾಗಿ ಅವರನ್ನು ಎದುರಿಸಿ ಓಡಿಸಿದರು. ಪೋಲಿಸರು ಬಂದ ನಂತರ ನಮ್ಮ ಮೇಲೆಯೇ ಟಿಯರ್ ಗ್ಯಾಸ್ ಬಿಟ್ಟರು"ಎನ್ನುತ್ತಾನೆ ಶಾಮಲ್ ಬಿಸ್ವಾಸ್.

ಜಿಎಸ್‌ಟಿ–ವಿರೋಧಿ ಪ್ರತಿಭಟನೆಗಳು ದೇಶಾದ್ಯಂತ ಮುಂದುವರೆಯುತ್ತಿವೆ. ಮೂಲಭೂತವಾಗಿ ಪರೋಕ್ಷ ತೆರಿಗೆಯೇ ಆಗಿರುವ ಈ ಜಿಎಸ್‌ಟಿ ಎಲ್ಲರ ಹೊರೆಗಳನ್ನು ಹೆಚ್ಚಿಸುವುದು ಖಂಡಿತವಾದರೂ ಈಗ ವ್ಯಾಪಾರಿಗಳು ಮುಂಚೂಣಿಯಲ್ಲಿದ್ದಾರೆ. ಪ್ರಧಾನಿಗಳ ತವರು ರಾಜ್ಯ ಗುಜರಾತಿನ ಸೂರತ್‌ನಲ್ಲಿ ಜುಲೈ 8 ರಂದು ಒಂದು ಲಕ್ಷಕ್ಕೂ ಹೆಚ್ಚು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು ಎಂದು ವರದಿಯಾಗಿದೆ.



ಕಾರ್ಲ್ ಮಾರ್ಕ್ಸ್ 200

“ಮಾರ್ಕ್ಸ್ 200 ಮತ್ತು ಕ್ಯಾಪಿಟಲ್ 150”

ವಸಂತರಾಜ್ ಎನ್.ಕೆ.

ಮಾರ್ಕ್ಸ್ ಅವರ ಜನ್ಮದಿನ ಮೇ 5 1818 ಆಗಿದ್ದು, ಈ ಮೇ 5ರಿಂದ ಮುಂದಿನ ಮೇ 5ರ ವರೆಗೆ ಮಾರ್ಕ್ಸ್ ಅವರ ದ್ವಿಶತಾಬ್ದಿ ವರ್ಷ. ಸೆಪ್ಟೆಂಬರ್ 14, 1867 ಮಾರ್ಕ್ಸ್ ಅವರ ಮೇರುಗ್ರಂಥ ‘ದಾಸ್ ಕ್ಯಾಪಿಟಲ್’ ಮೊದಲ ಸಂಘುಟ ಪ್ರಕಟವಾದ ದಿನವಾಗಿದ್ದು ಈ ವರ್ಷ ಆ ಗಮನಾರ್ಹ ದಿನದ 150ನೇ ವಾರ್ಷಿಕ. ಇವೆರಡೂ ದಿನಗಳನ್ನು ನೆನಪಿಸಿಕೊಂಡು ಈ ವರ್ಷವನ್ನು ಸೂಕ್ತವಾಗಿ ಆಚರಿಸಲು, ಮಾರ್ಕ್ಸ್‌ವಾದದ ಪ್ರಸಾರದಲ್ಲಿ ಬಹಳ ಕಾಲ ನೆನಪಿಟ್ಟುಕೊಳ್ಳಬಹುದಾದ ದೀರ್ಘಕಾಲವಾಗಿ ಪರಿಣಾಮಕಾರಿಯಾದ ಏನಾದರೂ ಮಾಡಬೇಕಾದ್ದು ಅಗತ್ಯ. ಇಂದಿನ ಜಗತ್ತು ಹಾದು ಹೋಗುತ್ತಿರುವ ಬಿಕ್ಕಟ್ಟಿಗೆ ಪರಿಹಾರಕ್ಕೆ ಮಾರ್ಕ್ಸ್‌ನ ಬರಹಗಳತ್ತ (ಅದರಲ್ಲೂ ‘ದಾಸ್ ಕ್ಯಾಪಿಟಲ್’ನತ್ತ) ಬಂಡವಾಳಶಾಹಿ–ಪರ ಬುದ್ಧಿಜೀವಿಗಳೂ ಹೊರಳುತ್ತಿರುವ ಇಂದಿನ ಸಂದರ್ಭದಲ್ಲಿ ಇದು ತುರ್ತಿನ ಕೆಲಸ.

ಈಗ ಮಾರ್ಕ್ಸ್ ಅವರ ಕೆಲವೇ ಕೃತಿಗಳು ಕನ್ನಡದಲ್ಲಿ ಲಭ್ಯವಿದೆ. ಮಾರ್ಕ್ಸ್‌ವಾದದ ಸಾರ ಎನ್ನಬಹುದಾದ ಪ್ರಮುಖ ಕೃತಿಗಳೂ ಕನ್ನಡದಲ್ಲಿ ಲಭ್ಯವಿಲ್ಲ. ಅವನ್ನು ಕನ್ನಡದಲ್ಲಿ ತರುವುದು ಈ ವಿಶೇಷ ಸಂದರ್ಭದಲ್ಲಿ ಮಾಡಬೇಕಾದ ಕನಿಷ್ಟ ಕೆಲಸ. ಆದರೆ ಈ ಪ್ರಮುಖ ಕೃತಿಗಳನ್ನು (‘ದಾಸ್ ಕ್ಯಾಪಿಟಲ್’ ಮೊದಲ ಸಂಪುಟ ಸೇರಿದಂತೆ) ತರಲು ಮಾರ್ಕ್ಸ್‌ವಾದ ಬಲ್ಲ ಪರಿಣತ ಲೇಖಕರ/ಅನುವಾದಕರ ತಂಡಗಳು ಸೇರಿದಂತೆ ಹಲವು ಮತ್ತು ದೊಡ್ಡ ಪ್ರಮಾಣದ ಸಂಪನ್ಮೂಲಗಳ ಅಗತ್ಯ ಇದೆ. ಅನುವಾದಕ್ಕೆ ಮೊದಲು ಪಾರಿಭಾಷಿಕ ಶಬ್ದಕೋಶ ರಚನೆ, ಅನುವಾದ, ಅನುವಾದದ ನಿಖರತೆ ಓದಿಸಿಕೊಂಡು ಹೋಗುವ ಗುಣಗಳನ್ನು ಪರೀಕ್ಷಿಸುವ, ಪ್ರೂಫ್ ರೀಡಿಂಗ್ ಮಾಡುವ ತಂಡಗಳು ಬೇಕಾಗುತ್ತದೆ.

ಇಂದಿನ ಸಂದರ್ಭದಲ್ಲಿ ಪ್ರಿಂಟ್ ಪುಸ್ತಕ ಅಲ್ಲದೆ ಇಲೆಕ್ಟ್ರಾನಿಕ್ ರೂಪದಲ್ಲೂ ಇದನ್ನು ಪ್ರಕಟಿಸುವ ಅನಿವಾರ್ಯತೆ ಇದೆ. ಈ ಪುಸ್ತಕಗಳು ಕಾಲೇಜು, ವಿ.ವಿ., ಲೈಬ್ರರಿಗಳನ್ನು ತಲುಪುವಂತೆ ಮಾರಾಟ, ಪ್ರಚಾರಗಳ ವಿಶೇಷ ವ್ಯವಸ್ಥೆಯ ಅಗತ್ಯವೂ ಇದೆ. ಇದು ಒಂದು ಪ್ರಕಾಶನ ಸಂಸ್ಥೆಯ ಅಳವಿಗೆ ಮೀರಿದ್ದು. ಹಲವು ಎಡ/ಪ್ರಗತಿಪರ ಪ್ರಕಾಶನ ಸಂಸ್ಥೆಗಳು ಈ ಕೆಲಸದಲ್ಲಿ ಕೈಜೋಡಿಸದೆ ಈ ಕೆಲಸ ಕಷ್ಟಸಾಧ್ಯವಿದೆ. ಅದೇ ರೀತಿಯಲ್ಲಿ ಮಾರ್ಕ್ಸ್‌ವಾದ ಬಲ್ಲ ಎಲ್ಲ ಪರಿಣತ ಕನ್ನಡ ಲೇಖಕ/ಅನುವಾದಕರನ್ನು ಇದಕ್ಕಾಗಿ ಅಣಿ ನೆರೆಸದೆ ಸಹ ಈ ಕೆಲಸ ಕಷ್ಟಸಾಧ್ಯ. ಆದ್ದರಿಂದ ಈ ಇಡೀ ಕೆಲಸವನ್ನು ಒಂದು ಪ್ರಾಜೆಕ್ಟ್ ತರಹ ನಿರ್ವಹಿಸಬೇಕಾಗಿದ. ಈ ಪ್ರಾಜೆಕ್ಟಿನಡಿಯಲ್ಲಿ ಬರುವ ಪುಸ್ತಕಗಳು ಬರಿಯ ಬಿಡಿ ಪುಸ್ತಕಗಳಾಗಿರದೆ, ಮುಂದಿನ ಪೀಳಿಗೆಗೆ ಮಾರ್ಕ್ಸ್‌ವಾದದ ಪ್ರಮುಖ ಸಾರ ಕೊಡುವ ಪುಸ್ತಕಗಳ ಸಮಗ್ರ ಸಂಪುಟವಾಗಿರಬೇಕು.

ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಎಡಪಂಥೀಯ/ಮಾರ್ಕ್ಸ್‌ವಾದಿ/ಪ್ರಗತಿಪರ ಪುಸ್ತಕಗಳ ಪ್ರಮುಖ ಪ್ರಕಾಶಕರಾದ ನವಕರ್ನಾಟಕ ಮತು ಕ್ರಿಯಾ ಸೇರಿ ಈ ಪ್ರಾಜೆಕ್ಟನ್ನು ಜಂಟಿಯಾಗಿ ಸಾಕಾರಗೊಳಿಸಲು ನಿರ್ಧರಿಸಿವೆ ಎಂಬುದು ಸಂತೋಷದ ಸಂಗತಿ.

ಈ ಪ್ರಾಜೆಕ್ಟಿನಲ್ಲಿ ಈ ಕೆಳಗಿನ ಮಾರ್ಕ್ಸ್ ಕೃತಿಗಳನ್ನು ಪ್ರಕಟಿಸಲು ನಿರ್ಧರಿಸಲಾಗಿದೆ.

Capital Vol. I
Economic and Philosophic Manuscripts of 1844
The Eighteenth Brumaire of Louis Bonaparte
Marx on India
The Civil War in France (Paris Commune) 1871
Contribution to critique of political economy
The Poverty of Philosophy

ಇವಲ್ಲದೆ ಕೆಲವು ನಿರ್ದಿಷ್ಟ ವಿಷಯಗಳ (ಉದಾ: ಪರಿಸರ, ಸಂಸ್ಕೃತಿ) ಬಗ್ಗೆ ಮಾರ್ಕ್ಸ್ ಬರಹಗಳ ಆಯ್ದ ಒಂದು ಪುಸ್ತಕವನ್ನೂ ಪ್ರಕಟಿಸಲಾಗುತ್ತದೆ. ವಿದ್ಯಾರ್ಥಿ–ಯುವಜನರಿಗೆ ಉದ್ದೇಶಿತವಾದ ಮಾರ್ಕ್ಸ್ ಓದಿಗೆ ಪ್ರವೇಶಿಕೆಯಾಗುವ (ಸಾಧ್ಯವಿದ್ದರೆ ಕಾಮಿಕ್ಸ್ ರೂಪದಲ್ಲಿ) ಪ್ರಕಟಿಸಲೂ ನಿರ್ದರಿಸಲಾಗಿದೆ.

“ಮಾರ್ಕ್ಸ್ 200 ಕ್ಯಾಪಿಟಲ್ 150” ಸ್ಮರಣಾರ್ಥ ಪುಸ್ತಕ ಪ್ರಕಟಣೆ ಅಲ್ಲದೆ, ಇಡೀ ವರ್ಷ ವಿಶೇಷ ಉಪನ್ಯಾಸಗಳೂ ಮತ್ತು ವಿಚಾರ ಸಂಕಿರಣಗಳನ್ನು ಸ್ವತಂತ್ರವಾಗಿ ಅಥವಾ ಇತರ ಸಂಸ್ಥೆಗಳ ಜತೆ ಸೇರಿ ಏರ್ಪಡಿಸುವುದು. ಇಂತಹ ಸಂದರ್ಭಗಳನ್ನು ಪ್ರಕಟಣೆಗೆ ಸಿದ್ಧವಾದ ಪುಸ್ತಕಗಳನ್ನು ಬಿಡುಗಡೆ ಮಾಡುವುದು ಎಂದೂ ನಿರ್ಧರಿಸಲಾಗಿದೆ.

ಪುಸ್ತಕಗಳ ಪ್ರಸಾರ ಹೆಚ್ಚಿಸಲು ಪ್ರಕಟಣಾ–ಪೂರ್ವ ವಿಶೇಷ ರಿಯಾಯಿತಿ ಕೂಪನುಗಳನ್ನು ಮಾಡಲಾಗುವುದು. ಪುಸ್ತಕಗಳ ಬೆಲೆ ಕಡಿಮೆ ಮಾಡಲು ಪ್ರಾಜೆಕ್ಟಿನ ಉದ್ದೇಶಗಳಲ್ಲಿ ಆಸಕ್ತ ವ್ಯಕ್ತಿ/ಸಂಘಟನೆಗಳಿಂದ ಸಹಾಯಧನ ಸಂಗ್ರಹಿಸಲಾಗುವುದು.

ಮೊದಲ ಹೆಜ್ಜೆಯಾಗಿ ಈ ಪ್ರಾಜೆಕ್ಟಿನಲ್ಲಿ ಭಾಗವಹಿಸಬಲ್ಲ ಅಥವಾ ಈ ಬಗ್ಗೆ ಸಲಹೆ/ಸೂಚನೆ ನೀಡಬಲ್ಲ ಪರಿಣತರ, ಲೇಖಕರ, ಅನುವಾದಕರ ಒಂದು ಸಭೆಯನ್ನು ಜೂನ್ 25ರಂದು ನಡೆಸಲಾಯಿತು. ಈ ಸಭೆಯಲ್ಲಿ 40 ಜನ ಹಾಜರಿದ್ದರು. ಸಭೆಯಲ್ಲಿ ಹಾಜರಿದ್ದವರಲ್ಲದೆ 5 ಜನ ಈಮೇಲ್/ಫೋನ್ ಮೂಲಕ ಪ್ರಾಜೆಕ್ಟಿನಲ್ಲಿ ಪಾಲುಗೊಳ್ಳುವ ಇಂಗಿತ ವ್ಯಕ್ತಪಡಿಸಿದ್ದಾರೆ. ದೂರವಾಣಿಯ ಮೂಲಕ ಸಂಪರ್ಕಿಸಿದಾಗ ಇನ್ನೂ 10 ಜನ ಅನುವಾದ ಕಾರ್ಯದಲ್ಲಿ ನೆರವಾಗುವುದಾಗಿ ತಿಳಿಸಿದ್ದಾರೆ. ಅವರಲ್ಲಿ ಕೆಲವರು ನಿರ್ದಿಷ್ಟ ಜವಾಬ್ದಾರಿ ವಹಿಸಿಕೊಳ್ಳುವ ಭರವಸೆ ನೀಡಿದ್ದಾರೆ.

ಜೂನ್ 25ರ ಸಮಾಲೋಚನೆ ಸಭೆಯಲ್ಲಿ ಮತ್ತು ಆ ಮೇಲಿನ ಚರ್ಚೆಗಳ ಆಧಾರದ ಮೇಲೆ ಪ್ರಾಜೆಕ್ಟಿನ ಸ್ಥೂಲ ಯೋಜನೆ, ಕಾರ್ಯವಿಧಾನ ಮತ್ತು ಆರಂಭಿಕ ಕೆಲಸದ ಹಂಚಿಕೆಯೊಂದನ್ನು ತಯಾರಿಸಲಾಗಿದೆ. ಅನುವಾದದ ಯೋಜನೆ, ಕಾರ್ಯವಿಧಾನದ ಬಗ್ಗೆ ಚರ್ಚಿಸಿ ಅಂತಿಮಗೊಳಿಸಲು ಇದೇ ಜುಲೈ 29 ರಂದು ಬೆಂಗಳೂರಿನಲ್ಲಿ ಒಂದು ಕಾರ್ಯಾಗಾರ ನಡೆಸಲಾಗುತ್ತಿದೆ. ●

ಕೆಂಪು ನೆಲದ ಮಾತು...........

ಪುಟ 16 ರಿಂದ

ಸಾಧನೆಯನ್ನು ಮಾಡಿದೆ.

ಆದರೆ ನಾವು ಈ ಅಭಿವೃದ್ಧಿಯ ಮಾದರಿಯನ್ನು ಕರ್ನಾಟಕ, ಗುಜರಾತ್ ನಂತಹ ಬೃಹತ್ ಆದಾಯ ಹೊಂದಿರುವ ರಾಜ್ಯಗಳಿಗೆ ಹೋಲಿಸಿ ನೋಡಲಾಗದು. ಏಕೆಂದರೆ ಇಂದಿಗೂ ತ್ರಿಪುರಾ ಸರ್ಕಾರ ಅಲ್ಲಿನ ಜನರ ಮೇಲೆ ಮನೆ ಕಂದಾಯವನ್ನು ವಿಧಿಸಿಲ್ಲ. .! ಅದ–ಕ್ಕೆ ಬದಲಾಗಿ ಅಲ್ಲಿರುವ ಲಭ್ಯ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡು ಸಾಮುದಾಯಿಕ ನೆಲೆಯ ಅಭಿವೃದ್ದಿಯ (Community centric Development module) ಮಾದರಿಯನ್ನು ತ್ರಿಪುರ ರಾಜಕೀಯ ನಾಯಕತ್ವ ರೂಪಿಸಿಕೊಟ್ಟಿದೆ ಎಂಬ ಅರ್ಥದಲ್ಲಿ ವಿಶ್ಲೇಷಣೆಯನ್ನು ಮಾಡಬಹುದು ಅನ್ನಿಸುತ್ತದೆ.

ಉದಾಹರಣೆಯಾಗಿ ನೋಡುವುದಾರೆ, ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ತ್ರಿಪುರಾದಂತಹ ಸಂಪನ್ಮೂಲ ಕೊರತೆ ಎದುರಿಸುತ್ತಿರುವ ರಾಜ್ಯಗಳ ಪಾಲಿಗೆ ಮಹತ್ವದ ಸಂಪನ್ಮೂಲ. ಇದನ್ನು ಬಳಸಿಕೊಂಡು ಇಲ್ಲಿನ ಸರ್ಕಾರ ಆ ಯೋಜನೆಯ ಭಾಗವಾಗಿ ಕೆಲಸಗಾರರಿಗೆ ನೂರು ಮಾನವ ದಿನಗಳ ಕೆಲಸವನ್ನು ಕೊಡುವುದಕ್ಕಷ್ಟೆ ಸೀಮಿತವಾಗದೆ ಆ ನೂರು ಮಾನವ ದಿನಗಳನ್ನು ಬಳಸಿಕೊಂಡು ಉಳಿದ 265 ದಿನಗಳು ಆ ಒಟ್ಟು ಕುಟುಂಬದ ಬದುಕಿಗೆ ಆಧಾರ ಮಾಡಿಕೊಳ್ಳುವ ಯೋಜನೆಯನ್ನು ರೂಪಿಸಿದೆ.

ಅದರ ಭಾಗವಾಗಿ ಇಂದು ತ್ರಿಪುರಾದ ಗ್ರಾಮೀಣ ಭಾಗದ ಪ್ರತಿ ಮನೆಯಲ್ಲಿಯೂ ಮೀನು ಸಾಕಾಣಿಕೆ ಹೊಂಡಗಳನ್ನು ನಿರ್ಮಿಸಿಕೊಟ್ಟಿದೆ. ತ್ರಿಪುರಾದಲ್ಲಿ ಬಂಗಾಳಿಗಳು ಬಹುಸಂಖ್ಯೆಯಲ್ಲಿ ಇರುವುದರಿಂದ ಮೀನು ಅತ್ಯಂತ ಮಹತ್ವದ ಆಹಾರವಾಗಿದೆ. ಆದ್ದರಿಂದ ಪ್ರತಿ ಮನೆಯ ಮುಂದಿನ ಜಾಗದಲ್ಲಿ ಮೀನು ಸಾಕಾಣಿಕೆ ಹೊಂಡಗಳನ್ನು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ದೊರೆಯುವ ನೂರು ಮಾನವ ದಿನಗಳಲ್ಲಿ ನಿರ್ಮಿಸುವ ಯೋಜನೆ ರೂಪಿಸಿರುವ ಸರ್ಕಾರ ಅದರಲ್ಲಿ ಭಾಗಶಃ ಯಶಸ್ವಿಯಾಗಿದೆ.

ಇದರ ಆಚೆಗೆ ಅಗರ್ತಲಾದ ನಗರ ಸಭೆ ನಗರದ ಬಡವರಿಗಾಗಿ ವಾರ್ಷಿಕ 60 ದಿನಗಳ ಉದ್ಯೋಗ ಖಾತರಿ ಯೋಜನೆಯೊಂದನ್ನು ರೂಪಿಸಿದೆ. ಈ ಎಲ್ಲಾ ಸಂಗತಿಗಳನ್ನು ತ್ರಿಪುರಾ ರಾಜಕೀಯ ನಾಯಕತ್ವ ಹೇಗೆ ಅಭಿವೃದ್ದಿಯನ್ನು ಜನಕೇಂದ್ರಿತವಾಗಿ ಮತ್ತು ಸುಸ್ಥಿರ ಮಾದರಿಯಲ್ಲಿ ರೂಪಿಸಿದೆ ಎಂಬುದಕ್ಕೆ ಉದಾಹರಣೆಯಾಗಿ ಕೊಡಬಹುದಾಗಿದೆ.

ಈ ರೀತಿಯ ಹಲವಾರು ಯೋಜನೆಗಳು ಇಲ್ಲಿನ ಸರ್ಕಾರ ರೂಪಿಸಿದೆ ಸಾಮುದಾಯಿಕ ಕೃಷಿ ಮತ್ತು ಸಹಕಾರಿ ಸಂಘಗಳು ಅವುಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇದಲ್ಲದೆ ಇಲ್ಲಿನ ಸರ್ಕಾರ 58 ವರ್ಷ ದಾಟಿದ ಸೈಕಲ್ ತಳ್ಳುವವನು, ರಿಕ್ಷಾ ಒಡಿಸುವವನು, ಕೂಲಿ, ವಿಧವೆ, ಪರಿತ್ಯಕ್ತೆ ಇತ್ಯಾದಿ ಎಲ್ಲಾ ವರ್ಗದ ಜನರಿಗೆ ಒಟ್ಟು 33 ವಿವಿಧ ಮಾದರಿಯ ಸಾಮಾಜಿಕ ಪಿಂಚಣಿ ವ್ಯವಸ್ಥೆಯನ್ನು ರೂಪಿಸಿದೆ. ಪ್ರತಿ ಒಂದು ಕಿಲೋಮಿಟರ್ ದೂರಕ್ಕೆ ಸುಸಜ್ಜಿತ ಸರ್ಕಾರಿ ಶಾಲೆಗಳನ್ನು ನಿರ್ಮಿಸಿದೆ, ಇಂದಿಗೂ ಇಲ್ಲಿನ ಬಹುಪಾಲು ಜನರು ಸರ್ಕಾರಿ ಆರೋಗ್ಯ ವ್ಯವಸ್ಥೆಯನ್ನೇ ಅವಲಂಬಿಸಿದ್ದಾರೆ. ಈ ಎಲ್ಲಾ ಒಟ್ಟು ಪ್ರಯತ್ನದ ಭಾಗವಾಗಿ ಇಂದು ತ್ರಿಪುರಾ ಶೇ 97.7 ರಷ್ಟು ಸಾಕ್ಷರತೆಯನ್ನು ಸಾಧಿಸಿದೆ. ದೇಶದ ರಾಜ್ಯಗಳ ಮಾನವ ಅಭಿವೃದ್ದಿ ಸೂಚ್ಯಂಕದಲ್ಲಿ 6ನೇ ಸ್ಥಾನದಲ್ಲಿದೆ. ಎಲ್ಲಕ್ಕಿಂತ ಮುಖ್ಯವಾಗಿ ಜನರು ಸ್ವಾವಲಂಬಿಗಳಾಗಿ ಬದುಕನ್ನು ಕಂಡುಕೊಳ್ಳುತ್ತಿದ್ದಾರೆ.

ಮೇಲುನೋಟಕ್ಕೆ ಒಟ್ಟು ತ್ರಿಪುರಾದ ಅಭಿವೃದ್ದಿಯ ಮಾದರಿ ಇಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಅಂಶಗಳಲ್ಲಿ ಸಮುದಾಯಗಳ ನಡುವೆ ಹೆಚ್ಚು ಅಂತರ ಉಳಿಸಿದಂತೆ ಕಾಣುವುದಿಲ್ಲ ಇದಕ್ಕೆ ಕಾರಣ ರಾಜಕೀಯ ಬದ್ಧತೆ ಮತ್ತು ಸುಸ್ಥಿರ ಅಭಿವೃದ್ದಿಯ ಮಾದರಿಯ ಅಳವಡಿಕೆ ಅನ್ನಿಸುತ್ತದೆ. ಇದರ ಪರಿಣಾಮವಾಗಿ ಇಲ್ಲಿನ ಸಮಾಜದಲ್ಲಿನ ಸಂಪನ್ಮೂಲ ಹಂಚಿಕೊಂಡು ಉಣ್ಣುವ ಮಾದರಿಯೊಂದು ಕಾಣುತ್ತದೆ.


ಎಲ್ಲಕ್ಕಿಂತ ಹೆಚ್ಚಾಗಿ ಚಾರಿತ್ರಿಕವಾಗಿ ರೂಪುಗೊಂಡ ರಾಜಕೀಯ ವೈಚಾರಿಕತೆ ಇಲ್ಲಿನ ಜನರ ಪ್ರಜ್ಞೆಯನ್ನು ಬಹಳಷ್ಟು ಪ್ರಭಾವಿಸಿದೆ. ಇದರ ಅರ್ಥ ತ್ರಿಪುರಾದಲ್ಲಿ ಎಲ್ಲವೂ ಸುವ್ಯವಸ್ಥಿತವಾಗಿದೆ, ಆಳುವವರಿಗೆ ಜನರು ಯಾವ ಪ್ರಶ್ನೆಯನ್ನು ಕೇಳುತ್ತಿಲ್ಲ, ತ್ರಿಪುರಾ ಭೂಮಿಯ ಮೇಲಿನ ಸ್ವರ್ಗ ಎಂಬ ಪ್ರತಿಮೆಗಳನ್ನು ನಾನು ಕಟ್ಟುತ್ತಿಲ್ಲ ಅಥವಾ ಹಾಗೆ ವಾದಿಸುತ್ತಿಲ್ಲ..!

ಎಲ್ಲಾ ರಾಜ್ಯಗಳಂತೆ ಇಲ್ಲಿನ ಜನರೂ ತ್ರಿಪುರಾದ ರಾಜಕೀಯ ನಾಯಕತ್ವದ ಕುರಿತು ಬೇಸರ ಹೊಂದಿದ್ದಾರೆ. ಅದರಲ್ಲಿಯೂ ಯುವ ಸಮುದಾಯ ಸಾಕಷ್ಟು ಎಡಪಕ್ಷಗಳ ವಿರೋಧಿ ಧೋರಣೆಯನ್ನು ಪ್ರದರ್ಶಿಸುತ್ತಿದೆ. ಒಂದು ಅಂದಾಜಿನ ಪ್ರಕಾರ ತ್ರಿಪುರಾದಲ್ಲಿ ಶೇಕಡಾ 38% ರಷ್ಟು ಆಡಳಿತ ವಿರೋಧಿ ಮನೋಭೂಮಿಕೆಯ ಜನರಿದ್ದಾರೆ ಎನ್ನಲಾಗುತ್ತಿದೆ.

ಆದರೆ ಈ ವಿರೋಧ ಕೇವಲ ಧರ್ಮ, ಜಾತಿ, ಜನಾಂಗ ಇತ್ಯಾದಿ ತೆಳು ಸಾಮಾಜಿಕ ಅಸ್ಮಿತೆಗಳ ಆಧಾರದಲ್ಲಿ ವಿಂಗಡಣೆಗೊಂಡ ವಿರೋಧವಾಗದೆ ಒಂದು ರಾಜ್ಯ ನಿರ್ವಹಿಸಲು ಸೋತಿರುವ ಉದ್ಯೋಗ, ಆಹಾರ, ವೈದ್ಯಕೀಯ ಸೌಲಭ್ಯ, ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ವಿರೋಧಗಳಾಗಿವೆ.

ಈ ಅರ್ಥದಲ್ಲಿ ಇಲ್ಲಿನ ಜನ ತಮ್ಮ ರಾಜಕೀಯ ನಾಯಕತ್ವಕ್ಕೆ ಸಕಾರಾತ್ಮಕ ಮತ್ತು ಸ್ವ–ವಿಮರ್ಶಾತ್ಮಕ ಪ್ರಶ್ನೆಗಳನ್ನು ಮುಂದಿಡುತ್ತಿದ್ದಾರೆ. ಯುವಜನರ ಈ ಪ್ರಜ್ಞೆ ಸಹ ಇಲ್ಲಿನ ಎಡರಂಗ ರೂಪಿಸಿರುವ ರಾಜಕೀಯ ಅರಿವಿನ ಭಾಗವಾಗಿರುವುದು ನಾವು ಗಮನಿಸಬೇಕಾದ ಸಂಗತಿಯಾಗಿದೆ.

ಒಟ್ಟಾರೆ ಕೆಂಪು ನೆಲದ ರಾಜಕೀಯ ಮತ್ತು ಸಾಮಾಜಿಕ ರಚನೆ ಸಾಕಷ್ಟು ಮಿತಿಗಳ ನಡುವೆ ಹಲವಾರು ಸಕಾರಾತ್ಮಕ ಸಂಗತಿಗಳನ್ನು, ರಾಜಕೀಯ ಪ್ರಬುದ್ಧತೆಯನ್ನು, ಜನಚಳುವಳಿ ರೂಪಿಸಿರುವ ಸಾಮಾಜಿಕ/ಆರ್ಥಿಕ ರಚನೆಗಳ ಕುರಿತು ಸಾಕಷ್ಟು ಆಸಕ್ತಿಕರ ಸಂಗತಿಗಳನ್ನು, ನಮ್ಮ ಸಾಮಾಜಿಕ ಸಂಧರ್ಭಕ್ಕೆ ಪರೀಕ್ಷೆಗೆ ಒಡ್ಡಿಕೊಳ್ಳಬೇಕಾದ ಪ್ರಶ್ನೆಗಳನ್ನು ನನ್ನಲ್ಲಿ ರೂಪಿಸಿದೆ. ●



‘ಅವರನ್ನು ಮುಟ್ಟಿದರೆ, ಅಷ್ಟೇ!’
‘ಯಾಕೆ, ಅವರ ಬಾಡಿಯಲ್ಲಿ
ಹೈ ವೋಲ್ಟೇಜ್ ಕರಂಟ್ ಉಂಟ?
ಹಾಗಾದರೆ ರಾಜ್ಯ ಸರಕಾರಕ್ಕೆ ಮಾರಬಹುದಲ್ಲ..
ಒಳ್ಳೆ ರೇಟು ಕೊಡ್ತಾರಂತೆ.
ಮಳೆಯಿಲ್ಲದೆ ಸರಕಾರಕ್ಕೆ ಫಜೀತಿಯಾಗಿದೆಯಂತೆ!’

ಪಿ. ಮಹಮ್ಮದ್ ಕಾರ್ಟೂನಿಸ್ಟ್

JANASHAKTHI KANNADA VARA PATRIKE JULY 17-23 2017 Price : Rs. 10/- Date of Publication : 14 JULY 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಕೆಂಪು ನೆಲದ ಮಾತು. .

– ಡಾ. ಕಿರಣ್ ಎಂ ಗಾಜನೂರು.



ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಹಂಪಿ ವಿ.ವಿ. ಭೇಟಿ ನೀಡಿದಾಗ ಅವರ "ತ್ರಿಪುರಾದ ರಾಜಕೀಯ ಅರ್ಥಶಾಸ್ತ್ರ" ಉಪನ್ಯಾಸದಿಂದ ಪ್ರಭಾವಿತರಾದ ಪ್ರೊ, ಚಂದ್ರ ಪೂಜಾರಿ ಮತ್ತು ಪ್ರೊ. ರಹಮತ್ ತರೀಕೆರೆ ಅವರು ತ್ರಿಪುರಾದ ಅಧ್ಯಯನ ಪ್ರವಾಸ ಕೈಗೊಳ್ಳುವ ನಿರ್ಧಾರ ಮಾಡಿದರು. ಅವರು ಸಂಘಟಿಸಿ, ಜೂನ್ ನಲ್ಲಿ ತ್ರಿಪುರಾಕ್ಕೆ ಭೇಟಿ ನೀಡಿದ ಅಧ್ಯಯನ ತಂಡದಲ್ಲಿ ಅವರ ಜತೆಗೆ ಪ್ರಭಾಕರ ಎ.ಎಸ್., ಅರುಣ್ ಜೋಳದ ಕೂಡ್ಲಿಗಿ, ಕಿರಣ್ ಗಾಜನೂರು, ನೀಲಾ ಕೆ., ಪ್ರಭು ಖಾನಾಪುರೆ, ಮೀನಾಕ್ಷಿ ಬಾಳಿ, ಎಸ್.ವೈ. ಗುರುಶಾಂತ್ ಅವರುಗಳು ಇದ್ದರು. ಅಧ್ಯಯನ ತಂಡ ತ್ರಿಪುರಾ ಪ್ರವಾಸ ಮಾಡುತ್ತಿದ್ದಂತೆ, ಪ್ರಮುಖವಾಗಿ ಅರುಣ್ ಮತ್ತು ಕಿರಣ್ ಅವರ ಉತ್ಸಾಹದಿಂದ ಅವರ ಫೇಸ್ ಬುಕ್ ಸ್ನೇಹಿತರೆಲ್ಲರಿಗೂ ತಂಡದ ಒಳನೋಟಗಳಿಂದ ಕೂಡಿದ ಕಮೆಂಟುಗಳು, ಚಿತ್ರ, ಲೈವ್ ವಿಡಿಯೋ ಮೂಲಕ ತಾವೇ ತಂಡದ ಭಾಗವಾದ ಅನುಭವ. ಇಲ್ಲಿ ಕಿರಣ್ 'ಜನಶಕ್ತಿ'ಗೆ ವಿಶೇಷವಾಗಿ ಬರೆದ ಅವರ ಸ್ಥೂಲ ವಿಶ್ಲೇಷಣೆಯ ಲೇಖನದ ಜತೆ ಅವರ ಕೆಲವು ಫೇಸ್ ಬುಕ್ ಕಮೆಂಟು, ಚಿತ್ರಗಳೂ ಇವೆ. ತಂಡ ತ್ರಿಪುರಾದ ಅಧ್ಯಯನ ಪ್ರವಾಸದ ವಿವರಗಳನ್ನು ಒಳಗೊಂಡ ಪುಸ್ತಕ ಪ್ರಕಟಿಸುವುದಾಗಿ ಹೇಳಿದ್ದಾರೆ. ಪುಸ್ತಕಕ್ಕೆ ಕಾಯುತ್ತಿರುವಾಗಲೇ, ತಂಡದ ಇತರ ಸದಸ್ಯರ ಲೇಖನಗಳನ್ನೂ 'ಜನಶಕ್ತಿ'ಯಲ್ಲಿ ನಿರೀಕ್ಷಿಸಿ.

ತ್ರಿಪುರ ಎಂಬ ಸಣ್ಣ ರಾಜ್ಯದ ಹೆಸರು. ಭಾರತದ ರಾಜಕಾರಣದಲ್ಲಿ ಆಗಾಗ ಕೇಳಿ ಬರುತ್ತಿರುತ್ತದೆ. ಅದಕ್ಕೆ ಕಾರಣ ಕಳೆದ ಮೂರು ದಶಕಗಳ ನಿರಂತರವಾದ ಎಡರಂಗದ ಆಡಳಿತ ಅಲ್ಲಿ ರೂಪಿಸಲು ಪ್ರಯತ್ನಿಸಿರುವ ರಾಜಕೀಯ ಬದಲಾವಣೆಯ ಪರ್ವ (Political Transformation) ಎಂದು ಹಲವಾರು ರಾಜಕೀಯ ಶಾಸ್ತ್ರಜ್ಞರು ಗುರುತಿಸುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ರಾಜಕೀಯ ವಿಜ್ಞಾನಿಯೂ ತ್ರಿಪುರ ನೆಲವನ್ನು ಒಮ್ಮೆ ತಾಕಬೇಕು. ಅಲ್ಲಿನ ಸಮಾಜೋ-ಆರ್ಥಿಕ ರಚನೆಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕು. ಸಾಧ್ಯವಾದರೆ ಆ ನೆಲದ ಜನರೊಟ್ಟಿಗೆ ಬೆರೆಯಬೇಕು ಎಂಬ ಅಕಾಂಕ್ಷೆ ಹೊಂದಿರುತ್ತಾನೆ.

ನನ್ನ ಅದೃಷ್ಟಕ್ಕೆ ಕರ್ನಾಟಕದಿಂದ "ತ್ರಿಪುರ ಅಧ್ಯಯನ ತಂಡದ" ಭಾಗವಾಗುವ ಅವಕಾಶ ಪ್ರೊ. ರಹಮತ್ ತರೀಕೆರೆ ಮತ್ತು ಪ್ರೊ. ಚಂದ್ರ ಪೂಜಾರಿ ಒದಗಿಸಿದರು. ಈ ಕಾರಣಕ್ಕಾಗಿ ನಾನು ಇವರಿಗೆ ಮೊದಲು ಧನ್ಯವಾದ ತಿಳಿಸುತ್ತೇನೆ.

2011ರ ಜನಸಂಖ್ಯಾ ವರದಿಯ ಪ್ರಕಾರ ಈ ರಾಜ್ಯದ ಒಟ್ಟು ಜನಸಂಖ್ಯೆ 36.7 ಲಕ್ಷ. ತನ್ನ ಗಡಿಯ ಮೂರು ಭಾಗಗಳನ್ನು ಬಾಂಗ್ಲಾ ದೇಶದೊಂದಿಗೆ ಹಂಚಿಕೊಂಡಿರುವ ಈ ಪುಟ್ಟ ಈಶಾನ್ಯ ರಾಜ್ಯ ಕೇವಲ 10,491 ಕಿಲೋಮಿಟರ್ ವಿಸ್ತೀರ್ಣ ಹೊಂದಿದೆ. ಗಾತ್ರ, ಜನಸಂಖ್ಯೆ ಮತ್ತು ವ್ಯಾಪ್ತಿಯ ದೃಷ್ಟಿಯಿಂದ ಅತ್ಯಂತ ಪುಟ್ಟದಾಗಿ ಕಾಣುವ ಈ ರಾಜ್ಯ ತನ್ನ ಚರಿತ್ರೆಯ ದೃಷ್ಟಿಯಿಂದ ಸಮಕಾಲೀನ ಭಾರತಕ್ಕೆ ಮಾದರಿ ಆಗಬಹುದಾದ ಮಹತ್ವದ ಅಂಶಗಳನ್ನು ಪ್ರತಿಪಾದಿಸುತ್ತಿದೆ.

ಸತತವಾಗಿ ರಾಜವಂಶ, ಕೇಂದ್ರಿಯ ಆಡಳಿತ, ಬುಡಕಟ್ಟು ಮತ್ತು ಬುಡಕ-ಟ್ಟೇತರ ಸಮುದಾಯಗಳ ನಡುವಿನ ಸಂಘರ್ಷದ ಚರಿತ್ರೆಯನ್ನು ಕಂಡಿರುವ ತ್ರಿಪುರಾ ನಾಗರೀಕ ಅಂತಿಮವಾಗಿ ಅಹಿಂಸೆ ಮತ್ತು ಉತ್ತಮ ಆಡಳಿತ ನೀಡುವ ರಾಜಕೀಯ ಆಯ್ಕೆಯನ್ನು ತನ್ನದಾಗಿಸಿಕೊಂಡಿದ್ದಾನೆ. ಈ ಕಾರಣ-ಕ್ಕಾಗಿಯೇ ಕಳೆದ ಮೂರು ದಶಕಗಳಿಂದ ಇಲ್ಲಿ ಎಡರಂಗ ರಾಜ್ಯಾಧಿಕಾರವನ್ನು ಹಿಡಿದಿದೆ ಮತ್ತು ಭಾರತದ ಒಟ್ಟು ರಾಜಕೀಯ ವಾತಾವರಣಕ್ಕಿಂತ ಭಿನ್ನವಾದ ಸಂಗತಿಗಳನ್ನು, ಮಾದರಿಗಳನ್ನು ತ್ರಿಪುರಾದಲ್ಲಿ ರೂಪಿಸಿದೆ.

ನಮ್ಮ ಏಳು ದಿನಗಳ ಅಲ್ಪಾವಧಿಯ ಪ್ರವಾಸದಲ್ಲಿ ನಾನು ಗ್ರಹಿಸಿದಂತೆ ಇಲ್ಲಿನ ಸರ್ಕಾರ ನಾಲ್ಕು ಮುಖ್ಯವಾದ ಅಂಶಗಳ ಮೇಲೆ ಆಡಳಿತವನ್ನು ನಿರೂಪಿಸಿಕೊಂಡು ಬರುತ್ತಿದೆ. ಅವುಗಳು ಈ ಕೆಳಗಿನಂತಿವೆ.

1) ಸೈದ್ಧಾಂತಿಕ ಬದ್ಧತೆಯುಳ್ಳ ಸರ್ಕಾರ
2) ಸುಸ್ಥಿರ ಅಭಿವೃದ್ಧಿ ಮಾದರಿಯ ಅಳವಡಿಕೆ
3) ಸಾಮುದಾಯಿಕ ಕೃಷಿ ಮತ್ತು ಸಂಘಟಿತ ದುಡಿಮೆಯಂತಹ ಯೋಜನೆಗಳು
4) ಅಹಿಂಸಾ ತತ್ವದ ಮುಂದಾಳತ್ವ ಮತ್ತು ಜನಸ್ನೇಹಿ ಆಡಳಿತ



ಎಡದಿಂದ ಕಿರಣ್ ಗಾಜನೂರು, ರಾಕಲ್ ದಾಸ್, ಅರುಣ್ ಜೋಳದ ಕೂಡ್ಲಿಗಿ.

ನಾನು ಹಿಂದೆ ಪ್ರಸ್ತಾಪಿಸಿದಂತೆ ತ್ರಿಪುರ ಇಂದು ಇಷ್ಟು ದೊಡ್ಡ ಮಟ್ಟದಲ್ಲಿ ಸುದ್ದಿಯಲ್ಲಿರಲು ಅತಿ ಮುಖ್ಯ ಕಾರಣ ಅಲ್ಲಿನ ರಾಜಕೀಯ ಬದಲಾವಣೆಯ ಪರ್ವ(Political Transformation). ಯಾವ ಚರಿತ್ರೆ ಸಂಘರ್ಷ ಮತ್ತು ಹೋರಾಟದ ಚರಿತ್ರೆಯಾಗಿ-ತ್ತೋ ಆ ನೆಲವನ್ನು ಸೌಹಾರ್ದತೆ ಮತ್ತು ಸುಸ್ಥಿರ ಅಭಿವೃದ್ಧಿಯ ಕಡೆ(Sustainable Development) ಚಲಿಸುವಂತೆ ಮಾಡಿದ್ದು ಇಲ್ಲಿನ ಎಡಪಕ್ಷಗಳ ಯಶಸ್ಸಿನ ಗುಟ್ಟು ಅನ್ನಿಸುತ್ತದೆ. ಇಷ್ಟು ಗಟ್ಟಿಯಾಗಿ ಮತ್ತು ನಿರಂತರವಾಗಿ ಒಂದು ಸೈದ್ಧಾಂತಿಕತೆ ರಾಜ್ಯವನ್ನು ಆಳಬೇಕಾದರೆ ಅಲ್ಲಿನ ರಾಜಕೀಯ ನಾಯಕತ್ವ ಸೈದ್ಧಾಂತಿಕ ಬದ್ಧತೆಯನ್ನು ಹೊಂದಿರಲೇಬೇಕಾಗುತ್ತದೆ. ಈ ನಿಟ್ಟಿನಲ್ಲಿ ತ್ರಿಪುರ ಚುನಾವಣೆ ಕ್ರಮ ಮತ್ತು ಅಲ್ಲಿನ ಮಂತ್ರಿ, ಮುಖ್ಯಮಂತ್ರಿಗಳ ದಿನಚರಿ ನೋಡಿದರೆ ಆಶ್ಚರ್ಯವಾಗುತ್ತದೆ.

ಇಲ್ಲಿನ ಶಾಸಕ ಕೇವಲ 10 ರಿಂದ 12 ಸಾವಿರ ಹಣವನ್ನು ಖರ್ಚುಮಾಡಿ ವಿಧಾನ ಸಭಾ ಚುನಾವಣೆ ಗೆಲ್ಲುತ್ತಾನೆ, ಒಬ್ಬ ಮಂತ್ರಿಯಿಂದ ಹಿಡಿದು ವಿಧಾನ ಸಭೆಯ ಸಭಾಪತಿಯವರೆಗೆ ಎಲ್ಲರೂ ಪ್ರತಿ ದಿನ ತಮ್ಮ ಕ್ಷೇತ್ರಗಳ ಪಕ್ಷದ ಕಛೇರಿಯಲ್ಲಿ ಜನರಿಗೆ ಲಭ್ಯ ಇರುತ್ತಾರೆ. ಮುಖ್ಯಮಂತ್ರಿ, ಸಂಸದರು ಮತ್ತು ಸಂಪುಟದ ಬಹುತೇಕ ಮಂದಿ ಪ್ರತಿ ರಾತ್ರಿ 7.30 ರಿಂದ ತ್ರಿಪುರ ರಾಜಧಾನಿ ಅಗರ್ತಲಾದಲ್ಲಿನ ಪಕ್ಷದ ಕಛೇರಿಯಲ್ಲಿ ಸಾರ್ವಜನಿಕರಿಗೆ ಲಭ್ಯವಿರುತ್ತಾರೆ, ಎಂಬುದೇ ಅಲ್ಲಿನ ರಾಜಕೀಯ ನಾಯಕತ್ವಕ್ಕೆ ಇರುವ ಸೈದ್ಧಾಂತಿಕ ಬದ್ಧತೆಯನ್ನು ತೋರಿಸುತ್ತದೆ. ಈ ಪ್ರಗತಿಪರ ದೃಷ್ಟಿಕೋನ ಸಾಮಾನ್ಯವಾಗಿ ಆಳುವ ವರ್ಗ, ಸಮುದಾಯಗಳಲ್ಲಿ ಹುಟ್ಟುಹಾಕಬಹುದಾದ ಜಾತಿ/ಧರ್ಮ ಇತ್ಯಾದಿ ವಿಚ್ಛಿದ್ರಕಾರಕ ಚರ್ಚೆಗಳಿಗೆ ಅವಕಾಶವನ್ನೇ ನೀಡಿಲ್ಲ.

ಇನ್ನು ಅಭಿವೃದ್ಧಿಯ ವಿಚಾರಕ್ಕೆ ಬರುವುದಾದರೆ ತ್ರಿಪುರ ನೈಸರ್ಗಿಕ ಸಂಪನ್ಮೂಲಗಳ ಕೊರತೆ ಮತ್ತು ಕೇಂದ್ರದಲ್ಲಿ ಆಳುವ ಪಕ್ಷಗಳ ರಾಜಕೀಯ ತಂತ್ರ ಇತ್ಯಾದಿ ಹಲವು ಮಿತಿಗಳ ನಡುವೆಯೂ ಮಹತ್ವದ

ಪುಟ 15 ಕ್ಕೆ

ಭ್ರಷ್ಟಾಚಾರ ಇದೆಯಾ?

ನಾನು : ಸಾರ್ ಪಂಚಾಯಿತಿ ಮಟ್ಟದಲ್ಲಿ ನಿಮ್ಮಲ್ಲಿ ಭ್ರಷ್ಟಾಚಾರ ಇದೆಯಾ?

ಅವರು : ಕ್ಷಮಿಸಿ ಈ ಪ್ರಶ್ನೆಗೆ ನಾನು ಉತ್ತರಿಸಿದರೆ ತಪ್ಪಾಗುತ್ತದೆ ತಾವು ಹೊರಗಿನ ಜನರನ್ನು ಮಾತನಾಡಿಸಿ ಅನ್ಯತಾ ಭಾವಿಸಬೇಡಿ... (ಈ ಕಾನ್ಫಿಡೆನ್ಸ್ ಆಶ್ಚರ್ಯ ಆಯಿತು)

ಇದು ನಾನು ಮಾತನಾಡಿಸಿದ ಬಹುಪಾಲು ತ್ರಿಪುರ ಪಂಚಾಯಿತಿ ಮಟ್ಟದ ಅಧಿಕಾರಿ ಮತ್ತು ಜನಪ್ರತಿನಿಧಿಗಳ ಮನಸ್ಥಿತಿ...

****

ಪಂಚಾಯಿತಿ ರಾಷ್ಟ್ರೀಯ ಪ್ರಶಸ್ತಿ ವಿಜೇತ

ನನ್ನ ಮತ್ತು ಅರುಣ್ ಮಧ್ಯ ಇರುವ ವ್ಯಕ್ತಿಯ ಹೆಸರು ರಾಕಲ್ ದಾಸ್ ಪರಿಶಿಷ್ಟ ಜಾತಿಗೆ ಸೇರಿದ ಇವರು ತ್ರಿಪುರಾದ ಜಿರಾನಿಯಾ ಪಂಚಾಯಿತಿಯ ಅಧ್ಯಕ್ಷ ಆಗಿದ್ದಾರೆ. ಈ ಬಾರಿಯ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದ ಕಾರಣಕ್ಕೆ ಈ ಪಂಚಾಯಿತಿ ರಾಷ್ಟ್ರೀಯ ಪ್ರಶಸ್ತಿ ಪಡೆದಿದೆ.

ನವ ದೆಹಲಿಯಲ್ಲಿ ನಡೆಯಲಿದ್ದ ಪ್ರಶಸ್ತಿ ಪ್ರಧಾನ ಸಮಾರಂಭಕ್ಕೆ ಇವರನ್ನು ಊರಿನ ಜನ ಹೊಸ ಬಟ್ಟೆ, ಶೂ ಇತ್ಯಾದಿ ಕೊಟ್ಟು ರೈಲು ಹತ್ತಿಸಿದ್ದಾರೆ.

ಇವರನ್ನು ನೋಡಿ ಒಮ್ಮೆ ತಮ್ಮ ಕಾರಿಗೆ ಪಂಚಾಯಿತಿ ಅಧ್ಯಕ್ಷ ಎಂದು ಅನಧಿಕೃತ ಬೋರ್ಡ್ ತಗುಲಿಸಿಕೊಂಡು ತಿರುಗುವ ಮಂದಿ ನೆನಪಾಗಿ ನನಗೆ ನಾಚಿಕೆ ಆಯಿತು....

ಸಹಕಾರಿ ಕೃಷಿಯ ಶಕ್ತಿಯ ಅನಾವರಣ

ತ್ರಿಪುರಾದ ದುರ್ಗಾಬಾರಿ ಸಹಕಾರಿ ಟೀ ಸಂಘ ಸುಮಾರು 1136 ಎಕರೆಗಳಲ್ಲಿ ಟೀ ಸೊಪ್ಪು ಬೆಳೆದು ಅದನ್ನು ಸಂಸ್ಕರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದ್ದಾರೆ. ಇಲ್ಲಿ ಯಾರೂ ಮಾಲೀಕರಿಲ್ಲ ಬದಲಾಗಿ ಸಹಕಾರಿ ತತ್ವದಲ್ಲಿ ಕೃಷಿ ನಡೆಯುತ್ತಿದೆ ಕಳೆದ ವರ್ಷ ಇವರು ಸುಮಾರು 12 ಲಕ್ಷ ರೂಪಾಯಿಗಳಷ್ಟು ಹಣವನ್ನು ಆದಾಯ ತೆರಿಗೆ ಕಟ್ಟಿದ್ದಾರೆ...





ಆಶ್ಚರ್ಯಕ್ಕೆ ಕಾರಣ ಬೇಕೆ...!

ತ್ರಿಪುರದಿಂದ ಪ್ರತಿನಿಧಿಸುವ ಲೋಕಸಭಾ ಸದಸ್ಯ ಕಾಮ್ರೇಡ್. ಶಂಕರ್ ಪ್ರಸಾದ್ ದತ್ತ ಅವರು ಸಂಜೆ ಸಾರ್ವಜನಿಕ ಗ್ರಂಥಾಲಯದಲ್ಲಿ ಸಾಮಾನ್ಯರಂತೆ ಓದುತ್ತಿದ್ದಾರೆ....

ತ್ರಿಪುರಾದ ಮೊದಲ ಕಾರ್ಖಾನೆ...

ತ್ರಿಪುರ ತನ್ನ ಭೌಗೋಳಿಕತೆಯ ಕಾರಣಕ್ಕೆ ಸಾಕಷ್ಟು ಕಷ್ಟಗಳನ್ನು ಎದುರಿಸುತ್ತಿದೆ. ಇಷ್ಟರ ನಡುವೆಯೂ ಉದ್ಯೋಗ ಸೃಷ್ಟಿಯ ಕಾರಣಕ್ಕೆ ಇಲ್ಲಿರುವ ಬಿದಿರನ್ನು ಬಳಸಿ ಉತ್ಪನ್ನಗಳನ್ನು ತಯಾರಿಸುವ ಕಾರ್ಖಾನೆ ರೂಪಿಸಿದೆ...



JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**